*ಸನ್ಮಾನ್ಯ ಸಭಾಧ್ಯಕ್ಷರೇ,*

1. ನಾನು ಕರ್ನಾಟಕ ಸರ್ಕಾರದ 2007-08ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲು ಹರ್ಷಿಸುತ್ತೇನೆ.

2. ದೇಶದಲ್ಲಿ ಸಮ್ಮಿಶ್ರ ಸರ್ಕಾರದ ಪರಿಕಲ್ಪನೆ ಗಟ್ಟಿಗೊಂಡಿದೆ. ಕರ್ನಾಟಕದಲ್ಲಿ ಭಾರತೀಯ ಜನತಾ ಪಾರ್ಟಿ ಮತ್ತು ಜಾತ್ಯಾತೀತ ಜನತಾದಳದ ಮೈತ್ರಿ ಸರ್ಕಾರ **"ಕರ್ನಾಟಕ ಅಭಿವೃದ್ಧಿ ರಂಗ"** ಒಂದು ವರ್ಷದ ಅಧಿಕಾರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಮುನ್ನಡೆದಿದೆ. ರಾಜ್ಯದಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಚುರುಕುಗೊಳಿಸುವಲ್ಲಿ ರಾಜಕೀಯ ಸಿದ್ಧಾಂತಗಳ ಭಿನ್ನತೆಯನ್ನು ಬದಿಗಿರಿಸಿ ಏಕೋಭಾವದಿಂದ ಜನರಿಗೆ ವಚನವಿತ್ತಿದ್ದಂತೆ ದುಡಿಯುತ್ತಿದ್ದೇವೆ. ಈ ಬದ್ಧತೆ ಮುಂದೆಯೂ ಮುಂದುವರಿಯಲಿದೆ. ಎರಡೂ ಪಕ್ಷಗಳ ಸಹಮತದಲ್ಲಿ ಸಿದ್ಧಪಡಿಸಿರುವ "ಸಾಮಾನ್ಯ ಕನಿಷ್ಠ ಕಾರ್ಯಕ್ರಮ"ವನ್ನು ಮಾದರಿಯನ್ನಾಗಿರಿಸಿಕೊಂಡು ನಾವು ಆಡಳಿತ ನಡೆಸುತ್ತಿದ್ದೇವೆ. 'ಮೈತ್ರಿ ಧರ್ಮ' ವಿಧಿಸುವ 'ಲಕ್ಷ್ಮಣ ರೇಖೆ' ಯನ್ನು ದಾಟದೆ ನಾಡಿನ ಸರ್ವಾಂಗೀಣ ಅಭಿವೃದ್ಧಿಯ ಗುರಿ ಸಾಧಿಸಲು ಶ್ರಮಿಸುತ್ತಿದ್ದೇವೆ.

*ಹಾಲು ಹಳ್ಳ ಹರಿಯಲಿ*
*ಬೆಣ್ಣೆ ಬೆಟ್ಟವಾಗಲಿ!*
*ಜೇನು ಮಳೆಯು ಸುರಿಯಲಿ.*
*ತೊಟ್ಟಿಲೊಲಿದು ತೂಗಲಿ.*
*ಮುನಿದು ಸಮರ ನರಬಲಿ*
*ನರರು ನರರ ನಂಬಲಿ*
*ಸ್ವಾಮಿಯಮೃತ ಕೃಪೆಯಲಿ*
*ಶಾಂತಿ ಜಗವ ತುಂಬಲಿ*

*ರಾಷ್ಟ್ರಕವಿ ಕುವೆಂಪು ಅವರ ಕವನದ ಈ ಸಾಲುಗಳು ಧ್ವನಿಸುವ ಅರ್ಥ ನಮ್ಮ ಮೈತ್ರಿ ಸರ್ಕಾರದ ಸದಾಶಯಗಳಾಗಿವೆ. ಅವರ ಸಂದೇಶ ನಮಗೆ ಅನುಗಾಲ ಅನುಕರಣೀಯ ಆದರ್ಶವಾಗಿದೆ.*

3. ಜನರ ನಡುವೆ ಕೆಲಸ ಮಾಡುವ ಮತ್ತು ಜನಾಭಿಪ್ರಾಯಗಳಿಗೆ ಸ್ಪಂದಿಸುವ ಸರ್ಕಾರ ಇದು ಎಂಬುದು ಕಳೆದೊಂದು ವರ್ಷದಲ್ಲಿ ನಿರೂಪಿತವಾಗಿದೆ. ಸರ್ಕಾರವನ್ನು ನಾಡ ಬಾಂಧವರ ಮನೆ ಬಾಗಿಲುಗಳಿಗೆ ಕೊಂಡೊಯ್ದ ಶ್ರೇಯಸ್ಸು ನಮ್ಮದು. ಕೇವಲ ರಾಜಧಾನಿಗೆ ಸೀಮಿತವಾಗದೆ, ರಾಜ್ಯದ ಉದ್ದಗಲಕ್ಕೂ ಸರ್ಕಾರದ ಅಸ್ತಿತ್ವ ಮತ್ತು ಕಾರ್ಯಶೈಲಿ ಜನಾನುಭವಕ್ಕೆ ಬರುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂದು ಹೇಳಲು ಹೆಮ್ಮೆ ಪಡುತ್ತೇನೆ. ಸಮ್ಮಿಶ್ರ ಸರ್ಕಾರಗಳಿಗೆ ಕರ್ನಾಟಕದ ಮೈತ್ರಿ ಸರ್ಕಾರ ಮಾದರಿಯಾಗುವಂತೆ ಹೊಸ ದೃಷ್ಟಿಕೋನ, ನವಚಿಂತನೆ ಮತ್ತು ಹೊಸ ಕಾರ್ಯಕ್ರಮಗಳಿಗೆ ನಾಂದಿ ಹಾಡಲಾಗಿದೆ.

4. ಇದು ನಮ್ಮ ಮೈತ್ರಿ ಸರ್ಕಾರದ ಎರಡನೆಯ ಮುಂಗಡ ಪತ್ರ. ಮೊದಲ ಮುಂಗಡ ಪತ್ರದಲ್ಲಿ ಕೊಟ್ಟ ಮಾತಿನಂತೆ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ನೀಲ ನಕ್ಷೆ ಸಿದ್ಧಪಡಿಸಿ ಅನುಷ್ಠಾನಕ್ಕೆ ಮುಂದಾಗಿದ್ದೇವೆ. ಸ್ವಚ್ಛ ಮತ್ತು ದಕ್ಷ ಆಡಳಿತದ ಮೂಲಕ "ಸರ್ವರಿಗೂ ಸಮಪಾಲು ಮತ್ತು ಸಮಬಾಳನ್ನೀಯುವ" ದಿಕ್ಕಿನಲ್ಲಿ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ ಮತ್ತೂ ಕೆಲವು ಯೋಜನೆಗಳು ಜಾರಿಗೊಳ್ಳುತ್ತಿವೆ. ರೈತರು, ಕೃಷಿ ಕಾರ್ಮಿಕರು, ಪರಿಶಿಷ್ಟರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಯುವಕರೂ ಸೇರಿ ಸಮಾಜದ ಎಲ್ಲಾ ಸ್ಥರಗಳ ಜನರ ಆಶಯಗಳಿಗೆ ಸ್ಪಂದಿಸಲು ರೂಪಿಸಲಾಗಿರುವ ಕಾರ್ಯಕ್ರಮಗಳು ಸಾಮಾಜಿಕ ನ್ಯಾಯದ ನೆಲೆಯಲ್ಲಿ ಸಿದ್ಧಗೊಂಡಿವೆ.

5. ಕರ್ನಾಟಕವನ್ನು ಭಾರತದ ರಾಜ್ಯಗಳ ಪೈಕಿ ಅಭಿವೃದ್ಧಿ ಹೊಂದಿದ ಮುಂಚೂಣಿ ರಾಜ್ಯವನ್ನಾಗಿ ಬೆಳೆಸಲು ನಾವು ಕಂಡುಕೊಂಡ ಹಾದಿ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ವಲಯಗಳಲ್ಲಿ ಸಮತೋಲನದ ಬೆಳವಣಿಗೆ ಸಾಧಿಸುವುದು. ಈ ದಿಶೆಯಲ್ಲಿ ರಾಜ್ಯದ ಮೂಲಭೂತ ಸೌಕರ್ಯಗಳ ಸುಧಾರಣೆ, ಮಾನವ ಸಂಪನ್ಮೂಲದ ಸದ್ಬಳಕೆ, ಕೌಶಲ್ಯವೃದ್ಧಿ ಹಾಗೂ ಉದ್ಯೋಗ ಸೃಜನೆಗೆ ಒತ್ತು ನೀಡಲಾಗಿದೆ. ನಮ್ಮ ಧ್ಯೇಯ ಸಾಧನೆಗೆ ಪೂರಕವಾಗಿ ಸಂಪನ್ಮೂಲ ಸಂಗ್ರಹಣೆ ಮತ್ತು ಬಂಡವಾಳ ಹೂಡಿಕೆ ಹೆಚ್ಚಿಸಲು ಶ್ರಮಿಸಲಾಗಿದೆ.

ಅಲ್ಲಮ ಪ್ರಭುಗಳು ನುಡಿದಂತೆ

*"ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ*
*ನಿಂದ ಹೆಜ್ಜೆಯನರಿಯಬಾರದು"*

*ಅಂದರೆ ನಮ್ಮ ಹಿಂದಿನ ಹೆಜ್ಜೆಗಳನ್ನು ವಿಮರ್ಶಿಸದೆ ವರ್ತಮಾನವನ್ನು ಅರ್ಥೈಸುವುದು ಸಮರ್ಪಕವಲ್ಲ. ಭೂತ ಮತ್ತು ವರ್ತಮಾನಗಳ ಸಂಬಂಧವನ್ನು ವಿಶ್ಲೇಷಿಸಿಕೊಂಡು ಮುನ್ನಡೆಯುವ ವಿವೇಕ ನಮಗಿರಬೇಕು.*

6. ಈ ಹಿನ್ನೆಲೆಯಲ್ಲಿ ನಾನು ಕಳೆದ ಮುಂಗಡ ಪತ್ರದಲ್ಲಿ ಮಂಡಿಸಿದ್ದ ಯೋಜನೆಗಳ ಸಂಕ್ಷಿಪ್ತ ವಿಶ್ಲೇಷಣೆ ನಂತರ ವರ್ತಮಾನದ ಮುಂಗಡಪತ್ರದಲ್ಲಿ ಮೂಡಿಬರುವ ಕಾರ್ಯಕ್ರಮಗಳ ಮೇಲೆ ಬೆಳಕು ಹರಿಸಲು ಪ್ರಯತ್ನಿಸಿದ್ದೇನೆ.

7. ಮಾನವ ಸಂಪನ್ಮೂಲದ ಗುಣಾತ್ಮಕ ಬೆಳವಣಿಗೆ ಹಾಗೂ ಕೌಶಲ್ಯವೃದ್ಧಿಸುವ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಸರ್ಕಾರಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಉದಾಹರಣೆಗೆ ಕಳೆದ ಒಂದೇ ವರ್ಷದಲ್ಲಿ 716 ಸರ್ಕಾರಿ ಪ್ರಾಥಮಿಕ ಶಾಲೆಗಳು, 500 ಪ್ರೌಢ ಶಾಲೆಗಳು, 200 ಪದವಿಪೂರ್ವ ಕಾಲೇಜುಗಳು ಮತ್ತು 15 ಪ್ರಥಮ

ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು ಇವುಗಳಲ್ಲಿ ಬಹುತೇಕ ಕಾರ್ಯಾರಂಭ ಮಾಡಿವೆ. 104 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಆಧುನೀಕರಣಗೊಳಿಸಲಾಗಿದೆ. ಏಳು ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು 32 ಹೊಸ ಶಾಖೆಗಳನ್ನು ಪ್ರಾರಂಭಿಸಲಾಗಿದೆ. ಹಾಗೆಯೇ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಭಾಗ್ಯಲಕ್ಷ್ಮಿ, ಭದ್ರತಾ ಠೇವಣಿ ಯೋಜನೆ, ಉಚಿತ ಭಾಗ್ಯರಥ ಬೈಸಿಕಲ್ ಯೋಜನೆ ಮತ್ತು ಪ್ರತಿಭಾವಂತ ಹೆಣ್ಣು ಮಕ್ಕಳಿಗೆ ವೃತ್ತಿ ಶಿಕ್ಷಣದ ಪೂರ್ಣ ವೆಚ್ಚ ಭರಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ.

8. ರೈತರಿಗೆ ಶೇ.4 ರ ಬಡ್ಡಿ ದರದಲ್ಲಿ ಸಾಲ, ಶೇ.75 ರ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಹಾಗೂ ಹನಿ ನೀರಾವರಿ ಉಪಕರಣ ಮತ್ತು ಶೇ.50 ರ ಸಹಾಯ ಧನದಲ್ಲಿ ಎತ್ತು-ಗಾಡಿ ವಿತರಿಸುವ ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆ. ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿದ್ದ 39 ನೀರಾವರಿ ಯೋಜನೆಗಳ ಪೈಕಿ 35 ಯೋಜನೆಗಳು ಪೂರ್ಣಗೊಂಡಿವೆ. ಉಳಿದ ನಾಲ್ಕು ಯೋಜನೆಗಳು ಸಧ್ಯದಲ್ಲೇ ಪೂರ್ಣಗೊಳ್ಳಲಿವೆ.

9. **"ಹಳ್ಳಿಗಳ ಸಮಗ್ರ ಅಭಿವೃದ್ಧಿಯಿಂದ ಮಾತ್ರ ದೇಶದ ಸರ್ವಾಂಗೀಣ ಬೆಳವಣಿಗೆ ಸಾಧ್ಯ"** ಎಂದು ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸಿದ್ದರು. ನಗರಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಗ್ರಾಮಗಳಲ್ಲೂ ದೊರೆಯಬೇಕು ಎಂಬುದು ರಾಷ್ಟ್ರಪತಿ ಡಾ: ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಆಶಯ. ಈ ಅಭಿಪ್ರಾಯಗಳಿಂದ ಪ್ರೇರಿತವಾಗಿರುವ ನಮ್ಮ ಸರ್ಕಾರ ಪ್ರತಿವರ್ಷ ಒಂದು ಸಾವಿರ ಗ್ರಾಮಗಳ ಸಮಗ್ರ ಅಭಿವೃದ್ಧಿಯ ಕನಸಿನೊಂದಿಗೆ **'ಸುವರ್ಣ ಗ್ರಾಮೋದಯ ಯೋಜನೆ'** ಪ್ರಾರಂಭಿಸಿದೆ. ಹಾಗೆಯೇ ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಲು ಸುವರ್ಣ ಕಾಯಕ ಯೋಜನೆ ಅನುಷ್ಠಾನಗೊಳಿಸಿದೆ.

ಅತ್ಯಲ್ಪ ಕಾಲದಲ್ಲಿ ಯಶಸ್ಸು ಮತ್ತು ಜನಪ್ರಿಯತೆ ಈ ಯೋಜನೆಗೆ ದೊರೆತಿದೆ. ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಇದು ನಮ್ಮ ಸರ್ಕಾರದ ಅತ್ಯಂತ ಪರಿಣಾಮಕಾರಿ ಪ್ರಯತ್ನವಾಗಿದೆ.

10. ಏಕೀಕೃತ ಕರ್ನಾಟಕದ ಸುವರ್ಣ ಮಹೋತ್ಸವವನ್ನು ವೈಭವಯುತ ಹಾಗೂ ಅರ್ಥಪೂರ್ಣವಾಗಿ ಆಚರಿಸಿದ ನಮ್ಮ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಗಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸಿದೆ.

11. ಅಭಿವೃದ್ಧಿ ಪಥದಲ್ಲಿ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಮೈತ್ರಿ ಸರ್ಕಾರ ಸುವರ್ಣ ಕರ್ನಾಟಕ ವರ್ಷಾಚರಣೆಯ ನೆನಪಿನಲ್ಲಿ ನಾಡಿನ ಸಮಗ್ರ ಅಭಿವೃದ್ಧಿಗೆ ಸಮೃದ್ಧ ಕಾರ್ಯಕ್ರಮ ನೀಡಿದೆ ಎಂದು ಹೇಳಲು ಹರ್ಷವಾಗುತ್ತದೆ. ಕಳೆದ ವರ್ಷ ಪ್ರಾರಂಭಿಸಿದ ಹೊಸ ಯೋಜನೆಗಳಲ್ಲಿ ಅನುಷ್ಠಾನದ ವಿವಿಧ ಹಂತಗಳಲ್ಲಿರುವ ಯೋಜನೆಗಳನ್ನು ಈ ವರ್ಷ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗುವುದು.

12. ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ನಾಡ ಜನರ ಅಭಿಪ್ರಾಯದಂತೆ ಕಾನೂನು ಮತ್ತು ನೀರಾವರಿ ತಜ್ಞರ ಸಲಹೆ ಪಡೆದು, ಸರ್ವ ಪಕ್ಷಗಳ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು ಕ್ರಮ ಕೈಗೊಳ್ಳುವಲ್ಲಿ ಎಚ್ಚರಿಕೆಯಿಂದ ಮುಂದಡಿ ಇರಿಸಿದ್ದೇವೆ.

13. ಸಮಸ್ತ ನಾಡ ಬಾಂಧವರಿಗೆ ಶಾಂತಿ, ಸಮೃದ್ಧಿ ಮತ್ತು ಸಂತೃಪ್ತಿ ತರಲು ಎಲ್ಲಾ ಪ್ರಯತ್ನಗಳನ್ನು ನಮ್ಮ ಸರ್ಕಾರ ಮುಂದುವರಿಸುತ್ತದೆ.

ನಮ್ಮ ಸರ್ಕಾರದ ಆದ್ಯತೆಗಳು ಇಂತಿವೆ:

- ಅಭಿವೃದ್ಧಿಯ ವೇಗೋತ್ಕರ್ಷ
- ಸಮತೋಲನದ ಅಭಿವೃದ್ಧಿ
- ಸಾಮಾಜಿಕ ನ್ಯಾಯ
- ಸಾಮಾಜಿಕ ಸಾಮರಸ್ಯ
- ಸಾಮಾಜಿಕ ಭದ್ರತೆ
- ಆಹಾರ ಭದ್ರತೆ
- ಮಾನವ ಸಂಪನ್ಮೂಲದ ಸದ್ಬಳಕೆಗೆ ಕೌಶಲ್ಯಾಭಿವೃದ್ಧಿ
- ಉದ್ಯೋಗಾವಕಾಶಗಳಲ್ಲಿ ಹೆಚ್ಚಳ
- ನಾಡಿನ ನೆಲ-ಜಲ, ಭಾಷೆ ಮತ್ತು ಸಂಸ್ಕೃತಿಗಳ ಸಂರಕ್ಷಣೆ

**ಆರ್ಥಿಕ ಪರಿಸ್ಥಿತಿ**

14. ಕರ್ನಾಟಕದ ಆರ್ಥಿಕತೆಯು 2006-07ನೇ ಸಾಲಿನಲ್ಲಿ ಸಾಮಾನ್ಯ ಬೆಳವಣಿಗೆ ಕಂಡಿದೆ. ರಾಜ್ಯದ ಸ್ಥೂಲ ಆರ್ಥಿಕ ಮೂಲ ಅಂಶಗಳು ಶಕ್ತಿ ತುಂಬಿಕೊಂಡಿವೆ. 2006-07ನೇ ಸಾಲಿನ ಮುಂಗಡ ಅಂದಾಜುಗಳು 1,94,009 ಕೋಟಿ ರೂ.ಗಳ ಒಟ್ಟು ಆಂತರಿಕ ಉತ್ಪನ್ನವನ್ನು (ಜಿಎಸ್‌ಡಿಪಿ) ಬಿಂಬಿಸುತ್ತಿವೆ. ಜಿಎಸ್‌ಡಿಪಿಗೆ ಪ್ರಾಥಮಿಕ ವಲಯವು ಶೇ.19.2 ಮತ್ತು ದ್ವಿತೀಯ ವಲಯವು ಶೇ.26.13 ಹಾಗೂ ಪೂರಕ ವಲಯವು ಶೇ.54.56 ರ ಕೊಡುಗೆ ನೀಡುವ ನಿರೀಕ್ಷೆಯಿದೆ. ಪ್ರಾಥಮಿಕ, ದ್ವಿತಿಯ ಮತ್ತು ಪೂರಕವಲಯಗಳು ಕ್ರಮವಾಗಿ ಶೇ.2, ಶೇ.9.9 ಮತ್ತು ಶೇ.9.2 ರ ವಾಸ್ತವಿಕ ದರದಲ್ಲಿ ಬೆಳೆಯಲಿವೆ. 2006-07ನೇ ಸಾಲಿಗೆ ಒಟ್ಟಾರೆ ಶೇ.13 ರ ಸಾಂಕೇತಿಕ ಬೆಳವಣಿಗೆಯನ್ನು ಮತ್ತು ಶೇ.8 ರ

ವಾಸ್ತವಿಕ ಬೆಳವಣಿಗೆಯನ್ನು ದಾಖಲಿಸಲಿದೆ. ಇದು 2005-06ರ ಶೇ.7.8 ರ ಬೆಳವಣಿಗೆಗೆ ಹೋಲಿಸಿದರೆ ತುಸು ಹೆಚ್ಚಿನ ಬೆಳವಣಿಗೆಯಾಗಿರುತ್ತದೆ. ಕೃಷಿ ವಲಯದಲ್ಲಿನ ವಾಸ್ತವಿಕ ಬೆಳವಣಿಗೆಯು ಶೇ.2 ರಷ್ಟಾಗಿದ್ದು ತೃಪ್ತಿದಾಯಕವಾಗಿರುವುದಿಲ್ಲ.

15. ರಾಜ್ಯದಲ್ಲಿ ಸೇವಾ ವಲಯವು ಅತ್ಯಧಿಕ ಮಟ್ಟದ ಹೂಡಿಕೆಯನ್ನು ಆಕರ್ಷಿಸಿದೆ. ಉತ್ಪಾದನಾ ವಲಯವು ಪುನಶ್ಚೇತನಗೊಂಡಿದ್ದು, 2006-07ನೇ ಸಾಲಿನಲ್ಲಿ 1,01,280.23 ಕೋಟಿ ರೂ.ಗಳ ಹೂಡಿಕೆಯನ್ನು ಆಕರ್ಷಿಸಿದೆ. ಆದರೆ, ಕೃಷಿವಲಯವು ಮಾತ್ರ ಯಾವುದೇ ಪ್ರಮುಖ ಹೂಡಿಕೆಯನ್ನು ಆಕರ್ಷಿಸಿಲ್ಲ. ಈ ಹಿನ್ನೆಲೆಯಲ್ಲಿ ನಾವು ಕೃಷಿವಲಯಕ್ಕೆ ಹೆಚ್ಚಿನ ಬಂಡವಾಳ ಹರಿಸಲು ಬೆಂಬಲ ನೀಡಲೇಬೇಕು. ಇದರ ಜೊತೆಗೆ ದ್ವಿತೀಯ ಮತ್ತು ಪೂರಕ ವಲಯಗಳೂ ಸಹ ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವಂತೆ ನೋಡಿಕೊಳ್ಳಬೇಕಾಗಿದೆ.

16. ಕೃಷಿ ನಮ್ಮ ರಾಜ್ಯದ ಗ್ರಾಮೀಣ ಜನತೆಯ ಮುಖ್ಯ ಕಸುಬಾಗಿದೆ. ಜಿಎಸ್‌ಡಿಪಿಗೆ ಕೃಷಿ ವಲಯದ ಕೊಡುಗೆ ಶೇ.19.2 ರಷ್ಟಕ್ಕೆ ಇಳಿಕೆಯಾಗಿದ್ದರೂ ಸಹ ರಾಜ್ಯದ ಶೇ.64 ರಷ್ಟು ಜನಸಮುದಾಯವು ಜೀವನ ನಿರ್ವಹಣೆಗೆ ಕೃಷಿ ವಲಯವನ್ನೇ ಅವಲಂಬಿಸಿದೆ. ನಿಜ ಅರ್ಥದಲ್ಲಿ ಹೇಳುವುದಾದರೆ, ಕೃಷಿ ಅವಲಂಬಿತ ಜನಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಕೃಷಿ ವಲಯದಲ್ಲಿನ ನಿರಾಶದಾಯಕ ಬೆಳವಣಿಗೆ ಗ್ರಾಮೀಣ ಪ್ರದೇಶದ ಜನರ ಜೀವನ ಗುಣಮಟ್ಟಕ್ಕೆ ದಕ್ಕೆ ತಂದಿದೆ.

17. ಇತ್ತೀಚಿನ ಹಣದುಬ್ಬರ ಏರಿಕೆಯು ಉತ್ಪಾದನಾ ವೆಚ್ಚ ಏರಿಕೆಗೆ ದಾರಿಮಾಡಿದೆ. ಈ ಹಿನ್ನೆಲೆಯಲ್ಲಿ ವೃದ್ಧಿಯನ್ನು ಕುಗ್ಗಿಸದಂತೆ ಹಣದುಬ್ಬರ ನಿಯಂತ್ರಿಸುವುದು ಈಗ ನಮ್ಮ ಮುಂದಿರುವ ಸವಾಲಾಗಿದೆ. ಹಣದುಬ್ಬರ ನಿಯಂತ್ರಿಸಲು ಅಧಿಕ ಬೇಡಿಕೆಯನ್ನು ಹತ್ತಿಕ್ಕುವ ಜೊತೆ ಜೊತೆಯಲ್ಲೇ

ಮಾರುಕಟ್ಟೆ ಅಗತ್ಯವನ್ನು ಈಡೇರಿಸಲು ಪೂರೈಕೆ ವ್ಯವಸ್ಥೆಯನ್ನು ಸಜ್ಜುಗೊಳಿಸುವುದು ಅಗತ್ಯವಾಗಿದೆ.

**ರಾಜ್ಯ ಹಣಕಾಸು:**

18. ರಾಜ್ಯದಲ್ಲಿ 2006-07ನೇ ಸಾಲಿನಲ್ಲಿ ವ್ಯಾಟ್ ತೆರಿಗೆ ಸಂಗ್ರಹಗಳು ಶೇ. 24 ರಷ್ಟು ಬೆಳೆದಿವೆ. ವ್ಯಾಟ್‌ನಿಂದ 2006-07ನೇ ಸಾಲಿನಲ್ಲಿ 1580 ಕೋಟಿ ರೂ.ಗಳ ತೆರಿಗೆ ನಷ್ಟವಾಗುತ್ತದೆ ಎಂದು ಅಂದಾಜಿಸಲಾಗಿತ್ತಾದರೂ ವಾಸ್ತವದಲ್ಲಿ ನಮಗೆ 2006-07ನೇ ಸಾಲಿನಲ್ಲಿ 730 ಕೋಟಿ ರೂ.ಗಳ ನಷ್ಟವಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರದ ಪರಿಹಾರ ಸೂತ್ರದಂತೆ ನಾವು ಕೇಂದ್ರದಿಂದ ಶೇ.75 ರಷ್ಟು ಅಂದರೆ 390 ಕೋಟಿ ರೂ.ಗಳ ವ್ಯಾಟ್ ನಷ್ಟ ಪರಿಹಾರ ಧನವನ್ನು ಸ್ವೀಕರಿಸಿದ್ದೇವೆ. ವ್ಯಾಟ್ ಆಡಳಿತವನ್ನು ನಾವು ಸರಳ, ಪಾರದರ್ಶಕ ಮತ್ತು ಗ್ರಾಹಕ ಸ್ನೇಹಿಯಾಗಿರುವಂತೆ ಮಾಡಲು ಪ್ರಯತ್ನಿಸಿದ್ದೇವೆ. ವ್ಯಾಟ್ ಆಡಳಿತ ದಕ್ಷತೆಯನ್ನು ಹೆಚ್ಚಿಸಲು ವಾಣಿಜ್ಯ ತೆರಿಗೆ ಇಲಾಖೆಯನ್ನು ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ಗಣಕೀಕರಿಸಲಾಗುತ್ತಿದೆ.

19. ಅಬಕಾರಿ ತೆರಿಗೆ ಸಂಗ್ರಹಣೆಯಲ್ಲಿ ನಮ್ಮದು ಗುರಿ ಮೀರಿದ ಸಾಧನೆಯಾಗಿದೆ. 2006-07ನೇ ಸಾಲಿನಲ್ಲಿ ನಾವು ಭಾರತೀಯ ಮದ್ಯ ಉತ್ಪನ್ನಗಳ ಸಗಟು ಮಾರಾಟ ಪದ್ಧತಿಯನ್ನು ತೆಗೆದುಹಾಕಿದೆವು. ಇದು ರಾಜ್ಯಕ್ಕೆ ಒಳ್ಳೆಯದನ್ನೇ ತಂದಿದೆ. ಅಬಕಾರಿ ತೆರಿಗೆಯಲ್ಲಿ 4100 ಕೋಟಿ ರೂ.ಗಳ ಆಯವ್ಯಯ ಗುರಿಗೆ ಎದುರಾಗಿ 4536 ಕೋಟಿ ರೂ.ಗಳು ಸಂಗ್ರಹಣೆಯಾಗುವ ಸಾಧ್ಯತೆಯಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಂಗ್ರಹಣೆ ಕೂಡ ಉತ್ಸಾಹದಾಯಕವಾಗಿದೆ. 2766 ಕೋಟಿ ರೂ.ಗಳ ಆಯವ್ಯಯ ಗುರಿಗೆ ಎದುರಾಗಿ 2006-07 ರ ಕೊನೆಗೆ ಈ ಮೂಲದಿಂದ 3331 ಕೋಟಿ ರೂ.ಗಳ ಸಂಗ್ರಹಣೆಯನ್ನು

ನಿರೀಕ್ಷಿಸಲಾಗಿದೆ. ಸಾರಿಗೆ ವಲಯದಲ್ಲಿ ಕೂಡ ನಾವು ಆಯವ್ಯಯ ಗುರಿ ಸಾಧಿಸಲಿದ್ದೇವೆ.

20. ರಾಜ್ಯದ ತೆರಿಗೆಯೇತರ ರಾಜಸ್ವಗಳು ಕಳೆದ ಹತ್ತು ವರ್ಷಗಳಿಂದ ಹೆಚ್ಚು ಕಡಿಮೆ ಸ್ಥಗಿತಗೊಂಡಿವೆ. ನೀರು ದರಗಳ ವಸೂಲಿ ಮತ್ತು ಅರಣ್ಯ ಉತ್ಪನ್ನಗಳ ಮಾರಾಟದ ರಾಜಸ್ವಗಳು ಇಳಿಕೆ ಪ್ರವೃತ್ತಿಯನ್ನು ತೋರಿಸುತ್ತಿವೆ. ಗಣಿ ವಲಯವು ಹಿಂದೆಂದೂ ಕಾಣದ ಭಾರೀ ವಹಿವಾಟನ್ನು ನಡೆಸಿದ್ದರೂ ಸಹ ಗಣಿ ವಹಿವಾಟಿಗೆ ಅನುಗುಣವಾಗಿ ರಾಜ್ಯದ ಬೊಕ್ಕಸಕ್ಕೆ ಹಣ ಹರಿದು ಬರುತ್ತಿಲ್ಲ. ಖನಿಜಗಳ ಮೌಲ್ಯದಲ್ಲಿ ಅಪಾರ ಪ್ರಮಾಣದ ಏರಿಕೆಯಾಗಿದ್ದರೂ ರಾಜಸ್ವದರ ಕಡಿಮೆ ದರದಲ್ಲಿ ನಿಗದಿಯಾಗಿರುವುದರಿಂದ ರಾಜ್ಯಕ್ಕೆ ಹೆಚ್ಚಿನ ರಾಜಸ್ವ ದೊರೆಯುತ್ತಿಲ್ಲ. ಬಳಕೆದಾರರ ಶುಲ್ಕವನ್ನು ನಾವು ಹಲವಾರು ವರ್ಷಗಳಿಂದ ಪರಿಷ್ಕರಿಸಿಲ್ಲ. ಈ ಹಿನ್ನೆಲೆಯಲ್ಲಿ ಬಳಕೆದಾರರ ಶುಲ್ಕ ಏರಿಸಿ ಅದನ್ನು ಕಟ್ಟುನಿಟ್ಟಾಗಿ ಸಂಗ್ರಹಿಸಲು ಇದು ಸಕಾಲ.

21. ಸಾಲ ನಿರ್ವಹಣೆ ವಿಷಯದಲ್ಲಿ ಕರ್ನಾಟಕವು ಉತ್ತಮ ಸ್ಥಾನದಲ್ಲಿದೆ. ರಾಜ್ಯದ ಸಾಲ ಮೊತ್ತವು ಜಿಎಸ್‌ಡಿಪಿಯ ಶೇ.30 ಕ್ಕಿಂತ ಕಡಿಮೆಯಿದೆ. ರಾಜ್ಯದ ಒಟ್ಟಾರೆ ಸಾಲ ಮೊತ್ತವು 53912.68 ಕೋಟಿ ರೂ.ಗಳಾಗಿದ್ದು, ಇದು ರಾಜ್ಯದ ಒಟ್ಟಾರೆ ರಾಜಸ್ವ ಸಂಗ್ರಹಣೆಯ ಶೇ.300 ಕ್ಕಿಂತ ಕಡಿಮೆಯಿದೆ. ರಾಜ್ಯದ ಬಡ್ಡಿ ಪಾವತಿ ಮೊತ್ತವು 4366 ಕೋಟಿ ರೂ.ಗಳಾಗಿದ್ದು, ಇದು ರಾಜ್ಯದ ಒಟ್ಟಾರೆ ರಾಜಸ್ವ ಸಂಗ್ರಹಣೆಯ ಶೇ.18 ಕ್ಕಿಂತ ಕಡಿಮೆಯಿದೆ. ರಾಜ್ಯದ ಸಾಲ ವೃದ್ಧಿ ದರವು ಶೇ.10.14 ರಷ್ಟಿದ್ದು ಇದು ರಾಜ್ಯದ ರಾಜಸ್ವ ವೃದ್ಧಿಯ ಶೇ. 1.25 ರ ಪ್ರಮಾಣಕ್ಕಿಂತ ಹೆಚ್ಚಾಗಿರುವುದಿಲ್ಲ. ರಾಜ್ಯವು ಅಧಿಕ ರಾಜಸ್ವದಲ್ಲಿದ್ದು ಅಂತಿಮವಾಗಿ ನಮ್ಮ ವಿತ್ತೀಯ ಕೊರತೆಯು 5210 ಕೋಟಿ ರೂ.ಗಳಾಗಿದ್ದು ಇದು ಒಟ್ಟಾರೆ

ರಾಜಸ್ವ ಸಂಗ್ರಹದ ಶೇ.25 ಕ್ಕಿಂತ ಕಡಿಮೆಯಿದೆ. ಹೀಗಾಗಿ ನಮ್ಮ ರಾಜ್ಯವು ಸಾಲದ ಒತ್ತಡಕ್ಕೆ ಸಿಲುಕಿಲ್ಲವೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮದು ದೂರದೃಷ್ಟಿಯ ಆರ್ಥಿಕ ನೀತಿ. ಸಾಲ ಸಿಗುತ್ತದೆ ಎಂದು ನಾವು ಸಾಲ ಎತ್ತುವುದಿಲ್ಲ. ನಮ್ಮ ಸಾಲ ತೀರಿಸುವ ಸಾಮರ್ಥ್ಯವನ್ನು ಆಧರಿಸಿ ನಾವು ಸಾಲ ಎತ್ತುವಳಿ ಮಾಡುತ್ತೇವೆ.

22. ವಿತ್ತೀಯ ಕ್ರೋಢೀಕರಣದಿಂದ ನಮ್ಮ ರಾಜ್ಯದ ಸ್ಥೂಲ ಆರ್ಥಿಕ ಮೂಲ ಅಂಶಗಳು ಬಹಳ ಗಟ್ಟಿಮುಟ್ಟಾಗಿವೆ. 2006-07ನೇ ಸಾಲಿನಲ್ಲಿ ನಾವು ತೆರಿಗೆ ಸಂಗ್ರಹಣೆ ಗುರಿಗಳನ್ನು ದಾಟಿ ಮುನ್ನಡೆಯಲಿದ್ದೇವೆ. ತೆರಿಗೆ ಸಂಪನ್ಮೂಲಗಳ ಸೋರಿಕೆ ತಡೆಗಟ್ಟಲು ನಾವು ತೆಗೆದುಕೊಂಡ ಹಲವಾರು ಕಾರ್ಯಕ್ರಮಗಳಿಂದಾಗಿ ಇದು ಸಾಧ್ಯವಾಯಿತು. ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಯೋಜನಾ ಆಯೋಗವೂ ಸೇರಿದಂತೆ ಹಲವಾರು ಸಂಸ್ಥೆಗಳು ರಾಜ್ಯದ ಸಂಪನ್ಮೂಲ ಸಂಗ್ರಹಣೆ ಮತ್ತು ವಿತ್ತೀಯ ಶಿಸ್ತಿನ ಪ್ರಯತ್ನಗಳನ್ನು ಮುಕ್ತ ಕಂಠದಿಂದ ಪ್ರಶಂಶಿಸಿವೆ. ವಿತ್ತೀಯ ಕ್ರೋಢೀಕರಣದ ಹಾದಿಯಲ್ಲಿ ನಾವು ಸರಿಯಾಗಿ ಸಾಗುತ್ತಿರುವುದರಿಂದ 2006-07ನೇ ಸಾಲಿನಲ್ಲಿ ರಾಜ್ಯಕ್ಕೆ ಕೇಂದ್ರದ ಸಾಲ ಮನ್ನಾ ಉತ್ತೇಜನ ಹಣ ಮತ್ತೊಮ್ಮೆ ದೊರೆತಿದೆ.

23. ರಾಜ್ಯದ ಆರ್ಥಿಕ ಸದೃಢತೆಯನ್ನು ಪರಿಗಣಿಸಿ ಐಸಿಆರ್ಎ (ಇಕ್ರಾ) ಸಂಸ್ಥೆಯು 'LA$^{+}$' ವರ್ಗೀಕರಣ ಶ್ರೇಣಿಯನ್ನು ಮತ್ತು ಕ್ರಿಸಿಲ್ ಸಂಸ್ಥೆಯು AA$^{(-)}$ ಶ್ರೇಣಿಯನ್ನು ನೀಡಿವೆ. ಇದು ರಾಷ್ಟ್ರದಲ್ಲಿನ ಇತರೆ ಎಲ್ಲ ರಾಜ್ಯಗಳಿಗಿಂತ ಅಧಿಕ ಶ್ರೇಣಿಯಾಗಿರುತ್ತದೆ.

**ಆರ್ಥಿಕ ಸುಧಾರಣೆಗಳು:**

24. ನಾವು 2007-08ನೇ ಸಾಲಿನಲ್ಲಿ ತರಲು ಉದ್ದೇಶಿಸಿರುವ ಕೆಲವು ಪ್ರಮುಖ ವಿತ್ತೀಯ ನೀತಿಗಳು ಈ ಕೆಳಕಂಡಂತಿವೆ.

- ರಾಜಸ್ವ ಬೆಳವಣಿಗೆ ಆರ್ಥಿಕ ವೃದ್ಧಿಗೆ ಅತ್ಯಗತ್ಯ. ಆದ್ದರಿಂದ ರಾಜ್ಯದ ಆರ್ಥಿಕ ಬೆಳವಣಿಗೆ ರಕ್ಷಿಸಲು ನಮ್ಮ ಸರ್ಕಾರ ತೀವ್ರ ಗಮನ ಹರಿಸಿದೆ. ತೆರಿಗೆ ದರಗಳ ದಿಢೀರ್ ಏರಿಕೆಯು ಆರ್ಥಿಕ ವ್ಯವಸ್ಥೆ ಮತ್ತು ವ್ಯಾಪಾರ ವಾತಾವರಣವನ್ನು ಮಂಕುಗೊಳಿಸಬಹುದು. ಆದ್ದರಿಂದ ನಮ್ಮ ಸರ್ಕಾರವು ತೆರಿಗೆ ದರಗಳಲ್ಲಿ ದಿಢೀರ್ ಹಾಗೂ ಅನಿರೀಕ್ಷಿತ ಏರಿಕೆ ಬದಲಿಗೆ ಮೃದುವಾದ ಆದರೆ ಕಠಿಣ ತೆರಿಗೆ ವಸೂಲಿ ಆಡಳಿತದತ್ತ ಗಮನವನ್ನು ಕೇಂದ್ರೀಕರಿಸಲಿದೆ.

- ರಾಜ್ಯದ ಜನತೆಯ ಆರೋಗ್ಯ ಕಾಪಾಡಲು ಜುಲೈ 2007 ರಿಂದ ರಾಜ್ಯಾದ್ಯಂತ ಸಾರಾಯಿ ಮಾರಾಟ ನಿಷೇಧಿಸಲಾಗುವುದು. ಈ ಕ್ರಮ ಜನತೆಯ ಆರೋಗ್ಯ ಸುಧಾರಣೆಗೆ ನೆರವಾದರೂ ರಾಜ್ಯದ ಬೊಕ್ಕಸಕ್ಕೆ ನಷ್ಟ ತರಲಿದೆ. ಈ ವಿಷಯವನ್ನು ನನ್ನ ಭಾಷಣದ ಮುಂದಿನ ಭಾಗದಲ್ಲಿ ವಿಷದವಾಗಿ ಚರ್ಚಿಸುತ್ತೇನೆ.

- ರಾಜ್ಯ ಸರ್ಕಾರಗಳು ಹಾಗೂ ಇತರರು ನಡೆಸುತ್ತಿರುವ ಲಾಟರಿಗಳು ಜನತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಈ ಹಿನ್ನೆಲೆಯಲ್ಲಿ ಏಪ್ರಿಲ್ 1, 2007 ರಿಂದ ಕರ್ನಾಟಕ ರಾಜ್ಯವನ್ನು ಲಾಟರಿ ಮುಕ್ತ ವಲಯವೆಂದು ಘೋಷಿಸಲಾಗುವುದು. ಇದರಿಂದ ಬಡಜನತೆಯ ಸಾಲದ ಪಿಡುಗು ಕಡಿಮೆಯಾದರೂ ರಾಜ್ಯದ ಬೊಕ್ಕಸಕ್ಕೆ ಧಕ್ಕೆಯಾಗಲಿದೆ. ಈ ವಿಷಯವನ್ನು ಸಹ ನನ್ನ ಭಾಷಣದ ಮುಂದಿನ ಭಾಗದಲ್ಲಿ ವಿಷದವಾಗಿ ಹೇಳುತ್ತೇನೆ.

- ಕೇಂದ್ರ ಮಾರಾಟ ತೆರಿಗೆಯು ವಾಣಿಜ್ಯ ವಿರೂಪಗೊಳಿಸುವ ತೆರಿಗೆಯಾಗಿದ್ದು ಮುಂದಿನ ಮೂರು ವರ್ಷಗಳಲ್ಲಿ ಇದು ಹಂತ

ಹಂತವಾಗಿ ರದ್ದುಗೊಳ್ಳಲಿದೆ. ರಾಜ್ಯ ಸರ್ಕಾರಗಳಿಗೆ ವಿತ್ತ ಮಂತ್ರಿಗಳ ಉನ್ನತಾಧಿಕಾರ ಸಮಿತಿಯು ಸಹ ಕೇಂದ್ರಿಯ ಮಾರಾಟ ತೆರಿಗೆಯನ್ನು ತೆಗೆದುಹಾಕಲು ಸೂಚಿಸಿದೆ. 2007-08ನೇ ಸಾಲಿನಲ್ಲಿ ಕೇಂದ್ರೀಯ ಮಾರಾಟ ತೆರಿಗೆಯು ಶೇ.4 ರಿಂದ ಶೇ.3 ಕ್ಕೆ ಇಳಿಕೆಯಾಗಲಿದೆ. ಇದರಿಂದ ರಾಜ್ಯಗಳಿಗೆ ಉಂಟಾಗಬಹುದಾದ ನಷ್ಟವನ್ನು ಕೇಂದ್ರ ಸರ್ಕಾರವು ನಗದು ಪರಿಹಾರ ಮತ್ತು ಇತರೆ ತೆರಿಗೆ ಕ್ರಮಗಳ ಮೂಲಕ ಸಂಪೂರ್ಣವಾಗಿ ಭರಿಸಿಕೊಡಲಿದೆ. ಕೆಲವು ಸೇವೆಗಳ ತೆರಿಗೆ ಸಂಗ್ರಹಣೆಯನ್ನು ಕೇಂದ್ರವು 2008-09ರಲ್ಲಿ ರಾಜ್ಯ ಸರ್ಕಾರಗಳಿಗೆ ವರ್ಗಾಯಿಸಲಿದೆ. ಈ ತೆರಿಗೆ ಸಂಗ್ರಹಿಸಲು ಆಡಳಿತ ವ್ಯವಸ್ಥೆಯನ್ನು 2007-08ರಲ್ಲಿಯೇ ಸಜ್ಜುಗೊಳಿಸಲಾಗುವುದು.

- ವಸತಿ ಮತ್ತು ಮೂಲಸೌಕರ್ಯ ವಲಯದಲ್ಲಿ ಹೂಡಿಕೆದಾರರ ವಿಶ್ವಾಸ ಉತ್ತೇಜಿಸಲು ಅಗತ್ಯ ನೀತಿಗಳನ್ನು ರೂಪಿಸಲಾಗುವುದು. ನೋಂದಣಿ ನೀತಿ ಮೂಲಕ ಆಸ್ತಿ ಒಡೆತನದ ವಿಮಾ ವ್ಯವಸ್ಥೆಯನ್ನು ಪ್ರೋತ್ಸಾಹಿಸಲಾಗುವುದು. ಆಸ್ತಿವಿಮೆ ಪತ್ರ ವ್ಯವಸ್ಥೆಗೆ ಪೂರಕವಾಗಿ ಬೆಂಗಳೂರು ನಗರದ ಜಮೀನು ಮತ್ತು ಕಟ್ಟಡ ನಿರ್ಮಾಣಗಾರರ ವಿವರಗಳ ಮಾಹಿತಿ ಭಂಡಾರವನ್ನು ಸ್ಥಾಪಿಸಲಾಗುವುದು.

- ಸಾರ್ವಜನಿಕ ವೆಚ್ಚಗಳನ್ನು ಸುಧಾರಿಸಲು ಆಯವ್ಯಯ ನಿಯಂತ್ರಣ ಪದ್ಧತಿಯನ್ನು ಜಾರಿಗೊಳಿಸಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ವಲಯಗಳ ಲೆಕ್ಕಪತ್ರ ನಿರ್ವಹಣೆಯಲ್ಲಿ ಬಳಸಲಾಗುವುದು.

- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆಗಳಲ್ಲಿ **'ಕಾರ್ಯಕ್ರಮ ಪ್ರಗತಿ ಆಯವ್ಯಯ ಪತ್ರ'** ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು.
- ಸಾರ್ವಜನಿಕ ವೆಚ್ಚದಲ್ಲಿ ಮತ್ತಷ್ಟು ದಕ್ಷತೆ ತರಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಕ್ಕೆ ತಿದ್ದುಪಡಿ ತಂದು ಇ-ಸಂಗ್ರಹಣೆಗೆ ಪ್ರೋತ್ಸಾಹಿಸಲಾಗುವುದು.
- ಶಿಕ್ಷಣ ವಲಯದ ಸಂಪನ್ಮೂಲಗಳ ಬಳಕೆಯಲ್ಲಿ ದಕ್ಷತೆ ಹೆಚ್ಚಿಸಲು ವಿನೂತನವಾದ **'ವಿದ್ಯಾರ್ಥಿ ಕೇಂದ್ರೀಕೃತ ಅನುದಾನ'** ಪದ್ಧತಿಯನ್ನು ಪ್ರೌಢಶಾಲಾ ಶಿಕ್ಷಣಕ್ಕೆ ಅಳವಡಿಸಲಾಗುವುದು.

**ಅಭಿವೃದ್ಧಿ ತಂತ್ರ:**

25. ನಮ್ಮ ರಾಜಸ್ವ ಸುಧಾರಣಾ ತಂತ್ರಗಳು ರಾಜಸ್ವ ಕೊರತೆಯ ನಿವಾರಣೆಗೆ ನೆರವಾಗಿದ್ದು ವಿತ್ತೀಯ ಕೊರತೆ ಜಿಎಸ್‌ಡಿಪಿಯ ಶೇ.3 ಕ್ಕಿಂತ ಕಡಿಮೆಯಾಗಿದೆ. ನಮ್ಮ ವಿತ್ತೀಯ ಸುಧಾರಣೆ ಕ್ರಮಗಳು ಕೆಳಕಂಡಂತಿವೆ.

- ವಿತ್ತೀಯ ಸುಧಾರಣೆಗಳ ಅಂಗವಾಗಿ ರಾಜಸ್ವ ವೆಚ್ಚಗಳನ್ನು ತಗ್ಗಿಸಿ ಇದರಿಂದ ಲಭ್ಯವಾಗುವ ಸಂಪನ್ಮೂಲವನ್ನು ಬಂಡವಾಳವಾಗಿ ಬಳಸಿ ಕೊಳ್ಳಲಾಗುವುದು. ನಮ್ಮ ಈಗಿನ ಮೂಲ ಸೌಕರ್ಯ ಹೂಡಿಕೆಗಳು ಮುಂಬರುವ ವರ್ಷಗಳಲ್ಲಿ ಮತ್ತಷ್ಟು ಹೂಡಿಕೆಗೆ ಉತ್ತೇಜನಕಾರಿ ವಾತಾವರಣ ನಿರ್ಮಿಸಲಿವೆ. ಜೊತೆಗೆ ನಮ್ಮ ನಾಗರೀಕರ ಜೀವನ ಗುಣಮಟ್ಟವನ್ನು ಕೂಡ ಸುಧಾರಣೆಗೊಳಿಸಲಿವೆ.
- ನಮ್ಮ ಸರ್ಕಾರವು ನಿಖರ ಗುರಿಯ, ನಿರ್ದಿಷ್ಟ ಉದ್ದೇಶದ ಸಹಾಯಧನ ನೀಡಿಕೆಯಲ್ಲಿ ನಂಬಿಕೆಯಿಟ್ಟಿದೆ. ವಿತ್ತೀಯ ಸುಧಾರಣಾ ಕ್ರಮಗಳ ಅಂಗವಾಗಿ ನಿಖರ ಗುರಿಯಿಲ್ಲದ, ನಿರ್ದಿಷ್ಟ

ಉದ್ದೇಶವಿಲ್ಲದ ಸಹಾಯಧನಗಳನ್ನು ಆದಷ್ಟು ಕಡಿಮೆ ಮಾಡಲಾಗುವುದು.

- ನಮ್ಮ ಸರ್ಕಾರಕ್ಕೆ ರಾಜ್ಯದ ಸಮಾನ ಅಭಿವೃದ್ಧಿಯಲ್ಲಿ ಆಸಕ್ತಿಯಿದೆ ಪ್ರಾಂತೀಯ ಅಸಮಾನತೆಯನ್ನು ಸರಿಪಡಿಸಲು ಡಾ।।ನಂಜುಂಡಪ್ಪ ಸಮಿತಿಯ ವರದಿಯನ್ನು ಅನುಷ್ಠಾನಗೊಳಿಸಲು ನಾವು ಬದ್ಧರಿದ್ದೇವೆ.
- ಕೃಷಿಕ ಕ್ಷೇತ್ರದ ಅಭಿವೃದ್ಧಿ ನಮ್ಮ ಪ್ರಮುಖ ಕಾರ್ಯಕ್ಷೇತ್ರ.
- ಗ್ರಾಮೀಣ ಪ್ರದೇಶದಲ್ಲಿ ಎಲ್ಲಾ ವಲಯಗಳಲ್ಲೂ ಉದ್ಯೋಗವಕಾಶ ಸೃಷ್ಟಿಸಲು ಮತ್ತು ಕೌಶಲ್ಯ ಅಭಿವೃದ್ಧಿ ಪಡಿಸಲು ನಾವು ಹೆಚ್ಚು ಒತ್ತು ನೀಡುತ್ತೇವೆ.
- ನಮ್ಮ ರಾಜ್ಯವು ವಿತ್ತೀಯ ಶಿಸ್ತು ಪಾಲಿಸಲು ಮಧ್ಯಮಾವಧಿ ವಿತ್ತೀಯ ಯೋಜನೆಯಡಿ ಮುಂದುವರಿಯಲಿದೆ. ಆರೋಗ್ಯ, ಶಿಕ್ಷಣ, ಸಮಾಜಕಲ್ಯಾಣ ಮತ್ತು ಮೂಲಸೌಕರ್ಯಗಳು ನಮ್ಮ ಅಭಿವೃದ್ಧಿ ಕೇಂದ್ರೀಕೃತ ವಲಯಗಳಿಗಾಗಿ ಮುಂದುವರಿಯಲಿವೆ.

**ಆಯವ್ಯಯ ಮುಖ್ಯಾಂಶಗಳು:**

ನನ್ನ ಆಯವ್ಯಯದ ಪ್ರಧಾನ ಅಂಶಗಳು ಹೀಗಿವೆ:

- ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಡಾ:ಡಿ.ಎಂ. ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳ ಜಾರಿಗೆ ಸಾಮಾನ್ಯ ಅನುದಾನದ ಜೊತೆಗೆ 1,500 ಕೋಟಿ ರೂ.ಗಳ ವಿಶೇಷ ಅನುದಾನ

- ರೈತರು ಸಹಕಾರಿ ಸಂಸ್ಥೆಗಳಿಂದ ಪಡೆದಿರುವ 25,000 ರೂ. ವರೆಗಿನ ಪ್ರಸಕ್ತ ಸಾಲಿನ ಅಲ್ಪಾವಧಿ ಬೆಳೆ ಸಾಲ ಮನ್ನಾ. ಇತರೆ ರೈತರು ಪ್ರಸಕ್ತ ಸಾಲಿನ ಸಹಕಾರಿ ಸಾಲಗಳ ಅಸಲನ್ನು ಮಾರ್ಚ್ 31ರೊಳಗೆ ಪಾವತಿಸಿದರೆ ಶೇ. 4ರ ಬಡ್ಡಿ ಮನ್ನಾ.
- ನೇಕಾರರು ಮತ್ತು ಮೀನುಗಾರರೂ ಪ್ರಸಕ್ತ ಸಾಲಿನಲ್ಲಿ ಪಡೆದಿರುವ 25,000 ರೂ.ಗಳವರೆಗಿನ ಅಲ್ಪಾವಧಿ ಸಹಕಾರ ಸಾಲ ಮನ್ನಾ. ಇತರ ಸಾಲಗಳ ಅಸಲನ್ನು ಮಾರ್ಚ್ 31ರೊಳಗೆ ಪಾವತಿಸಿದರೆ ಬಡ್ಡಿ ಮನ್ನಾ.
- ಶೇ.4ರ ಬಡ್ಡಿ ದರದಲ್ಲಿ ಕೃಷಿಸಾಲ ಸೌಲಭ್ಯ ಮುಂದುವರಿಕೆ.
- ನೇಕಾರರು ಮತ್ತು ಮೀನುಗಾರರಿಗೂ ಶೇ.4ರ ಬಡ್ಡಿ ದರದ ಸಾಲ ಸೌಲಭ್ಯ ಮುಂದುವರಿಕೆ.
- ಸ್ತ್ರೀಶಕ್ತಿ ಮತ್ತು ಇತರ ಸ್ವ-ಸಹಾಯ ಗುಂಪುಗಳಿಗೂ ಶೇ.4ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.
- ಐದನೇ ವೇತನ ಆಯೋಗದ ಶಿಫಾರಸ್ಸುಗಳ ಜಾರಿ.
- ಸಾರಾಯಿ ಮಾರಾಟ ನಿಷೇಧ.
- ಲಾಟರಿ ನಿಷೇಧ
- ಹಿರಿಯ ಶ್ರಮಜೀವಿಗಳಿಗೆ ಮಾಸಿಕ 400 ರೂ. ಸಾಮಾಜಿಕ ಭದ್ರತಾ ವೇತನ ನೀಡಲು "ಸಂಧ್ಯಾ ಸುರಕ್ಷಾ" ಯೋಜನೆ.
- ವಿಧವೆಯರು, ದೇವದಾಸಿಯರು ಹಾಗೂ ಇತರೆ ಅಬಲ ಮಹಿಳೆಯರನ್ನು ಸಬಲಗೊಳಿಸುವ 'ಅಮೃತ' ಯೋಜನೆ ಜಾರಿ. 50,000 ಮಹಿಳೆಯರಿಗೆ ಹಾಲು ನೀಡುವ ಹಸು/ಎಮ್ಮೆ ವಿತರಣೆ.

- ಸರಳ ಸಾಮೂಹಿಕ ವಿವಾಹ ಜನಪ್ರಿಯಗೊಳಿಸಲು "ಆದರ್ಶ ವಿವಾಹ" ಯೋಜನೆ ಜಾರಿ ವಧುವಿಗೆ 2 ವರ್ಷದ ಠೇವಣಿ ರೂಪದಲ್ಲಿ 10 ಸಾವಿರ ರೂಗಳ ಪ್ರೋತ್ಸಾಹ ಧನ
- ಗ್ರಾಮೀಣ ಪ್ರದೇಶದಲ್ಲಿ ಕ್ಷೌರಿಕ ಅಂಗಡಿಗಳನ್ನು ಮೇಲ್ದರ್ಜೆಗೇರಿಸಲು 10 ಸಾವಿರ ರೂಗಳ ನೆರವು (ರೂ. 5000 ಸಹಾಯಧನ)
- ಅಸಂಘಟಿತ ಕುಶಲಕರ್ಮಿಗಳಾದ ದರ್ಜಿಗಳು, ಮಡಿವಾಳರು, ಬಡಗಿಗಳು, ಕ್ಷೌರಿಕರು, ಕುಂಬಾರರು ಇತ್ಯಾದಿ ವೃತ್ತಿನಿರತರ ಹಿತರಕ್ಷಣೆಗೆ ಪ್ರತ್ಯೇಕ ಕಲ್ಯಾಣ ಮಂಡಳಿ ರಚನೆ.
- ವಿಧವಾ ವೇತನ, ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನಗಳು ಮಾಸಿಕ 200 ರೂ.ಗಳಿಂದ 400 ರೂ.ಗಳಿಗೆ ಹೆಚ್ಚಳ.
- ಸ್ವಾತಂತ್ರ್ಯ ಹೋರಾಟಗಾರರ ಗೌರವ ಧನ ದ್ವಿಗುಣ. ಮಾಸಿಕ 1,500 ರೂ.ಗಳಿಂದ 3,000 ರೂ.ಗಳಿಗೆ ಏರಿಕೆ.
- ಗೋವಾ ವಿಮೋಚನಾ ಚಳುವಳಿಗಾರರಿಗೆ ಪ್ರಸಕ್ತ ಸಾಲಿನಿಂದ ಮಾಸಿಕ 2,000 ರೂಗಳ ಗೌರವಧನ
- ಬೆಳಗಾವಿಯಲ್ಲಿ 250 ಕೋಟಿ ರೂ. ವೆಚ್ಚದಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣ.
- ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ರಚನೆ.
- ಹುಬ್ಬಳ್ಳಿ-ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿ ಸಂಚಾರಿ ಹೈಕೋರ್ಟ್ ಪೀಠಗಳನ್ನು ಪೂರ್ಣಗೊಳಿಸಲು ಕ್ರಮ.
- 6 ಮಿನಿ ವಿಮಾನ ನಿಲ್ದಾಣ ಮತ್ತು 22 ಹೆಲಿಪ್ಯಾಡ್‌ಗಳ ನಿರ್ಮಾಣ

- ಹೊಸದಾಗಿ ಸಾಮಾಜಿಕ ಭದ್ರತಾ ಮತ್ತು ಪಿಂಚಣಿ ನಿರ್ದೇಶನಾಲಯ ಸ್ಥಾಪನೆ.
- ಯಕ್ಷಗಾನ ಅಕಾಡೆಮಿ ಸ್ಥಾಪನೆ.
- ಹಿರಿಯ ಪತ್ರಕರ್ತರ ಕ್ಷೇಮನಿಧಿ ಸ್ಥಾಪನೆ.
- ಮಧ್ಯಾಹ್ನದ ಬಿಸಿಯೂಟ "ಅಕ್ಷರ ದಾಸೋಹ" 10ನೇ ತರಗತಿವರೆಗೆ ವಿಸ್ತರಣೆ.
- ವಿದ್ಯಾವಿಕಾಸ ಯೋಜನೆಯಡಿ 10ನೇ ತರಗತಿವರೆಗಿನ ಗಂಡು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ.
- ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ.
- ಮೈಸೂರಿನಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆ.
- ಹುಬ್ಬಳ್ಳಿಯಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ತರಬೇತಿ ಕೇಂದ್ರ ಸ್ಥಾಪನೆ.
- ಖ್ಯಾತ ಹಿಂದೂಸ್ಥಾನಿ ಗಾಯಕಿ ಡಾ: ಗಂಗೂಬಾಯಿ ಹಾನಗಲ್ ಅವರ ಮನೆ ವಸ್ತು ಸಂಗ್ರಹಾಲಯವಾಗಿ ಪರಿವರ್ತನೆ.
- ಕೊಡಗು ರಾಜವಂಶದ ಕೊಡುಗೆಯ ಬಗ್ಗೆ ಸಮಗ್ರ ಅಧ್ಯಯನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪೀಠ ಸ್ಥಾಪನೆ.
- ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಬಸವ ಪೀಠದ ಕಟ್ಟಡ ನಿರ್ಮಾಣ ಮತ್ತು ವಚನ ಸಾಹಿತ್ಯ ಹಾಗೂ ಬಸವೇಶ್ವರರನ್ನು ಕುರಿತ ಕೃತಿಗಳ ಭಾಷಾಂತರಕ್ಕೆ 2 ಕೋಟಿ ರೂಗಳ ನೆರವು.
- ಡಾ. ಅಂಬೇಡ್ಕರ್ ಅವರ ಕೃತಿಗಳ ಪುನರ್ ಮುದ್ರಣಕ್ಕೆ 50 ಲಕ್ಷ ರೂ.

- ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಅವರ ಸಮಗ್ರ ಕೃತಿಗಳ ಮರು ಮುದ್ರಣಕ್ಕೆ 50 ಲಕ್ಷ ರೂ.
- 5.00 ಕೋಟಿ ರೂ.ಗಳ ವೆಚ್ಚದಲ್ಲಿ ಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರ ಮತ್ತು ಬಸವಣ್ಣನವರ ಪತ್ನಿ ಗಂಗಾಂಬಿಕೆಯವರ ಮುಕ್ತಿ ಸ್ಥಳ ಕೂಡಲಸಂಗಮ ಮಾದರಿಯಲ್ಲಿ ಅಭಿವೃದ್ಧಿ.
- ಗುಲ್ಬರ್ಗ ಜಿಲ್ಲೆ ಮರ್ತೂರಿನಲ್ಲಿ ವಿಜ್ಞಾನೇಶ್ವರ ರಾಜನೀತಿ ಸಂಶೋಧನಾ ಕೇಂದ್ರಕ್ಕೆ 1 ಕೋಟಿ ರೂ.ಗಳ ವಿಶೇಷ ನೆರವು.
- ಕನ್ನಡ ವಿಶ್ವಕೋಶದ 14 ಸಂಪುಟಗಳು ಹಾಗೂ ಶಾಸನ ಸಂಪುಟಗಳ ಪುನರ್ ಮುದ್ರಣಕ್ಕೆ 1 ಕೋಟಿ ರೂ.ಗಳ ನೆರವು.
- ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಬೆಳವಣಿಗೆಗೆ ಸಮಗ್ರ ಹೈನು ಅಭಿವೃದ್ಧಿ ಕಾರ್ಯಕ್ರಮ.
- ಗುಲ್ಬರ್ಗಾದಲ್ಲಿ ಹೈನು ವಿಜ್ಞಾನ ವಿದ್ಯಾಲಯ ಸ್ಥಾಪನೆ.
- ಚಾಮರಾಜನಗರ, ಕುಶಾಲನಗರ, ಬಳ್ಳಾರಿ ಮತ್ತು ರಾಯಚೂರು ಪಾಲಿಟೆಕ್ನಿಕ್‌ಗಳು ಇಂಜಿನಿಯರಿಂಗ್ ಕಾಲೇಜುಗಳಾಗಿ ಉನ್ನತೀಕರಣ.
- ಶತಾಯುಷಿ ಸಿದ್ಧಗಂಗಾ ಶ್ರೀಗಳ ಜನ್ಮ ಶತಮಾನೋತ್ಸವ ಸರ್ಕಾರದಿಂದ ಆಚರಣೆ. ದಾಸೋಹಭವನ ನಿರ್ಮಾಣ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ 10 ಕೋಟಿ ರೂ.
- ಡಾ. ರಾಜಕುಮಾರ್ ಸ್ಮಾರಕ ಭವನ ನಿರ್ಮಾಣಕ್ಕೆ 3 ಕೋಟಿ ರೂ.
- ಬೆಂಗಳೂರಿನಲ್ಲಿ 3 ಕೋಟಿ ರೂಗಳ ವೆಚ್ಚದಲ್ಲಿ ಬಾಬು ಜಗಜೀವನರಾಂ ಶತಮಾನೋತ್ಸವ ಭವನ ನಿರ್ಮಾಣ.

- ಹುಬ್ಬಳ್ಳಿ ಸಮೀಪ ವರೂರು ನವಗ್ರಹ ತೀರ್ಥ ಜೈನ ಕ್ಷೇತ್ರದಲ್ಲಿ ಯಾತ್ರಿನಿವಾಸ ನಿರ್ಮಾಣಕ್ಕೆ 2 ಕೋಟಿ ರೂ. ನೆರವು.
- ಶಿಕಾರಿಪುರ ತಾಲ್ಲೂಕು ತೊಗರ್ಸಿಯ ಐತಿಹಾಸಿಕ ಮಲ್ಲಿಕಾರ್ಜುನ ದೇವಾಲಯವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು 2 ಕೋಟಿ ರೂ.
- ಕನಕದಾಸರ ಜನ್ಮಸ್ಥಳ ಬಾಡ ಗ್ರಾಮದ ಸಮಗ್ರ ಅಭಿವೃದ್ಧಿ
- ಕಾಗಿನೆಲೆ ಪ್ರಾಧಿಕಾರ ರಚನೆಗೆ 3 ಕೋಟಿ ರೂ. ಅನುದಾನ
- ಉಡುಪಿಯಲ್ಲಿ ಕನಕದಾಸರ ಸಂಶೋಧನಾ ಕೇಂದ್ರ ಸ್ಥಾಪನೆ
- ಧಾರವಾಡ ಮತ್ತು ಮಂಗಳೂರು ವಿಶ್ವವಿದ್ಯಾನಿಲಯಗಳಲ್ಲಿ ಕನಕ ಅಧ್ಯಯನ ಪೀಠಗಳಿಗೆ ತಲಾ 50 ಲಕ್ಷ ರೂ. ನೆರವು
- ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಅಧ್ಯಯನ ಕೇಂದ್ರ' ಸ್ಥಾಪಿಸಲು 2 ಕೋಟಿ ರೂ.
- ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮಕ್ಕೆ 10 ಕೋಟಿ ರೂ. ಅನುದಾನ
- ಹಾವೇರಿಯಲ್ಲಿ ಸರ್ವಜ್ಞ ಸ್ಮಾರಕ ಭವನ ನಿರ್ಮಾಣ
- ತ್ಯಾಗವೀರ ಸಿರಸಂಗಿ ಲಿಂಗರಾಜರ ಶತಮಾನೋತ್ಸವ ಭವನ ನಿರ್ಮಾಣಕ್ಕೆ 50 ಲಕ್ಷ ರೂ.
- ಬೆಂಗಳೂರಿನಲ್ಲಿ ಮಧುಮೇಹ ಅಧ್ಯಯನ ಸಂಸ್ಥೆ ಸ್ಥಾಪನೆ.
- ಬೆಂಗಳೂರು ಮತ್ತು ಕಾರವಾರಗಳಲ್ಲಿ ಆಭರಣ ತಯಾರಿಕಾ ತರಬೇತಿ ಸಂಸ್ಥೆಗಳ ಸ್ಥಾಪನೆ.

- ಶಿವಮೊಗ್ಗ ಮತ್ತು ಹುಬ್ಬಳ್ಳಿಯಲ್ಲಿ ಖಾಯಂ ಕೈಗಾರಿಕಾ ವಸ್ತು ಪ್ರದರ್ಶನಾಲಯಗಳ ಸ್ಥಾಪನೆ.
- ಶಿವಮೊಗ್ಗದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣ.
- ಶಿವಮೊಗ್ಗದಲ್ಲಿ ವಿಷಾಣು ಅಧ್ಯಯನ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ) ಸ್ಥಾಪನೆ.
- ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಜೋಡಿಗೆರೆ ಬಳಿ ದಂಡಾವತಿ ನದಿಗೆ ಜಲಾಶಯ ನಿರ್ಮಾಣಕ್ಕೆ 25 ಕೋಟಿ ರೂ.
- ಬೆಂಗಳೂರು ಇತಿಹಾಸ ಅಧ್ಯಯನ ಮಾಡಲು ಕೆಂಪೇಗೌಡ ಪ್ರತಿಷ್ಠಾನಕ್ಕೆ ಆರ್ಥಿಕ ನೆರವು.
- ತುಮಕೂರು ನಗರಾಭಿವೃದ್ಧಿಗೆ 54 ಕೋಟಿ ರೂ.
- ಕೋಲಾರ ನಗರಕ್ಕೆ ಯರಗೋಳ ಕುಡಿಯುವ ನೀರು ಯೋಜನೆ.
- ಬಾಗಲಕೋಟೆ ಪುನರ್ವಸತಿ ಯೋಜನೆಗೆ 50 ಕೋಟಿ ರೂ.
- ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ 50 ಕೋಟಿ ರೂ.
- ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ 50 ಕೋಟಿ ರೂ.
- ನೂತನ ಜೈವಿಕ ಇಂಧನ ನೀತಿ.
- ದ್ರಾಕ್ಷಾರಸ ನೀತಿ.

**ಕೃಷಿ, ತೋಟಗಾರಿಕೆ, ಸಹಕಾರ ಮತ್ತು ನೀರಾವರಿ:**

*ಯಾರೂ ಅರಿಯದ ನೇಗಿಲ ಯೋಗಿಯೆ*
*ಲೋಕಕೆ ಅನ್ನವನೀಯುವನು.*
*ಹೆಸರನು ಬಯಸದೆ ಅತಿಸುಖಕೆಳಸದೆ*
*ದುಡಿವನು ಗೌರವಕಾಶಿಸದೆ.*
*ನೇಗಿಲ ಕುಳದೊಳಗಡಗಿದೆ ಕರ್ಮ;*
*ನೇಗಿಲ ಮೇಲೆಯೇ ನಿಂತಿದೆ ಧರ್ಮ.*

*ರಾಷ್ಟ್ರಕವಿ ಕುವೆಂಪು ಅವರು ಅನ್ನದಾತ ರೈತನ ಮತ್ತು ಕೃಷಿಯ ಮಹತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.*

26. ನಾಡಿಗೆ ಅನ್ನವೀಯುವ ನೇಗಿಲ ಯೋಗಿ ಪ್ರಾತಃಸ್ಮರಣೀಯ. ಜೀವದಾಯಿನಿ ಕೃಷಿ ಎಲ್ಲ ಕಸುಬುಗಳ ಮೂಲ. ಕೃಷಿ ಕ್ಷೇತ್ರವನ್ನು ಬಲಪಡಿಸಿ ಕೃಷಿಕರನ್ನು ನೆಮ್ಮದಿಯಿಂದ ಇರಿಸಿದಾಗ ಮಾತ್ರ ಸಮಾಜದಲ್ಲಿ ನೆಮ್ಮದಿ ನೆಲಸಬಹುದು ಎಂಬ ಸತ್ಯವನ್ನು ರೈತನ ಮಗನಾಗಿ ನಾನು ಅರ್ಥಮಾಡಿಕೊಂಡಿದ್ದೇನೆ. ರೈತರ ಅಗತ್ಯಗಳ ಪೂರೈಕೆ ಮತ್ತು ಅವರ ನೋವು ಹಾಗೂ ನಲಿವುಗಳಿಗೆ ಸ್ಪಂದಿಸಲು ಸರ್ಕಾರ ಶ್ರಮಿಸುತ್ತಿದೆ. ಕಳೆದ ವರ್ಷ ಮಳೆ-ಬೆಳೆ ವೈಫಲ್ಯ ಮತ್ತು ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ರೈತರು ಸಂಕಷ್ಟಕ್ಕೀಡಾದರು. ಕೆಲವರು ಆತ್ಮಹತ್ಯೆಯ ಹಾದಿ ಹಿಡಿದರು. ಇದು ನನಗೆ ಅತೀವ ವೇದನೆಯುಂಟು ಮಾಡಿದ ವಿಚಾರ. ಅವರ ನೋವಿಗೆ ಮಿಡಿಯಲು ಮನಃಪೂರ್ವಕವಾಗಿ ಪ್ರಯತ್ನಿಸಿದ್ದೇನೆ.

27. ಕರ್ನಾಟಕದ ಕೃಷಿಯು 2006-07ನೇ ಸಾಲಿನಲ್ಲಿ ಪ್ರವಾಹದಿಂದ ತೊಂದರೆಗೆ ಒಳಗಾಯಿತು. 10 ಜಿಲ್ಲೆಗಳ 26 ಲಕ್ಷ ಹೆಕ್ಟೇರ್ ಪ್ರದೇಶ ಪ್ರವಾಹದಿಂದ ಹಾನಿಗೀಡಾಯಿತು. 128 ತಾಲ್ಲೂಕುಗಳಲ್ಲಿನ 6 ಲಕ್ಷ ಹೆಕ್ಟೇರ್ ಪ್ರದೇಶಗಳು ಬರದ ಪರಿಸ್ಥಿತಿ ಎದುರಿಸಿದವು. 2006-07ನೇ ಸಾಲಿನಲ್ಲಿ ಕೃಷಿ ಉತ್ಪಾದನೆಯು ಉದ್ದೇಶಿತ ಗುರಿಗಿಂತ ಶೇ.25ರಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ. ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ

ಗುರಿಗಿಂತ ಶೇ.40ರಷ್ಟು ಕಡಿಮೆಯಾಗಲಿದೆ. 2006-07ನೇ ಸಾಲಿನಲ್ಲಿ ಕೃಷಿಗೆ ಆಗಿರುವ ತೊಂದರೆಯನ್ನು ನಿವಾರಿಸಿ ಕೃಷಿ ಉತ್ಪಾದನೆಯನ್ನು ಪುನಶ್ಚೇತನಗೊಳಿಸುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ನಿರ್ವಹಿಸಬೇಕಾಗಿದೆ.

28. ರಾಜ್ಯದ ಕೃಷಿಯೋಗ್ಯ ಜಮೀನಿನಲ್ಲಿ ಶೇಕಡಾ 70 ಕ್ಕಿಂತಲೂ ಹೆಚ್ಚಿನ ಜಮೀನು ಮಳೆ ಆಧಾರಿತ ಕೃಷಿಯನ್ನೇ ಅವಲಂಬಿಸಿದೆ. ನಮ್ಮ ಕೃಷಿ ಉತ್ಪಾದನೆಯು ಮಳೆಯ ಪ್ರಮಾಣ; ನೀರಾವರಿ ವಿಧಾನ, ಗುಣಮಟ್ಟದ ವಿದ್ಯುತ್ ಲಭ್ಯತೆ, ಗುಣಮಟ್ಟದ ಬಿತ್ತನೆ ಬೀಜ, ರಸಗೊಬ್ಬರ ಬಳಕೆಯ ಸಾಮರ್ಥ್ಯ, ವಿಸ್ತರಣಾ ಚಟುವಟಿಕೆಗಳು ಅಲ್ಪಾವಧಿ ಸಾಲ, ಕೃಷಿ ಉತ್ಪನ್ನಗಳ ಲಾಭದಾಯಕ ಸಂಸ್ಕರಣೆ, ಮತ್ತು ಉತ್ಪನ್ನಗಳ ಮಾರುಕಟ್ಟೆ ಇತ್ಯಾದಿಗಳನ್ನು ಅವಲಂಬಿಸಿದೆ. ಇದರ ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಕೃಷಿ ಉತ್ಪನ್ನಗಳ ಮಾರಾಟ ಕಷ್ಟದ ಕೆಲಸವಾಗುತ್ತಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ಕೃಷಿಯಲ್ಲಿನ ಹತಾಶೆ ನಿಚ್ಚಳವಾಗಿದೆ. ಇಂತಹ ನಿರಾಶಾದಾಯಕ ಸಂದರ್ಭದಲ್ಲಿ 'ರೈತರ ಆತ್ಮಹತ್ಯೆ' ಪ್ರಕರಣಗಳಿಂದ ತೊಂದರೆಗೊಳಗಾದ ಜಿಲ್ಲೆಗಳಿಗೆ, ಪರಿಹಾರ ಪ್ಯಾಕೇಜ್ ಮೂಲಕ ನೆರವು ನೀಡಿದ ಕೇಂದ್ರ ಸರ್ಕಾರಕ್ಕೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಕಠಿಣ ಪರಿಸ್ಥಿತಿಯಿಂದ ಹೊರಬಂದು ಕೃಷಿ ಬೆಳವಣಿಗೆ ಸಾಧಿಸುವುದು ಹೇಗೆನ್ನುವ ಸವಾಲು ಈಗ ನಮ್ಮ ಮುಂದಿದೆ.

**ನೀರಾವರಿ:**

29. ಬರಪರಿಸ್ಥಿತಿಯನ್ನು ತಡೆಗಟ್ಟುವ ಅತ್ಯುತ್ತಮ ಸಾಮರ್ಥ್ಯವುಳ್ಳ ನೀರಾವರಿ ನಮ್ಮ ಪ್ರಥಮ ಆದ್ಯತೆಯಾಗಿದೆ. 2006-07ನೇ ಸಾಲಿನಲ್ಲಿ ರಾಜ್ಯದ ಯಾವುದೇ ನೀರಾವರಿ ಯೋಜನೆಗಳು ಸಂಪನ್ಮೂಲಗಳ

ಕೊರತೆಯಿಂದ ಬಳಲದಂತೆ ನೋಡಿಕೊಳ್ಳುತ್ತೇವೆ; ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ 39 ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸುತ್ತೇವೆ ಎಂದು ನಾವು ಭರವಸೆ ನೀಡಿದ್ದೆವು. ಇದೀಗ 2006-07ನೇ ಸಾಲಿನಲ್ಲಿ ನಾವು 35 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಿ 1,27,335 ಹೆಕ್ಟೇರ್ ಜಮೀನನ್ನು ನೀರಾವರಿಗೆ ಒಳಪಡಿಸಿದ್ದೇವೆ. ಗೌರವಾನ್ವಿತ ಸದಸ್ಯರಿಗೆ ಸಂತೋಷದಿಂದ ತಿಳಿಸುತ್ತಿದ್ದೇನೆ. ಈ ಮೂಲಕ 2007-08ನೇ ಸಾಲಿನಲ್ಲಿ 19 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ನಾವು ಪೂರ್ಣಗೊಳಿಸಲಿದ್ದೇವೆ. ಕೆಎನ್‌ಎನ್‌ಎಲ್, ಸಿಎನ್‌ಎನ್‌ಎಲ್ ಮತ್ತು ಕೆಬಿಜೆಎನ್‌ಎಲ್ ಅಡಿಯಲ್ಲಿ ನಡೆಯುತ್ತಿರುವ ನೀರಾವರಿ ಕಾಮಗಾರಿಗಳಿಗೆ ಹಣದ ಕೊರತೆಯಾಗದಂತೆ ನಾವು ನೋಡಿಕೊಳ್ಳುತ್ತೇವೆ.

- ಕಾವೇರಿ ಕಣಿವೆ ಪ್ರದೇಶದ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ ಮತ್ತು ಆಧುನೀಕರಣವನ್ನು ನಾವು ಕೈಗೆತ್ತಿಕೊಳ್ಳಲಿದ್ದೇವೆ.
- ತುಂಗಭದ್ರಾ ಎಡದಂಡೆ ಕಾಲುವೆ ಕಾಮಗಾರಿಗಳು ಮುಂದುವರಿಯಲಿವೆ. ಭದ್ರಾ ಕಾಲುವೆಯ ನೀರನ್ನು ಎಂಟು ತಿಂಗಳುಕಾಲ ನಿಲ್ಲಿಸಿ ಉಳಿಕೆ ಆಧುನೀಕರಣ ಕಾಮಗಾರಿಗಳನ್ನು ಪ್ಯಾಕೇಜ್ ವಿಧಾನದಲ್ಲಿ ಕೈಗೆತ್ತಿಕೊಳ್ಳಲಾಗುವುದು.
- ಕೆಎನ್‌ಎನ್‌ಎಲ್ ಮೂಲಕ ಭದ್ರಾ ಮೇಲ್ದಂಡೆ ಯೋಜನೆಗೆ ಅಗತ್ಯ ಆರ್ಥಿಕ ನೆರವು ಒದಗಿಸಿ ನಿಗದಿತ ಅವಧಿಯಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು. ತುಂಗಾಕಾಲುವೆ, ಗೋಂದಿಕಾಲುವೆ ಮತ್ತು ವಿಜಯನಗರ ಕಾಲುವೆಗಳ ಆಧುನೀಕರಣ ಕಾಮಗಾರಿಯನ್ನು 2007-08ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

- ಕಾಲುವೆಯ ಕೊನೆ ತುದಿಯ ಜಮೀನುಗಳಿಗೆ ಅಗತ್ಯ ನೀರಾವರಿ ಸೌಕರ್ಯ ಕಲ್ಪಿಸಲು ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶದ ಆಯ್ದ ಸ್ಥಳಗಳಲ್ಲಿ ಸಮತೋಲಿತ ಜಲಾಶಯಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.
- ಶ್ರೀ ಶ್ರೀ ರವಿಶಂಕರ್ ಗುರೂಜಿಯವರಿಗೆ ಜ್ಞಾನೋದಯವಾದ ಭದ್ರಾ ಜಲಾಶಯದ ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ.
- ದಾವಣಗೆರೆ ಜಿಲ್ಲೆಯಲ್ಲಿನ 19 ಸಣ್ಣ ನೀರಾವರಿ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿಯನ್ನು 100 ಕೋಟಿ ರೂ.ಗಳ ವೆಚ್ಚದಲ್ಲಿ ಕೆಎನ್ಎನ್ಎಲ್ ಮೂಲಕ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.
- ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಬರ ಪರಿಸ್ಥಿತಿಯನ್ನು ನಿವಾರಿಸಲು ಇಲ್ಲಿನ ಎಲ್ಲಾ ಸಣ್ಣ ನೀರಾವರಿ ಕೆರೆಗಳಿಗೆ 86.10 ಕೋಟಿ ರೂ.ಗಳ ವೆಚ್ಚದಲ್ಲಿ ಕೃಷ್ಣಾ ನದಿಯಿಂದ ನೀರು ಹಾಯಿಸಲು ಉದ್ದೇಶಿಸಲಾಗಿದೆ.
- ಉತ್ತರ ಕರ್ನಾಟಕದ ಜನರ ಬಹಳ ದಿನಗಳ ಬೇಡಿಕೆಯಾದ ಕಳಸಾ-ಬಂಡೂರಿ (ಮಹಾದಾಯಿ ಯೋಜನೆ) ನಾಲಾ ತಿರುವು ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಈ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಅರಣ್ಯೇತರ ಪ್ರದೇಶದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. 2007-08ನೇ ಸಾಲಿನಲ್ಲಿ 30 ಕೋಟಿ ರೂ.ಗಳನ್ನು ಕೆಎನ್ಎನ್ಎಲ್‌ಗೆ ಒದಗಿಸಲಾಗುವುದು.
- ಬಾಗಲಕೋಟೆ ಪುನರ್‌ವಸತಿ ಪ್ಯಾಕೇಜ್‌ನ್ನು ಅನುಷ್ಠಾನಗೊಳಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

- ದಂಡಾವತಿ ನದಿಗೆ ಶಿವಮೊಗ್ಗ ಸೊರಬ ತಾಲ್ಲೂಕಿನ ಜೋಡಿಗೇರಿ ಬಳಿ 200 ಕೋಟಿ ರೂ.ಗಳ ವೆಚ್ಚದಲ್ಲಿ ಜಲಾಶಯ ನಿರ್ಮಿಸಲಾಗುವುದು. ಇದಕ್ಕಾಗಿ 2007-08ನೇ ಸಾಲಿನಲ್ಲಿ 25 ಕೋಟಿ ರೂಗಳನ್ನು ಒದಗಿಸಲಾಗುವುದು. ಕೆಎನ್‌ಎನ್‌ಎಲ್ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಿದೆ.
- ಇಲಾಖೆಯ ಎಂಜಿನಿಯರುಗಳಿಗೆ ತಾಂತ್ರಿಕ, ಆಡಳಿತಾತ್ಮಕ ಮತ್ತು ಕಂಪ್ಯೂಟರ್ ತರಬೇತಿಯನ್ನು ನೀಡಲು ಕೃಷ್ಣರಾಜ ಸಾಗರದಲ್ಲಿರುವ ಕರ್ನಾಟಕ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸಲು 2 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.
- **ಭಾರಿ ಮತ್ತು ಸಣ್ಣ ನೀರಾವರಿಯ ಬಂಡವಾಳ ಕಾಮಗಾರಿಗಳಿಗಾಗಿ 2007-08ನೇ ಸಾಲಿನಲ್ಲಿ 3630 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ನಾನು ಉದ್ದೇಶಿಸಿದ್ದೇನೆ. 19 ಭಾರಿ ನೀರಾವರಿ ಯೋಜನೆಗಳನ್ನು 2007-08ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು.**

**ಸಣ್ಣ ನೀರಾವರಿ:**

30. ನಮ್ಮ ರಾಜ್ಯದ 6.067 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವಲ್ಲಿ ಸಣ್ಣ ನೀರಾವರಿ ಕೆರೆಗಳು ಪ್ರಮುಖ ಪಾತ್ರ ವಹಿಸಿವೆ. ನೀರಾವರಿಯಲ್ಲಿ ಕೆರೆಗಳ ಮಹತ್ವವನ್ನು ಅರಿತಿರುವ ನಾವು ಈ ಕೆರೆಗಳ ಪುನರುಜ್ಜೀವನ ಕಾರ್ಯಕ್ರಮವನ್ನು 677 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳುತ್ತಿದ್ದೇವೆ. **ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ ನಾನು 160 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಿದ್ದೇನೆ.**

31. ರೈತರ ಆತ್ಮಹತ್ಯೆಯ ಹೆಚ್ಚು ಪ್ರಕರಣಗಳು ವರದಿಯಾಗಿರುವ ಜಿಲ್ಲೆಗಳಿಗೆ ಸನ್ಮಾನ್ಯ ಪ್ರಧಾನ ಮಂತ್ರಿಯವರು ವಿಶೇಷ ಪ್ಯಾಕೇಜನ್ನು ಘೋಷಣೆ ಮಾಡಿದ್ದಾರೆ. ರಾಜ್ಯದ ಬೆಳಗಾವಿ, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು ಈ ವಿಶೇಷ ಪ್ಯಾಕೇಜ್‌ನಡಿ ಸಹಾಯಕ್ಕಾಗಿ ಗುರುತಿಸಲ್ಪಟ್ಟಿವೆ. ಈ ಜಿಲ್ಲೆಗಳಲ್ಲಿನ ಸಣ್ಣ ನೀರಾವರಿ ಕೆರೆಗಳನ್ನು 458.20 ಕೋಟಿ ರೂ.ಗಳ ವೆಚ್ಚದಲ್ಲಿ ಮುಂದಿನ ಮೂರು ವರ್ಷಗಳಲ್ಲಿ ನಬಾರ್ಡ್ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು.

**32. ಬೆಂಗಳೂರು ಗ್ರಾಮಾಂತರ ಮತ್ತು ಗುಲ್ಬರ್ಗಾ ಜಿಲ್ಲೆಗಳ ಕೆರೆಗಳ ದುರಸ್ತಿ ಹಾಗೂ ಪುನರುಜ್ಜೀವನವನ್ನು ಪ್ರಾಯೋಗಿಕ ಯೋಜನೆಯಾಗಿ** ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಭಾರತ ಸರ್ಕಾರವು ಅನುದಾನದ ರೂಪದಲ್ಲಿ ಭರಿಸುತ್ತಿದೆ. ಈ ಉದ್ದೇಶಕ್ಕಾಗಿ ನಾನು **2007-08ನೇ ಸಾಲಿನಲ್ಲಿ 200 ಕೋಟಿ ರೂ.ಗಳನ್ನು** ಒದಗಿಸಲಿದ್ದೇನೆ. ಈ ಯೋಜನೆಯನ್ನು ರಾಜ್ಯದ ಇತರೆ ಜಿಲ್ಲೆಗಳಿಗೆ ಕೂಡ ವಿಸ್ತರಿಸುವಂತೆ ನಾವು ಭಾರತ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇವೆ.

**33. ಸಣ್ಣ ನೀರಾವರಿ ಯೋಜನೆಗಳಿಗೆ 2006-07ನೇ ಸಾಲಿನಲ್ಲಿ ನೀಡಲಾಗಿದ್ದ ಅನುದಾನ 603.99 ಕೋಟಿ ರೂ.ಗಳಿಗೆ ಎದುರಾಗಿ 2007-08ನೇ ಸಾಲಿನಲ್ಲಿ 767 ಕೋಟಿ ರೂ.ಗಳ ಅನುದಾನ ಒದಗಿಸಿದ್ದೇನೆ.**

**ಕೃಷಿ ಸಾಲ ಮತ್ತು ಸಹಕಾರ:**

34. ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಕೃಷಿ ಸಾಲ ಒದಗಿಸಲು **ನಾವು ಶೇ.4 ರ ಕಡಿಮೆ ಬಡ್ಡಿದರದ ಯೋಜನೆಯನ್ನು ಜಾರಿಗೊಳಿಸಿದೆವು. ರೈತ**

ಸಮುದಾಯವು ಇದರ ಬಗ್ಗೆ ಮೆಚ್ಚುಗೆ ಮತ್ತು ಕೃತಜ್ಞತೆಗಳನ್ನು ವ್ಯಕ್ತಪಡಿಸಿದೆ. ನಾನು ಈ ಯೋಜನೆಯನ್ನು 2007-08ನೇ ಸಾಲಿನಲ್ಲಿ ಕೂಡ ಮುಂದುವರಿಸಲು ಉದ್ದೇಶಿಸಿದ್ದು **ಇದಕ್ಕಾಗಿ 160 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

35. ಹಿಂದಿನ ಸರ್ಕಾರಗಳು ಘೋಷಣೆ ಮಾಡಿದ್ದ 'ದಾಮ್‌ದುಪ್ಪಟು ಯೋಜನೆ' 'ಸಾಲ ಮನ್ನಾ ಯೋಜನೆ' ಮತ್ತು 'ವಿಫಲ ಬಾವಿಗಳ ಯೋಜನೆ'ಗಳ ಹಣ ಪಾವತಿಯಾಗದೆ ಹಲವಾರು ವರ್ಷಗಳಿಂದ ಬಾಕಿ ಉಳಿದಿದ್ದು, ಸಾಲ ಸಹಕಾರ ವ್ಯವಸ್ಥೆಯನ್ನು ಕುಂಠಿತಗೊಳಿಸಿದೆ. 2006-07ನೇ ಸಾಲಿನಲ್ಲಿ ಇವುಗಳನ್ನು ಇತ್ಯರ್ಥಪಡಿಸಲು ನಾವು ಪ್ರಯತ್ನಪಡುತ್ತಿದ್ದೇವೆ.

36. ಅಪಾರ ಸಂಖ್ಯೆಯ ಸ್ವಸಹಾಯ ತಂಡಗಳು ಸಹಕಾರಿ ವಲಯದಲ್ಲಿ ಅತ್ಯುತ್ತಮ ಸಾಧನೆಯನ್ನು ಮಾಡಿವೆ. **ಈ ತಂಡಗಳಿಗೆ ಶೇ.4ರ** ಬಡ್ಡಿ ದರದಲ್ಲಿ **ಸಹಕಾರ ಸಂಘಗಳಿಂದ** ಸಾಲವನ್ನು ದೊರಕಿಸಿಕೊಡಲು **ನಾನು 15 ಕೋಟಿ ರೂ.ಗಳನ್ನು ಹಂಚಿಕೆ** ಮಾಡಲು ಉದ್ದೇಶಿಸಿದ್ದೇನೆ.

37. **ಸೌಹಾರ್ದ ಸಹಕಾರಿ ಒಕ್ಕೂಟಕ್ಕೆ ನಾನು 50 ಲಕ್ಷ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.**

**ಬೆಳೆಸಾಲ ಮನ್ನಾ:**

38. ರಾಜ್ಯದ ಕೃಷಿಯು 2006-07 ರಲ್ಲಿ ಬರ ಮತ್ತು ಪ್ರವಾಹಕ್ಕೆ ತುತ್ತಾಗಿ ರೈತರು ತೊಂದರೆಗೆ ಈಡಾಗಿದ್ದಾರೆ. ನಮ್ಮ ಸರ್ಕಾರವು ರೈತರ ತೊಂದರೆ ನಿವಾರಿಸಲು ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದಿರುವ

ಅಲ್ಪಾವದಿ ಬೆಳೆ ಸಾಲವನ್ನು ಒಂದು ಬಾರಿಯ ಪರಿಹಾರವಾಗಿ ಮನ್ನಾ ಮಾಡಲು ಉದ್ದೇಶಿಸಿದೆ.

39. ದಿನಾಂಕ:01.04.2006 ದಿಂದೀಚೆಗೆ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31.12.2006 **ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ.** ದಿನಾಂಕ:01.04.2006 ರಿಂದ ಈಚೆಗೆ ರೈತರು ಪಡೆದಿರುವ 25,000 ರೂ.ಗಳಿಗಿಂತ ಹೆಚ್ಚಿನ ಮೊತ್ತದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ಬೆಳೆಸಾಲದ ಸಂಪೂರ್ಣ ಅಸಲನ್ನು 31.03.2007ರೊಳಗಾಗಿ ಪಾವತಿ ಮಾಡಿದರೆ, ಅವರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು. 01.04.2006 ರಿಂದ ಈಚೆಗೆ 25,000 ರೂ.ಗಳ ವರೆಗಿನ ಮೊತ್ತದ ಅಲ್ಪಾವಧಿ ಕೃಷಿ ಸಾಲ ಪಡೆದಿರುವ ರೈತರು ತಮ್ಮ ಸಾಲವನ್ನು 31.12.2006 ರೊಳಗೆ ಪಾವತಿ ಮಾಡಿದ್ದರೆ ಆ ರೈತರ ಸಾಲದ ಮೊತ್ತವನ್ನು ಮೂರು ವರ್ಷಗಳ ನಿಗದಿತ ಠೇವಣಿಯನ್ನಾಗಿ ಪರಿವರ್ತಿಸಿ ಶೇ.4 ರ ಬಡ್ಡಿದರದಲ್ಲಿ 3 ವರ್ಷಗಳ ನಂತರ ರೈತರಿಗೆ ನೀಡಲಾಗುವುದು. ಈ ಅನುಕೂಲವು 25,000 ರೂ.ಗಳವರೆಗಿನ ಅಲ್ಪಾವಧಿ ಬೆಳೆ ಸಾಲದ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸರ್ಕಾರವು 25,000 ರೂ.ಗಳ ವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮನ್ನಾ ಮಾಡಲು ಉದ್ದೇಶಿಸಿರುವುದರಿಂದ ಇದಕ್ಕೆ ಸಂಬಂಧಿಸಿದಂತೆ ದೊರೆಯಲಿರುವ ಬೆಳೆ ವಿಮೆ ಪರಿಹಾರವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಈ ಸೌಲಭ್ಯವನ್ನು ನಮ್ಮ ರೈತ ಸಮುದಾಯಕ್ಕೆ ನೀಡುವುದರಿಂದ ಸರ್ಕಾರಕ್ಕೆ ಒಟ್ಟಾರೆ 1,505 ಕೋಟಿ ರೂ.ಗಳಷ್ಟು ಹೊರೆಯಾಗಲಿದೆ. ಈ ಹೊರೆಯ ಸ್ವಲ್ಪ ಭಾಗವನ್ನು 2006-07ನೇ ಆರ್ಥಿಕ ವರ್ಷದಲ್ಲಿಯೇ ಭರಿಸಲಾಗುವುದು. **2007-08ನೇ**

**ಸಾಲಿನಲ್ಲಿ ಈ ಉದ್ದೇಶಕ್ಕಾಗಿ ನಾನು 500 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.**

**ಕೃಷಿ ಉತ್ಪಾದನೆಗೆ ಬೆಂಬಲ:**

40. ನಮ್ಮ ಸರ್ಕಾರವು ಕೃಷಿಗೆ ಬೆಂಬಲ ನೀಡಲು ಮತ್ತು ಆಧುನಿಕ ಕೃಷಿ ತಂತ್ರಜ್ಞಾನಕ್ಕೆ ಉತ್ತೇಜನ ನೀಡಲು ಹಲವಾರು ವಿನೂತನ ಕ್ರಮಗಳನ್ನು 2006-07ನೇ ಸಾಲಿನಲ್ಲಿ ಕೈಗೊಂಡಿತ್ತು. ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಶೇ.75ರ ಸಹಾಯಧನದಲ್ಲಿ ಬಿತ್ತನೆ ಬೀಜವನ್ನು ವಿತರಿಸಿತ್ತು. ಶೇ.50 ರ ಸಹಾಯ ಧನದಲ್ಲಿ ರೈತರಿಗೆ ಎತ್ತು ಮತ್ತು ಗಾಡಿಗಳನ್ನು ಒದಗಿಸಿತ್ತು. ಹನಿ ನೀರಾವರಿಗೆ ಶೇ.75 ರ ಸಹಾಯಧನವನ್ನು ಒದಗಿಸಲಾಗಿತ್ತು.

41. 2006-07ರಲ್ಲಿ ಚಾಲನೆ ನೀಡಿದ್ದ ಈ ಎಲ್ಲಾ ಯೋಜನೆಗಳನ್ನು ಮುಂದುವರೆಸಲು ನಾನು ಉದ್ದೇಶಿಸಿದ್ದೇನೆ. ಸಣ್ಣ ಮತ್ತು ಅತೀ ಸಣ್ಣ **ರೈತರಿಗೆ 2007-08ನೇ ಸಾಲಿನಲ್ಲಿ ಶೇ.75ರ ಸಹಾಯಧನದಲ್ಲಿ ಬಿತ್ತನೆ ಬೀಜ ವಿತರಿಸಲು ನಾನು 80 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.**

42. **50,000 ಮಂದಿ ರೈತರಿಗೆ ಎತ್ತುಗಳನ್ನು ವಿತರಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.** ಇದರಿಂದ ಪ್ರತೀ ತಾಲ್ಲೂಕಿನಲ್ಲಿ 285 ರೈತರು ಈ ನೆರವನ್ನು ಪಡೆಯಲಿದ್ದಾರೆ.

43. ಕೃಷಿ ಯಾಂತ್ರಿಕರಣಕ್ಕೆ ನೆರವು ನೀಡಲು ನಾನು 39 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಪ್ರತಿ ತಾಲ್ಲೂಕಿನಲ್ಲಿ 10

ಟ್ರಾಕ್ಟರ್‌ಗಳು, 10 ಮಿನಿಟ್ರಾಕ್ಟರ್‌ಗಳು, 20 ಪವರ್ ಟಿಲ್ಲರ್‌ಗಳು ಫಲಾನುಭವಿ ರೈತರಿಗೆ ಶೇ.50 ರ ಸಹಾಯಧನದಲ್ಲಿ ದೊರೆಯಲಿವೆ.

44. ಪೆಟ್ರೋಲಿಯಂ ಇಂಧನ ಬಿಕ್ಕಟ್ಟನ್ನು ಪರಿಹರಿಸಲು ಜೈವಿಕ ಇಂಧನಗಳು ಆಶಾದಾಯಕವಾಗಿ ಒಡಮೂಡುತ್ತಿವೆ. ಈ ಹಿನ್ನೆಲೆಯಲ್ಲಿ ನಾನು **'ಕರ್ನಾಟಕ ಜೈವಿಕ ಇಂಧನ ಕಾರ್ಯಕ್ರಮ'ಕ್ಕೆ** ಚಾಲನೆ ನೀಡಲಿದ್ದೇನೆ. ಈ ಯೋಜನೆಯ ಮೊದಲ ಹಂತವು ಮುಂದಿನ ಏಳು ವರ್ಷಗಳವರೆಗೆ ವಿಸ್ತರಣೆಯಾಗಲಿದೆ. ಇದಕ್ಕಾಗಿ ಕೃಷಿ ಇಲಾಖೆಯಲ್ಲಿ ಪ್ರತ್ಯೇಕ ಯೋಜನಾ ಘಟಕ ಸ್ಥಾಪಿಸಿ ರಾಜ್ಯದ ಆಯ್ದ 15 ತಾಲ್ಲೂಕುಗಳಲ್ಲಿ ಚಟುವಟಿಕೆ ಹಮ್ಮಿಕೊಳ್ಳಲಾಗುವುದು. ಪ್ರಸ್ತುತ ನಿಷ್ಕ್ರಿಯವಾಗಿರುವ ಕೃಷಿ ಫಾರಂಗಳನ್ನು ಈ ಯೋಜನೆಯಡಿ ಸಕ್ರಿಯಗೊಳಿಸಲಾಗುವುದು. ಈ ಯೋಜನೆಯ ಅನುಷ್ಠಾನ ಉಸ್ತುವಾರಿಯನ್ನು ನೋಡಿಕೊಳ್ಳಲು ಕರ್ನಾಟಕ ಸರ್ಕಾರದ ಕೃಷಿ ಉತ್ಪಾದನಾ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಜ್ಞಾನಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಬ್ಯಾಂಕರ್‌ಗಳ ಅಧಿಕಾರ ಸಮಿತಿಯನ್ನು ರಚಿಸಲಾಗುವುದು. **ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 4 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.**

45. ಕರ್ನಾಟಕ ರಾಜ್ಯವು ಪ್ರಸ್ತುತ ಉದಯಿಸುತ್ತಿರುವ ಕ್ಷೇತ್ರವಾದ ಬಿತ್ತನೆ ಬೀಜವಲಯದಲ್ಲಿ ಹೆಸರಾಗಿದೆ. ಆದ್ದರಿಂದ ನಾವೀಗ ನಮ್ಮನ್ನು ಕೇವಲ ಆಂತರಿಕ ಬೀಜ ಮಾರುಕಟ್ಟೆಗೆ ಸೀಮಿತಗೊಳಿಸಿಕೊಳ್ಳದೆ ಜಾಗತಿಕ ಬಿತ್ತನೆ ಮಾರುಕಟ್ಟೆಗೂ ವಿಸ್ತರಿಸಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಸರ್ಕಾರದ ನೂತನ ಯೋಜನೆಯಾದ **'ಕರ್ನಾಟಕ-ಜಾಗತಿಕ ಬೀಜ ತಾಣ' ಕಾರ್ಯಕ್ರಮಕ್ಕೆ ನಾನು 5 ಕೋಟಿ** ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಕೃಷಿ ಇಲಾಖೆಯಲ್ಲಿ ಇದಕ್ಕಾಗಿ ಪ್ರತ್ಯೇಕ ಯೋಜನಾ ಘಟಕವನ್ನು ಸ್ಥಾಪಿಸಲಾಗುವುದು. ಈ ಯೋಜನೆಯ ಉಸ್ತುವಾರಿ ನೋಡಿಕೊಳ್ಳಲು

ರಾಜ್ಯದ ಕೃಷಿ ಉತ್ಪಾದನಾ ಆಯುಕ್ತರ ಅಧ್ಯಕ್ಷತೆಯಲ್ಲಿ ವಿಜ್ಞಾನಿಗಳು, ಬೀಜ ಕಂಪನಿಗಳು, ಭಾರತ ಸರ್ಕಾರದ ಪ್ರತಿನಿಧಿಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಬ್ಯಾಂಕರ್‌ಗಳನ್ನು ಒಳಗೊಂಡ ಅಧಿಕಾರಸ್ಥರ ಸಮಿತಿಯನ್ನು ರಚಿಸಲಾಗುವುದು.

**ತೋಟಗಾರಿಕೆ:**

46. ತೋಟಗಾರಿಕೆ ಕರ್ನಾಟಕದಲ್ಲಿ ವೇಗವಾಗಿ ಬೆಳೆಯುತ್ತಿದೆ. ಕೇಂದ್ರ ಸರ್ಕಾರದ ನೆರವಿನ **'ರಾಷ್ಟ್ರೀಯ ತೋಟಗಾರಿಕಾ ಮಿಷನ್'** ಕಾರ್ಯಕ್ರಮ ಅನುಷ್ಠಾನವನ್ನು ನಾವು ರಾಜ್ಯದಲ್ಲಿ ಮುಂದುವರೆಸುತ್ತೇವೆ. ಈ ಯೋಜನೆಗೆ ಅಗತ್ಯವಾದ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಒದಗಿಸಲಾಗುವುದು.

47. **ಹನಿ ನೀರಾವರಿ ಯೋಜನೆಯನ್ನು ಉತ್ತೇಜಿಸಲು ನಾನು 20 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.** ಪ್ರಸ್ತುತ ಜಾರಿಯಲ್ಲಿರುವ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಿಗೆ ಶೇ.100ರ ಸಹಾಯಧನ ಮತ್ತು ಉಳಿದ ಜಿಲ್ಲೆಗಳಿಗೆ ಶೇ.75ರ ಸಹಾಯಧನ ಪದ್ಧತಿಯು ಮುಂದುವರೆಯಲಿದೆ.

48. ಇತರೆ ಮೈದಾನ ಬೆಳೆಗಳಿಗೆ ಅಗತ್ಯವಿರುವಂತೆ ಆಧುನಿಕ ಉಪಕರಣಗಳು ತೋಟಗಾರಿಕೆ ಉತ್ತೇಜನಕ್ಕೂ ಅಗತ್ಯವಿದೆ. ತೋಟಗಾರಿಕೆ ಬೆಳೆಗಾರರಲ್ಲಿ ಯಾಂತ್ರೀಕರಣವನ್ನು ಉತ್ತೇಜಿಸಲು 2007-08ನೇ ಸಾಲಿನಲ್ಲಿ 5 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

49. ಅಡಿಕೆ ಬೆಳೆಗೆ ಕೊಳೆ ರೋಗ ಮತ್ತು ದಾಳಿಂಬೆ ಬೆಳೆಗೆ ಬ್ಯಾಕ್ಟೀರಿಯ ಕಾಟ ಗಂಭೀರ ತೊಂದರೆಗಳಾಗಿವೆ. ಆದ್ದರಿಂದ ಕೀಟ ನಿಯಂತ್ರಣ ಚಟುವಟಿಕೆಗಳಿಗೆ ಬೆಂಬಲ ನೀಡಲು 3 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

50. ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉತ್ಪಾದನೆ, ಸಂಸ್ಕರಣೆ, ಸಂಗ್ರಹಣೆ ಮತ್ತು ಮಾರುಕಟ್ಟೆ ತಂತ್ರಜ್ಞಾನಗಳನ್ನು ಜನಪ್ರಿಯಗೊಳಿಸಲು ನಾನು **'ಕರ್ನಾಟಕ ಕೃಷಿ ವಾಣಿಜ್ಯ ಮೇಳ ಪ್ರಾಧಿಕಾರ'**ವನ್ನು ರಾಜ್ಯದ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ. ಮುಂಗಾರು ಮತ್ತು ಹಿಂಗಾರು ಕೃಷಿ ವಾಣಿಜ್ಯ ಮೇಳಗಳನ್ನು ಸಂಘಟಿಸುವ ಜವಾಬ್ದಾರಿ ಈ ಪ್ರಾಧಿಕಾರದ್ದಾಗಿರುತ್ತದೆ. ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಪೂಂಜನಹಳ್ಳಿ ತೋಟಗಾರಿಕೆ ಕೇಂದ್ರವನ್ನು ಶಾಶ್ವತ **'ವಾಣಿಜ್ಯ ಮೇಳ ತಾಣವನ್ನಾಗಿ'** ಅಭಿವೃದ್ಧಿ ಪಡಿಸಲಾಗುವುದು.

**ಕೃಷಿ ಸಂಶೋಧನೆ:**

51. ಕೃಷಿ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳು ಕೃಷಿ ಅಭಿವೃದ್ಧಿಗೆ ಪ್ರಮುಖವಾಗಿವೆ.

**ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ:**

52. ನಮ್ಮ ಬೇಸಾಯದಲ್ಲಿ ತೋಟಗಾರಿಕೆಯ ಪ್ರಾಬಲ್ಯ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ಬಾಗಲಕೋಟೆಯನ್ನು ಕೇಂದ್ರಸ್ಥಾನವನ್ನಾಗಿಟ್ಟುಕೊಂಡು **'ಕರ್ನಾಟಕ ತೋಟಗಾರಿಕೆ ವಿಶ್ವವಿದ್ಯಾಲಯ'**ಯವನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ನಾನು 10 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಿದ್ದೇನೆ.

53. ಬೀದರ್ ಜಿಲ್ಲೆಯಲ್ಲಿ ತೋಟಗಾರಿಕೆ ಉತ್ತೇಜನಕ್ಕೆ ಅತ್ಯುತ್ತಮ ಅವಕಾಶಗಳಿದ್ದು, ಬೀದರ್‌ನಲ್ಲಿ ತೋಟಗಾರಿಕೆ ಕಾಲೇಜನ್ನು ಸ್ಥಾಪಿಸಲು ನಾನು 4 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

54. ಹಳದಿ ಎಲೆರೋಗ ಮತ್ತು ಕೊಳೆ ರೋಗಗಳು ಅಡಿಕೆ ಬೆಳೆಯನ್ನು ಬಾಧಿಸುತ್ತಿವೆ. ಶೃಂಗೇರಿಯಲ್ಲಿ ಅಡಿಕೆ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಅಗತ್ಯವಿರುವ ಮಾನವಶಕ್ತಿ, ಉಪಕರಣ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲು ನಾನು 2 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

55. ದಾಳಿಂಬೆ ಬೇಸಾಯಕ್ಕೆ ಬ್ಯಾಕ್ಟೀರಿಯ ಕಾಟದಿಂದ ನಷ್ಟವಾಗುತ್ತಿದ್ದು ಈ ರೋಗದ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಲು ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ನಾನು 50 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

56. ಉತ್ತರ ಕರ್ನಾಟಕದಲ್ಲಿ ಡೈರಿ ಚಟುವಟಿಕೆಗೆ ಉತ್ತೇಜನ ನೀಡಲು ನಮ್ಮ ಸರ್ಕಾರಗಳು ಸಂಕಲ್ಪ ತಳೆದಿದೆ. ಈ ನಿಟ್ಟಿನಲ್ಲಿ ಗುಲ್ಬರ್ಗದಲ್ಲಿ **ಡೈರಿ ವಿಜ್ಞಾನ ಕಾಲೇಜನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ 6 ಕೋಟಿ** ರೂ.ಗಳನ್ನು ಒದಗಿಸಲಾಗುವುದು.

57. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ 30 ಕೋಟಿ ರೂ.ಗಳ ವೆಚ್ಚದಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ ಸಂಭಾಗಣವನ್ನು ನಿರ್ಮಿಸಲಾಗುವುದು. ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 8 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

58. ನೂತನ ಔಷಧಿಗಳ ಕ್ಲಿನಿಕಲ್ ಪ್ರಯೋಗ ಕ್ಷೇತ್ರದಲ್ಲಿ ಮತ್ತು ಕೃಷಿ ಮಾಲಿಕ್ಯೂಲ್ಸ್‌ಗಳ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳು ಹೊರಹೊಮ್ಮುತ್ತಿವೆ. ಎವಿಯನ್ ಟಾಕ್ಸಿಸಿಟಿ ಮತ್ತು ಮೆಮೆಲಿಯನ್ ಟಾಕ್ಸಿಸಿಟಿ ಅಧ್ಯಯನಗಳು

ಕ್ಲಿನಿಕಲ್ ಪ್ರಯೋಗದ ಅಂಗಗಳಾಗಿವೆ. ಈ ಕ್ಷೇತ್ರದಲ್ಲಿ ವಿಪುಲ ವಾಣಿಜ್ಯ ಅವಕಾಶಗಳಿದ್ದು, ಕ್ಲಿನಿಕಲ್ ಪ್ರಯೋಗಗಳನ್ನು ನಡೆಸಲು ಅಗತ್ಯ ತರಬೇತಿ ನೀಡುವ ಸಲುವಾಗಿ ನಾನು ಶಿವಮೊಗ್ಗದಲ್ಲಿ **'ಟಾಕ್ಸಿಕೊಲಾಜಿಕಲ್ ಅಧ್ಯಯನ ಕೇಂದ್ರ'**ವನ್ನು 2 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ.

59. ವ್ಯಾಕ್ಸಿನ್ ಅಭಿವೃದ್ಧಿ ವಲಯದಲ್ಲಿ ಮೂಡಿಬರುತ್ತಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು **'ವ್ಯಾಕ್ಸಿನ್‌ಗಳ ಅಧ್ಯಯನ ಕೇಂದ್ರ'**ವನ್ನು ಬೆಳಗಾವಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ.

60. ವನ್ಯಜೀವಿಗಳ ಜೀವಶಾಸ್ತ್ರ ಕೂಡ ಮತ್ತೊಂದು ಹೊಸ ವಲಯವಾಗಿದೆ. ವನ್ಯಪ್ರಾಣಿಗಳ ರೋಗ ಅಧ್ಯಯನವು ಜಾಗತಿಕ ಪ್ರಭಾವವನ್ನು ಹೊಂದಿದೆ. ಆದ್ದರಿಂದ ನಾನು **'ವನ್ಯಜೀವಿ ಪಶುವೈದ್ಯಕೀಯ ಅಧ್ಯಯನ ಸಂಸ್ಥೆ'**ಯನ್ನು 2 ಕೋಟಿ ರೂ.ಗಳ ವೆಚ್ಚದಲ್ಲಿ ಮಡಿಕೇರಿಯಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದೇನೆ.

**ಪಶು ಸಂಗೋಪನೆ:**

61. ಉಪ ಕಸುಬಾಗಿದ್ದ ಪಶುಸಂಗೋಪನೆ ಈಗ ಪ್ರಮುಖ ಕಸುಬಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಡೈರಿ ಚಟುವಟಿಕೆ ರೈತರಿಗೆ ಪ್ರಧಾನವಾಗಿದೆ. ಜಾನುವಾರುಗಳಿಗೆ ತಗುಲುವ ಸಾಂಕ್ರಾಮಿಕ ಕಾಲುಬಾಯಿ ಜ್ವರವು ಹಾಲು ನೀಡುವ ಹಸು, ಎಮ್ಮೆಗಳಿಗೆ ತಗುಲಿ ಸತ್ತರೆ ರೈತರಿಗೆ ಅಪಾರ ನಷ್ಟ ಉಂಟಾಗುತ್ತದೆ. ಆದ್ದರಿಂದ ಈ ಕಾಯಿಲೆಯನ್ನು ನಿಯಂತ್ರಿಸುವ ಕಾರ್ಯಚಟುವಟಿಕೆಗಳಿಗೆ 8 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

62. ಸ್ಥಳೀಯ ದೇಶಿ ಜಾನುವಾರುಗಳ ಸಂರಕ್ಷಣೆಯ ನಮ್ಮ ಆದ್ಯತೆ ಮುಂದುವರಿಯಲಿದೆ. ಸುಧಾರಿತ ತಳಿ ಹಸುಗಳ ಅಭಿವೃದ್ಧಿಗಾಗಿ ಪಶುಸಂಗೋಪನಾ ಕೇಂದ್ರಗಳನ್ನು ಗುತ್ತಿಗೆ ಆಧಾರದಲ್ಲಿ ನೀಡುವ ನಮ್ಮ ಹಿಂದಿನ ನೀತಿಯು ಸಹ ಮುಂದುವರೆಯಲಿದೆ. 2007-08ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ರಾಮಚಂದ್ರಪುರದಲ್ಲಿ ನಡೆಯಲಿರುವ **ವಿಶ್ವ ಗೋ ಸಂರಕ್ಷಣಾ ಸಮ್ಮೇಳನಕ್ಕಾಗಿ** ನಾನು 2 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

63. ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ನೂತನ ಪಶು ಚಿಕಿತ್ಸಾಲಯಗಳನ್ನು ಮತ್ತು ಸಂಚಾರಿ ಕ್ಲಿನಿಕ್‌ಗಳನ್ನು ಆರಂಭಿಸಲು 28.70 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

64. ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಡೈರಿ ಚಟುವಟಿಕೆ ಇನ್ನೂ ಬಲವಾಗಿ ಬೇರೂರಬೇಕಾಗಿದೆ. ಈ ಎರಡು ಜಿಲ್ಲೆಗಳ ಹಾಲು ಒಕ್ಕೂಟಗಳಿಗೆ ಬೆಂಬಲ ನೀಡಲು ಮತ್ತು ಡೈರಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ನಾನು 6 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

65. **ಕುರಿಸಾಕಾಣಿಕೆ ಚಟುವಟಿಕೆಗಳಿಗೆ ಕುರಿ ಅಭಿವೃದ್ಧಿ ನಿಗಮದ ಮೂಲಕ ನೆರವು ನೀಡಲು** ನಾನು 10 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ. ಸುಧಾರಿತ ತಳಿಯ ಕುರಿ ಮತ್ತು ಮೇಕೆಗಳನ್ನು ಶೇ.25ರ ಸಹಾಯಧನದಲ್ಲಿ ಒದಗಿಸಲಾಗುವುದು. ನಮ್ಮ ಹಿಂದಿನ ಯೋಜನೆಗಳು ಮುಂದುವರಿಯಲಿವೆ.

**ಕೃಷಿ ಮಾರುಕಟ್ಟೆ:**

66. ನಮ್ಮ ಸರ್ಕಾರವು **'ಕರ್ನಾಟಕ ಕೃಷಿ ಸರಕುಗಳ ಮುನ್ನಡೆ ಮಾರುಕಟ್ಟೆಗಳ ಆಯೋಗ'** ಎನ್ನುವ ಖಾಯಂ ಸಂಸ್ಥೆಯನ್ನು ಸ್ಥಾಪಿಸಲು

ಉದ್ದೇಶಿಸಿದೆ. ಈ ಆಯೋಗವು ಕೃಷಿ ಸರಕುಗಳಿಗೆ ಸಂಬಂಧಿಸಿದ ಉಪಕರಣಗಳ ವಾಣಿಜ್ಯಕ್ಕೆ ಮಾತ್ರ ಸೀಮಿತಗೊಳ್ಳದೆ ರೈತರು ಮತ್ತು ಸರಕು ಮಾರುಕಟ್ಟೆಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಆರಂಭಿಕ ವೆಚ್ಚಕ್ಕಾಗಿ 1 ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

67. ಮಾರುಕಟ್ಟೆ ಸ್ಥಿರ ಆವರ್ತ ನಿಧಿಯನ್ನು ಮುನ್ನೂರು ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

**ಮೀನುಗಾರಿಕೆ:**

68. ಮೀನುಗಾರರಿಗೆ ವಸತಿ ಕಲ್ಪಿಸುವ **'ಮತ್ಸ್ಯ ಆಶ್ರಯ'** ಯೋಜನೆಯನ್ನು ಇನ್ನು ಮುಂದೆ ಮೀನುಗಾರಿಕೆ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಲಿದೆ. ಇದಕ್ಕಾಗಿ **ನಾನು 10 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.**

69. ಸಾಲ ಮನ್ನಾ ಯೋಜನೆಯು ರೈತರಿಗೆ ಅನ್ವಯವಾಗುವ ರೀತಿಯಲ್ಲಿಯೇ ಮೀನುಗಾರರಿಗೂ ಕೂಡ ಅನ್ವಯಿಸುತ್ತದೆ. ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳಿಂದ ಮೀನುಗಾರರು ದಿನಾಂಕ:01.04.2006 ರಿಂದ ಈಚೆಗೆ ಪಡೆದಿರುವ 25,000 ರೂ.ಗಳ ವರೆಗಿನ ಹಾಗೂ 31.12.2006ರವರೆಗೆ ಬಾಕಿ ಉಳಿಸಿಕೊಂಡಿರುವ ಎಲ್ಲಾ ಅಲ್ಪಾವಧಿ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ. ದಿನಾಂಕ:01.04.2006 ರಿಂದ ಈಚೆಗೆ ಮೀನುಗಾರರು ಪಡೆದಿರುವ 25,000 ರೂ.ಗಳಿಗಿಂತ ಹೆಚ್ಚಿನ ಮೊತ್ತದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ, ಸಾಲದ ಸಂಪೂರ್ಣ ಅಸಲನ್ನು 31.03.2007ರೊಳಗಾಗಿ ಪಾವತಿ ಮಾಡಿದರೆ, ಅವರ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು. 01.04.2006

ರಿಂದ ಈಚೆಗೆ 25,000 ರೂ.ಗಳ ವರೆಗಿನ ಮೊತ್ತದ ಅಲ್ಪಾವಧಿ ಸಾಲ ಪಡೆದಿರುವ ಮೀನುಗಾರರು ತಮ್ಮ ಸಾಲವನ್ನು 31.12.2006 ರೊಳಗೆ ಪಾವತಿ ಮಾಡಿದ್ದರೆ ಆ ಮೀನುಗಾರರ ಸಾಲದ ಮೊತ್ತವನ್ನು ಮೂರು ವರ್ಷಗಳ ನಿಗದಿತ ಠೇವಣಿಯನ್ನಾಗಿ ಪರಿವರ್ತಿಸಿ ಶೇ.4 ರ ಬಡ್ಡಿ ಸೇರಿಸಿ 3 ವರ್ಷಗಳ ನಂತರ ಮೀನುಗಾರರಿಗೆ ನೀಡಲಾಗುವುದು. ಈ ಅನುಕೂಲವು 25,000 ರೂ.ಗಳವರೆಗಿನ ಅಲ್ಪಾವಧಿ ಸಾಲದ ಮೊತ್ತಕ್ಕೆ ಮಾತ್ರ ಸೀಮಿತವಾಗಿರುತ್ತದೆ.

70. ನಮ್ಮ ಸರ್ಕಾರವು **ಮೀನುಗಾರಿಕೆ ಅಭಿವೃದ್ಧಿ ನಿಗಮವನ್ನು ಪುನಶ್ಚೇತನಗೊಳಿಸಿದೆ.** ಈ ಪುನಶ್ಚೇತನ ಚಟುವಟಿಕೆಯ ಅಂಗವಾಗಿ ನಿಗಮವು ರಾಜ್ಯದ 10 ಪ್ರಮುಖ ನಗರಗಳಲ್ಲಿ ಮೀನು ಮಾರಾಟ ಕೇಂದ್ರಗಳನ್ನು ತೆರೆಯಲಿದೆ. ಈ ಉದ್ದೇಶಕ್ಕಾಗಿ ಹಾಗೂ ಇತರೆ ಮಾರುಕಟ್ಟೆ ಸಂಬಂಧಿ ಚಟುವಟಿಕೆಗಳಿಗೆ ನೆರವಾಗಲು ನಾನು 10 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

**ಪ್ರಾಂತೀಯ ಅಸಮತೋಲನೆ:**

71. ಕರ್ನಾಟಕದಲ್ಲಿರುವ ಪ್ರಾಂತೀಯ ಅಸಮತೋಲನೆಯು ಸರ್ವರಿಗೂ ತಿಳಿದ ವಿಷಯವೇ. ಈ ಅಸಮತೋಲನೆಯನ್ನು ಹೋಗಲಾಡಿಸಲು ಸರ್ಕಾರವು ದಿವಂಗತ ಡಾ: ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದು, ಆ ಸಮಿತಿಯು ಪ್ರಾಂತೀಯ ಅಸಮತೋಲನೆಯನ್ನು ಹೋಗಲಾಡಿಸುವ ಬಗ್ಗೆ ತನ್ನ ವರದಿಯನ್ನು ನೀಡಿರುತ್ತದೆ. ಈ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ನಮ್ಮಲ್ಲಿ ಯಾರಿಗೂ ಸಹ ಭಿನ್ನಮತ ಇರುವುದಿಲ್ಲ. ಆದರೆ ಈವರೆಗೆ ನಾವು ಈ ವರದಿಯ ಸಲಹೆಗಳನ್ನು ಎಲ್ಲರಿಗೂ ಒಪ್ಪುವಂತೆ ಒಂದು ವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗಿರುವುದಿಲ್ಲ.

72. ಈ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗುತ್ತಿದ್ದೇವೆ. ಡಾ: ನಂಜುಂಡಪ್ಪ ಸಮಿತಿಯ ವರದಿಯ ಪ್ರಕಾರ ಸುಮಾರು 15 ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಹಿಂದುಳಿದ ಪ್ರದೇಶಗಳಲ್ಲಿ ಹೂಡುವುದರ ಜೊತೆಗೆ ಹೆಚ್ಚುವರಿಯಾಗಿ ಸುಮಾರು 16 ಸಾವಿರ ಕೋಟಿ ರೂಪಾಯಿಗಳಷ್ಟು ಹೂಡಿಕೆಯನ್ನು ಮುಂದಿನ 8 ವರ್ಷಗಳಲ್ಲಿ ಮಾಡಬೇಕಾಗುತ್ತದೆ. ಯಾವ ಯಾವ ಕ್ಷೇತ್ರಗಳಲ್ಲಿ ಎಷ್ಟು ಹಂಚಿಕೆಯನ್ನು ಮಾಡಬೇಕಾಗಿದೆ ಎನ್ನುವುದನ್ನು ಸಹ ಸಮಿತಿ ತಿಳಿಸಿರುತ್ತದೆ. ಡಾ: ನಂಜುಂಡಪ್ಪ ಸಮಿತಿಯು ನೀಡಿರುವ ಸಲಹೆಯನ್ನು ಆಧರಿಸಿ ಮುಂದಿನ 8 ವರ್ಷಗಳಲ್ಲಿ ಅನುಷ್ಠಾನಗೊಳಿಸಬಹುದಾದ ಒಂದು **"ವಿಶೇಷ ಅಭಿವೃದ್ಧಿ ಯೋಜನೆ"** (Special Development Plan) ಯನ್ನು ತಯಾರು ಮಾಡಲು ನಾವು ಪ್ರಯತ್ನ ಪಟ್ಟಿರುತ್ತೇವೆ. ಹಂಚಿಕೆ ಮಾಡುವಾಗ ಶೇ.5 ರಷ್ಟು ಉಂಟಾಗಬಹುದಾದ ಹಣದುಬ್ಬರವನ್ನು ಸಹ ಪರಿಗಣಿಸಲಾಗಿದೆ. ಈ ವಿಶೇಷ ಅಭಿವೃದ್ಧಿ ಯೋಜನೆಯನ್ನು ಗೌರವಾನ್ವಿತ ಸದನದ ಮುಂದೆ ಪ್ರಸ್ತುತ ಪಡಿಸಲಾಗುವುದು.

73. ಈಗ "ವಿಶೇಷ ಅಭಿವೃದ್ಧಿ ಯೋಜನೆ"ಯು ನಮಗೆ ಲಭ್ಯವಿರುವುದರಿಂದ ನಾವು ತಕ್ಷಣವೇ ಕಾರ್ಯೋನ್ಮುಖವಾಗಬೇಕಾಗಿದೆ. ಈ ಯೋಜನೆಯ ಪ್ರಕಾರ 2007-08ನೇ ಸಾಲಿನಲ್ಲಿ ನಾವು ಇತರೆ ಕಾರ್ಯಕ್ರಮಗಳಲ್ಲಿ ನೀಡಿರುವ ಅನುದಾನದ ಜೊತೆಗೆ ಹೆಚ್ಚುವರಿಯಾಗಿ 1536 ಕೋಟಿ ರೂ.ಗಳನ್ನು ಪ್ರಾದೇಶಿಕ ಅಸಮತೋಲನೆ ನಿವಾರಣೆಗಾಗಿ ಮೀಸಲಿಡಬೇಕಾಗಿದೆ. ಇದೇ ಲೆಕ್ಕಾಚಾರದನ್ವಯ 2007-08ನೇ ಸಾಲಿಗೆ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು **ನಾನು 1571 ಕೋಟಿ ರೂ.ಗಳನ್ನು ಹೊಂದಿಸಲು ಪ್ರಸ್ತಾಪಿಸಿರುತ್ತೇನೆ.** ಯಾವ ಯಾವ ಕ್ಷೇತ್ರಗಳಲ್ಲಿ ಈ ಹಣವನ್ನು ಹೂಡಿಕೆ ಮಾಡಬೇಕೆನ್ನುವುದನ್ನು ಮತ್ತು ಯಾವ ಯಾವ ಲೆಕ್ಕ ಶೀರ್ಷಿಕೆಯಲ್ಲಿ ಈ ಹಣವನ್ನು ಅಡಕ

ಮಾಡಲಾಗುವುದು ಎನ್ನುವುದನ್ನು "ವಿಶೇಷ ಅಭಿವೃದ್ಧಿ ಯೋಜನೆ" ಯಲ್ಲಿ ಅಳವಡಿಸಲಾಗಿದೆ.

74. ಅತ್ಯಂತ ಹೆಚ್ಚು ಹಿಂದುಳಿದ, ಹೆಚ್ಚು ಹಿಂದುಳಿದ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಈ ಹಣವನ್ನು ಹಂಚುವಾಗ 50:30:20ರ ಅನುಪಾತದಂತೆ ಹಣವನ್ನು ವಿನಿಯೋಗಿಸಬೇಕೆನ್ನುವ ಸಲಹೆಯನ್ನು ಸಹ ಸದನದ ಮುಂದೆ ಇಡುತ್ತಿದ್ದೇನೆ. ಪ್ರತಿಯೊಂದು ಇಲಾಖೆಯು ಆ ಇಲಾಖೆಗೆ ಸಂಬಂಧಪಟ್ಟ ವಿಶೇಷ ಅಭಿವೃದ್ಧಿ ಯೋಜನೆಯ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ವಾರ್ಷಿಕ ಯೋಜನೆಯನ್ನು ತಯಾರಿಸಬೇಕಾಗಿರುತ್ತದೆ. ಯೋಜನಾ ಇಲಾಖೆಯಲ್ಲಿ ವಿಶೇಷ ಯೋಜನೆಯನ್ನು ಉಸ್ತುವಾರಿ ಮಾಡಲು ಒಂದು ವಿಶೇಷ ಕೋಶವನ್ನು ತೆರೆಯಲಾಗುವುದು. ಇದಲ್ಲದೇ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ಈ ಸಮಿತಿಯ ಮುಖೇನ ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಸಮೀಕ್ಷೆ ಮಾಡಲಾಗುವುದು.

75. ನಮ್ಮ ನೆಚ್ಚಿನ ಖ್ಯಾತ ಅರ್ಥಶಾಸ್ತ್ರಜ್ಞರಾದ ಶ್ರೀ ಅಮಾರ್ಥ್ಯಸೇನ್ ರವರು ಮೂಲ ಸವಲತ್ತುಗಳ ವಂಚನೆಗೆ ಪ್ರಾಂತೀಯ ಭಿನ್ನತೆ ಹೇಗೆ ಕಾರಣವಾಗುತ್ತದೆ ಎನ್ನುವುದನ್ನು ಪ್ರಸ್ತಾಪಿಸುವಾಗ ಜನರ ಜೀವನ ಗುಣಮಟ್ಟದ ವೃದ್ಧಿ ಮತ್ತು ಮಾನವ ಸಾಮರ್ಥ್ಯಗಳನ್ನು ವೃದ್ಧಿಯಲ್ಲಿ ಸಾರ್ವಜನಿಕ ನೀತಿಗಳು ಮತ್ತು ಕ್ರಿಯೆಗಳ ಪ್ರಾಮುಖ್ಯತೆಯನ್ನು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಕರ್ನಾಟಕ ಪ್ರಾಂತೀಯ ಅಸಮಾನತೆಯನ್ನು ನಿವಾರಿಸುವಲ್ಲಿ ಇದೀಗ ನಾವು ಸದನದಲ್ಲಿ ಮಂಡಿಸಿರುವ ವಿಶೇಷ ಅಭಿವೃದ್ಧಿ ಯೋಜನೆಯು ಸರ್ಕಾರದ ನೀತಿ ಪತ್ರ ಹಾಗೂ ಕಾರ್ಯಕ್ರಮ ಅನುಷ್ಠಾನ ಸಾಧನವಾಗಿದೆ.

76. ಶಾಸಕರ ಕ್ಷೇತ್ರ ಅಭಿವೃದ್ಧಿಗಾಗಿ 2006-07ನೇ ಸಾಲಿನಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. 2007-08ನೇ ಸಾಲಿನಲ್ಲಿ ಕೂಡ ಈ ಅಭಿವೃದ್ಧಿ ಯೋಜನೆಯನ್ನು ಮುಂದುವರೆಸಲಿದ್ದು ಇದಕ್ಕಾಗಿ ನಾನು 300 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

77. 2007-08ನೇ ಸಾಲಿನಲ್ಲಿ ನಾನು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 53 ಕೋಟಿ ರೂ.ಗಳು ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿಗೆ 34.50 ಕೋಟಿ ರೂ.ಗಳನ್ನು ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ 21 ಕೋಟಿ ರೂ.ಗಳನ್ನು ಮತ್ತು ಗಡಿ ಅಭಿವೃದ್ಧಿ ಮಂಡಳಿಗೆ 10.30 ಕೋಟಿ ರೂ.ಗಳನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ.

**ಕನ್ನಡ ಮತ್ತು ಸಂಸ್ಕೃತಿ:**

78. ನಾವು 2006-07ನೇ ಸಾಲಿನಲ್ಲಿ 'ಸುವರ್ಣ ಕರ್ನಾಟಕ' ಸಂಭ್ರಮವನ್ನು ಆಚರಿಸಿದ್ದೇವೆ. ಸುವರ್ಣ ಕರ್ನಾಟಕದ ಚಟುವಟಿಕೆಗಳು ನವಂಬರ್ 2007ರ ವರೆಗೂ ಮುಂದುವರಿಯುತ್ತವೆ. ಕರ್ನಾಟಕ ಏಕೀಕರಣದ 50ನೇ ವರ್ಷವನ್ನು ನಾವು ಸ್ಮರಣೀಯ ರೀತಿಯಲ್ಲಿ ಆಚರಿಸಿದ್ದೇವೆ. ಕಳೆದ ನವಂಬರ್ 1ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಅದ್ದೂರಿಯಾಗಿ ನಡೆಯಿತು. **'ಜಾನಪದ ಜಾತ್ರೆ'** -ರಾಜ್ಯದ ಗ್ರಾಮೀಣ ಕಲಾವಿದರನ್ನು ಬೆಂಗಳೂರಿಗೆ ಕರೆಸಿ ಅವರ ಅದ್ಭುತ ಕಲೆಯನ್ನು ವಿಧಾನಸೌಧದ ಮುಂದೆ ಇಡೀ ನಾಡಿಗೇ ಪರಿಚಯಿಸಿದ ವಿನೂತನ ಕಾರ್ಯಕ್ರಮವಾಗಿದೆ. ನಮ್ಮೆಲ್ಲರ ನಲ್ಮೆಯ ಕವಿ ಡಾ: ಜಿ.ಎಸ್. ಶಿವರುದ್ರಪ್ಪ ರವರಿಗೆ ರಾಷ್ಟ್ರಕವಿ ಪ್ರಶಸ್ತಿ ನೀಡಿ ನಾವೆಲ್ಲರೂ ಸಂಭ್ರಮಿಸಿದ್ದೇವೆ.

79. ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮವಾಗಿ ರಾಜಧಾನಿ ಬೆಂಗಳೂರಿನಿಂದ ಹೊರಗೆ ಬೆಳಗಾವಿಯಲ್ಲಿ ವಿಧಾನಮಂಡಲದ ವಿಶೇಷ ಅಧಿವೇಶನವನ್ನು ನಡೆಸಲಾಗಿದೆ. ಇನ್ನು ಮುಂದೆ ವಿಧಾನಮಂಡಲದ ಮಧ್ಯಂತರ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ಅನುಕೂಲವಾಗುವಂತೆ **ಖಾಯಂ ಸಚಿವಾಲಯ ಕಟ್ಟಡವನ್ನು** ನಿರ್ಮಿಸಲು ಉದ್ದೇಶಿಸಲಾಗಿದೆ.

80. ನಮ್ಮ ಸರ್ಕಾರವು 2007-08ನೇ ಸಾಲಿನಲ್ಲಿ ಕೂಡ ಸುವರ್ಣ ಕರ್ನಾಟಕ ಆಚರಣೆಯನ್ನು ಮುಂದುವರಿಸಲು ಉದ್ದೇಶಿಸಿದೆ. ಈ ಸಂದರ್ಭದಲ್ಲಿ ಕೆಳಕಂಡ ನಿರ್ದಿಷ್ಟ ಉದ್ದೇಶಗಳಿಗಾಗಿ ನೆರವನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ.

- ಡಾ: ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕಾಗಿ 3 ಕೋಟಿ ರೂ.
- ಪುಸ್ತಕ ಪ್ರಕಟಣೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ 60 ಲಕ್ಷ ರೂ.
- ಡಾ: ಬೇಂದ್ರೆ ಸ್ಮಾರಕ ಟ್ರಸ್ಟ್; ಡಾ: ಪು.ತಿ.ನ. ಗ್ರಂಥಾಲಯ ಅಧ್ಯಯನ ಕೇಂದ್ರ; ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್‌ಗಳಿಗೆ ತಲಾ 10 ಲಕ್ಷ ರೂ.
- ಹಂಪಿ ಉತ್ಸವದ ಆಚರಣೆಗೆ 1 ಕೋಟಿ ರೂ.
- ಬೆಂಗಳೂರು ನಗರದ ಇತಿಹಾಸವನ್ನು ಬಿಂಬಿಸುವ ಮ್ಯೂಸಿಯಂನ ಸ್ಥಾಪನೆಗಾಗಿ ಕೆಂಪೇಗೌಡ ಪ್ರತಿಷ್ಠಾನಕ್ಕೆ 1 ಕೋಟಿ ರೂ.
- ಜಗಜ್ಯೋತಿ ಬಸವೇಶ್ವರ ಜನ್ಮಸ್ಥಳ ಇಂಗಳೇಶ್ವರದ ಅಭಿವೃದ್ಧಿಗೆ 2 ಕೋಟಿ ರೂ.
- ಶಿವಮೊಗ್ಗ ಜಿಲ್ಲೆಯ ತೊಗರ್ಸಿ ಗ್ರಾಮದ ಇತಿಹಾಸ ಪ್ರಸಿದ್ಧ ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿಗಾಗಿ 2 ಕೋಟಿ ರೂ.
- ಹುಬ್ಬಳ್ಳಿಯ ಸಿದ್ಧಾರೂಢ ಮಠಕ್ಕೆ 1 ಕೋಟಿ ರೂ.
- ಕರ್ನಾಟಕ ಜಾನಪದ ಪರಿಷತ್‌ಗೆ 50 ಲಕ್ಷ ರೂ.

- ಕಾಸರಗೋಡಿನ ಕನ್ನಡ ಸಂಘಕ್ಕೆ 5 ಲಕ್ಷ ರೂ.
- 'ಗಂಗಾಬಿಕಾ' ಐಕ್ಯ ಮಂಟಪದ ಅಭಿವೃದ್ಧಿಗೆ 5 ಕೋಟಿ ರೂ.
- ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಸವಪೀಠ ಕಟ್ಟಡ ನಿರ್ಮಾಣ ಮತ್ತು ಬಸವ ಸಾಹಿತ್ಯದ ಭಾಷಾಂತರಕ್ಕಾಗಿ ಎರಡು ಕೋಟಿ ರೂ.
- ಹಾವೇರಿಯಲ್ಲಿ ಸರ್ವಜ್ಞ ಸ್ಮಾರಕಕ್ಕೆ 50 ಲಕ್ಷ ರೂ.
- ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಹಡಪದ ಅಪ್ಪಣ್ಣ ಪೀಠ ಸ್ಥಾಪನೆಗೆ 50 ಲಕ್ಷ ರೂ.
- ಗುಲ್ಬರ್ಗಾದ ವಿಶ್ವವಿದ್ಯಾಲಯದಲ್ಲಿ ಅಂಬಿಗರ ಚೌಡಯ್ಯ ಪೀಠ ಸ್ಥಾಪನೆಗೆ 1 ಕೋಟಿ ರೂ.
- ತುಮಕೂರಿನ ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿ ನಿಲಯದ ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸಲು 10 ಕೋಟಿ ರೂ.
- ಬೆಳಗಾವಿಯ ಅಥಣಿಯಲ್ಲಿನ ದೇವದಾಸಿಯರ ಮಕ್ಕಳ ವಿಮೋಚನಾ ವಸತಿ ಶಾಲೆಗೆ 1.50 ಕೋಟಿ ರೂ.
- ಯಕ್ಷಗಾನ ಅಕಾಡೆಮಿಗೆ 20 ಲಕ್ಷ ರೂ.
- ಜಿಗಣಿಯಲ್ಲಿರುವ ಶ್ರೀ ಸ್ವಾಮಿವಿವೇಕಾನಂದ ಯೋಗ ಅನುಸಂದಾನ ಸಂಸ್ಥೆಗೆ 2 ಕೋಟಿ ರೂ.
- ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ 6 ಲಕ್ಷ ರೂ.
- ಬಿ.ಎಂ.ಶ್ರೀ ಪ್ರತಿಷ್ಠಾನಕ್ಕೆ 5 ಲಕ್ಷ ರೂ.
- ಹೊಸರಿತ್ತಿ ಗ್ರಾಮದಲ್ಲಿ ಹಳ್ಳಿಕೇರಿ ಗುದ್ಲಪ್ಪ ಸ್ಮಾರಕ ಭವನ ನಿರ್ಮಾಣಕ್ಕೆ 1.25 ಕೋಟಿ ರೂ.
- ಕನಕದಾಸರ ಜನ್ಮಸ್ಥಳ ಹಾವೇರಿಯ 'ಬಾಡಾ' ಗ್ರಾಮದ ಅಭಿವೃದ್ಧಿಗಾಗಿ 1.25 ಕೋಟಿ ರೂ.

- ಹೊಳೆ ಆಲೂರಿನ ಅಭಿವೃದ್ಧಿ ಮತ್ತು ಆಲೂರು ವೆಂಕಟರಾಯರ ಸ್ಮಾರಕ ನಿರ್ಮಾಣಕ್ಕಾಗಿ 1.25 ಕೋಟಿ ರೂ.
- ಉಡುಪಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 1 ಕೋಟಿ ರೂ.
- ಕನ್ನಡ ವಿಶ್ವಕೋಶದ ಮರುಮುದ್ರಣಕ್ಕೆ 50 ಲಕ್ಷ ರೂ.
- ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳ ಮರು ಮುದ್ರಣಕ್ಕೆ 50 ಲಕ್ಷ ರೂ.
- ಕಾದಂಬರಿಕಾರ ಅನಕೃ ಅವರ ನಿವಾಸವನ್ನು ಸ್ಮಾರಕವಾಗಿ ಪರಿವರ್ತಿಸಲು 1 ಕೋಟಿ ರೂ.
- ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 1.50 ಕೋಟಿ ರೂ.
- ಪಂಜೆ ಮಂಗೇಶರಾಯರ ಸ್ಮಾರಕ ನಿರ್ಮಾಣಕ್ಕಾಗಿ 50 ಲಕ್ಷ ರೂ.
- ಮಂಡ್ಯ ಜಿಲ್ಲೆಯ ಬೂಕನಕೆರೆ ಗ್ರಾಮದಲ್ಲಿ ಸಮುದಾಯ ಭವನ ಮತ್ತು ಗ್ರಾಮದ ಅಭಿವೃದ್ಧಿ ಕಾಮಗಾರಿಗಾಗಿ 1 ಕೋಟಿ ರೂ.
- ರಾಜ್ಯ ಸರ್ಕಾರ ಪ್ರಕಟಿಸಿರುವ ಡಾ: ಬಿ.ಆರ್. ಅಂಬೇಡ್ಕರ್‌ರವರ ಪುಸ್ತಕಗಳ ಮರು ಮುದ್ರಣಕ್ಕೆ 1 ಕೋಟಿ ರೂ.
- ದ.ರಾ.ಬೇಂದ್ರೆ ಸಾಹಿತ್ಯ ಮರುಮುದ್ರಣಕ್ಕಾಗಿ 1 ಕೋಟಿ ರೂ.
- ಡಾ: ಜಿ.ಎಸ್. ಶಿವರುದ್ರಪ್ಪನವರ ಸಾಹಿತ್ಯ ಮುದ್ರಣಕ್ಕಾಗಿ 50 ಲಕ್ಷ ರೂ.
- ಎ.ಆರ್. ಕೃಷ್ಣಶಾಸ್ತ್ರಿಗಳ ಜನ್ಮಸ್ಥಳವಾದ ಅಂಬಳೆ ಗ್ರಾಮದ ಅಭಿವೃದ್ಧಿಗಾಗಿ 1 ಕೋಟಿ ರೂ.
- ಕುವೆಂಪುರವರ ಗುರುಗಳಾದ ಟಿ.ಎಸ್. ವೆಂಕಣ್ಣಯ್ಯನವರ ಜನ್ಮಸ್ಥಳ ಚಿತ್ರದುರ್ಗದ ಥಳುಕು ಗ್ರಾಮದ ಅಭಿವೃದ್ಧಿಗಾಗಿ 1.5 ಲಕ್ಷ ರೂ.
- ಡಾ: ಸಿದ್ದಯ್ಯ ಪುರಾಣಿಕರ ಸ್ಮಾರಕ ನಿರ್ಮಾಣಕ್ಕಾಗಿ 1 ಕೋಟಿ ರೂ.

- ಧಾರವಾಡ ಜಿಲ್ಲೆಯ ಜೈನ ಯಾತ್ರಾಸ್ಥಳ ವರೂರಿನ ಅಭಿವೃದ್ಧಿಗೆ 3 ಕೋಟಿ ರೂ.
- ಮಲೆಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪನೆ.

**ಸಂಗೀತ:**

81. ಭಾರತದಲ್ಲಿ ಕರ್ನಾಟಕ ರಾಜ್ಯ ಮಾತ್ರವೇ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತಗಳೆರಡರ ಏಕೈಕ ಸಂಗಮ ಸ್ಥಾನವಾಗಿದೆ. ಪಿಟೀಲು ಚೌಡಯ್ಯ, ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಇವರು ಕರ್ನಾಟಕ ಸಂಗೀತದ ದಂತ ಕತೆಗಳಾಗಿದ್ದಾರೆ. ಕುಮಾರ ಗಂದರ್ವ, ಬೀಮಸೇನ್ ಜೋಷಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಪುಟ್ಟರಾಜ ಗವಾಯಿ ಇವರುಗಳು ಹಿಂದೂಸ್ತಾನಿ ಸಂಗೀತದ ದಿಗ್ಗಜರಾಗಿದ್ದಾರೆ. ಸಂಗೀತವನ್ನು ಬೆಳೆಸುವ ಹಾಗೂ ಸಂರಕ್ಷಿಸುವ ಉದ್ದೇಶದಿಂದ ನಮ್ಮ ಸರ್ಕಾರವು ಮೈಸೂರಿನಲ್ಲಿ ಸಂಗೀತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು 5 ಕೋಟಿ ರೂ.ಗಳನ್ನು ನೀಡಲಿದೆ.

82. ಹಿಂದೂಸ್ತಾನಿ ಸಂಗೀತದ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಧಾರವಾಡದಲ್ಲಿ ಹಿಂದೂಸ್ತಾನಿ ಸಂಗೀತ ಕೇಂದ್ರವನ್ನು ಸ್ಥಾಪಿಸಲು ನಾನು 5 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

83. ಶ್ರೀ ಪಿ. ಕಾಳಿಂಗರಾವ್ ಮತ್ತು ಮೈಸೂರು ಅನಂತಸ್ವಾಮಿಯವರ ಹೆಸರಿನಲ್ಲಿ ಸಂಗೀತ ಕಛೇರಿಗಳನ್ನು ನಡೆಸಲು ನಾನು ತಲಾ 50 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

84. ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಟ್ರಸ್ಟ್‌ಗೆ 10 ಲಕ್ಷ ರೂ.ಗಳ ನೆರವು ನೀಡಲು ಉದ್ದೇಶಿಸಿದ್ದೇನೆ.

85. ಶ್ರೀಮತಿ ಗಂಗೂಬಾಯಿ ಹಾನಗಲ್‌ರವರ ನಿವಾಸವನ್ನು ನಮ್ಮ ಸರ್ಕಾರದಿಂದ ನವೀಕರಿಸಿ, ವಸ್ತು ಸಂಗ್ರಹಾಲಯ ಸ್ಥಾಪಿಸಲು 25 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

**ಕಂದಾಯ:**

86. ನಮ್ಮ ಸರ್ಕಾರವು ಅನಾಥ ವಿಧವೆಯರು, ಅಂಗವಿಕಲರು, ವೃದ್ಧರಿಗೆ ಮಾಸಾಶನವನ್ನು ನೀಡುತ್ತಿದೆ. ಕಂದಾಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಅಂಗವಿಕಲರ ನಿರ್ದೇಶನಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೀಗೆ ವಿವಿಧ ಇಲಾಖೆಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಈ ಕಾರಣದಿಂದಾಗಿ ಈ ಯೋಜನೆಗಳ ಬಗ್ಗೆ ಒಂದೇ ಸೂರಿನಡಿ ಸಾಮಾನ್ಯ ಮಾಹಿತಿ ಭಂಡಾರ ಇರುವುದಿಲ್ಲ. ಆದರೆ ಮೇಲೆ ಹೇಳಿದ ಎಲ್ಲಾ ಯೋಜನೆಗಳನ್ನು ತಾಲ್ಲೂಕುಮಟ್ಟದಲ್ಲಿ ತಹಶೀಲ್ದಾರರು ಅನುಷ್ಠಾನಗೊಳಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ನೂತನವಾಗಿ **'ಸಾಮಾಜಿಕ ಭದ್ರತೆ ಮತ್ತು ವೇತನಗಳ ನಿರ್ದೇಶನಾಲಯ'**ವನ್ನು ಸ್ಥಾಪಿಸಿ ಎಲ್ಲಾ ಮಾಸಾಶನ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಈ ನಿರ್ದೇಶನಾಲಯಕ್ಕೆ ನೀಡಲು ಉದ್ದೇಶಿಸಿದೆ. ಇದರ ಜೊತೆಗೆ 'ಅಂತ್ಯೋದಯ' 'ಶವಸಂಸ್ಕಾರ', ಮತ್ತು 'ರಾಷ್ಟ್ರೀಯ ಕುಟುಂಬ ಸಹಾಯ ಯೋಜನೆ' ಇತ್ಯಾದಿ ಯೋಜನೆಗಳ ಅನುಷ್ಠಾನ ಜವಾಬ್ದಾರಿಯನ್ನು ಸಹ ಈ ನೂತನ ನಿರ್ದೇಶನಾಲಯಕ್ಕೆ ವಹಿಸಲಾಗುವುದು. ನಿರ್ದೇಶನಾಲಯದ ಸ್ಥಾಪನೆ ಮತ್ತಿತರ ಚಟುವಟಿಕೆಗಳಿಗಾಗಿ ನಾನು 4 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

## ಸಂಧ್ಯಾ ಸುರಕ್ಷಾ, ನೂತನ ಸಾಮಾಜಿಕ ಭದ್ರತಾ ವೇತನ:

*ಹಗಲೆಲ್ಲಾ ಗಾಡಿಯನ್ನೆಳೆದು ಸೊರಗಿದ*
*ಜಟಕಾ ಕುದುರೆಯಂತೆ,*
*ಸೋತ ದಳಪತಿಯಂತೆ,*
*ಕೆನ್ನವಿರ ತಲೆಗೆದರಿ ಮುಳುಗುತಿಹನಲ್ಲಿ ಅದೊ*
*ಮುದಿಯ ಸೂರ್ಯ,*
*ಮುಗಿಲ ಕೊತ್ತಳದಲ್ಲಿ ಮೊಳಗುತಿದೆ ಆಗಲೇ*
*ಇರುಳ ಸೂರ್ಯ!*

*ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಮುಸ್ಸಂಜೆಯ ಹೊರಳುದಾರಿಯಲ್ಲಿ ನಿಂತ ಹಿರಿಯ ಜೀವದ ಸ್ಥಿತಿಗತಿಗಳನ್ನು ಸಹಾನುಭೂತಿಯಿಂದ ಚಿತ್ರಿಸಿರುವ ರೀತಿ ಇದು.*

87. ಜೀವಿತವಿಡಿ ದುಡಿದುಣ್ಣುವ ಶ್ರಮಜೀವಿಗಳು ಬಾಳ ಮುಸ್ಸಂಜೆಯಲ್ಲಿ ಆರ್ಥಿಕ ಸಂಕಷ್ಟಕ್ಕೀಡಾಗುತ್ತಿರುವುದು ನೋವಿನ ಸಂಗತಿ. ಅರವತ್ತು ವರ್ಷ ಮೇಲ್ಪಟ್ಟ ಹಿರಿಯ ಜೀವಗಳಿಗೆ ಸಾಮಾಜಿಕ ಭದ್ರತೆ ಒದಗಿಸಲು "ಸಂಧ್ಯಾ ಸುರಕ್ಷಾ" ಎಂಬ ಯೋಜನೆಯನ್ನು ಹೊಸದಾಗಿ ಪ್ರಾರಂಭಿಸುತ್ತಿದ್ದೇನೆ. ಈ ಯೋಜನೆಯನ್ವಯದಡಿ 60 ವರ್ಷ ಮೇಲ್ಪಟ್ಟ ಪ್ರಜೆಗಳಿಗೆ **ಮಾಸಿಕ 400 ರೂ.ಗಳ ಸಾಮಾಜಿಕ ಭದ್ರತಾ ವೇತನ ನೀಡಲಾಗುವುದು.** ಸಣ್ಣ ಮತ್ತು ಅತಿಸಣ್ಣ ರೈತರು, ನೇಕಾರರು, ಮೀನುಗಾರರು, ಅಸಂಘಟಿತ ವಲಯದ ಕಾರ್ಮಿಕರು, ಕೃಷಿ ಕಾರ್ಮಿಕರು ಈ ಯೋಜನೆಯಡಿ ಫಲಪಡೆಯುತ್ತಾರೆ.

88. ಅರವತ್ತು ವರ್ಷ ತುಂಬಿರುವ ಉದ್ದೇಶಿತ ಫಲಾನುಭವಿಯ ಪತಿ ಅಥವಾ ಪತ್ನಿಯ ಒಟ್ಟು ವಾರ್ಷಿಕ ಸಂಯೋಜಿತ ಆದಾಯವು ಸ್ಥಳೀಯ ಕಂದಾಯ ಪ್ರಾಧಿಕಾರಿಯು ಪ್ರಮಾಣೀಕರಿಸಿರುವಂತೆ 20,000 ರೂಪಾಯಿಗಳಿಗಿಂತ ಹೆಚ್ಚಾಗಿರಕೂಡದು. ಫಲಾನುಭವಿಯ ಪತ್ನಿ ಅಥವಾ

ಪತಿಯ ಸಂಯೋಜಿತ ಗಳಿಕೆಗಳ ಒಟ್ಟು ಮೌಲ್ಯವು 10,000 ರೂಪಾಯಿಗಳಿಗಿಂತ ಹೆಚ್ಚಾಗಿರಬಾರದು. ಫಲಾನುಭವಿಯು ಈ ಪರಿಮಿತಿಗೆ ಸಂಬಂಧಿಸಿದಂತೆ ಒಂದು ಘೋಷಣೆ ನೀಡಬೇಕಾಗುತ್ತದೆ. ಗಳಿಕೆಯು 10,000 ರೂ.ಗಳಿಗಿಂತ ಹೆಚ್ಚಾಗಿರುವುದಾಗಿ ಕಂಡುಬಂದರೆ ಮಾಸಾಶನ ನೀಡುವುದನ್ನು ನಿಲ್ಲಿಸಲಾಗುವುದು ಮತ್ತು ಗಳಿಕೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಓಎಪಿ, ಡಿಡಬ್ಲ್ಯೂಪಿ ಅಥವಾ ಪಿಹೆಚ್‌ಪಿ ಅಥವಾ ಯಾವುದೇ ಇತರ ರೀತಿಯ ಮಾಸಾಶನವನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿರುವ ವ್ಯಕ್ತಿಗಳು ಈ ಯೋಜನೆಯಡಿಯಲ್ಲಿ ಮಾಸಾಶನ ಪಡೆಯಲು ಅರ್ಹರಾಗಿರುವುದಿಲ್ಲ. ಭಾರತ ಚುನಾವಣಾ ಆಯೋಗವು ನೀಡಿರುವ ಮತದಾರರ ಗುರುತಿನ ಚೀಟಿಯಲ್ಲಿರುವ ಜನ್ಮ ದಿನಾಂಕವು ವಯಸ್ಸಿಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ. ಈ ಮಾಸಾಶನವನ್ನು ಫಲಾನುಭವಿಯ ಹೆಸರಿನಲ್ಲಿರುವ ಬ್ಯಾಂಕ್ ಅಥವಾ ಅಂಚೆ ಕಛೇರಿಯ ಖಾತೆಗೆ ಪ್ರತಿ ತಿಂಗಳು ವರ್ಗಾಯಿಸಲಾಗುವುದು. ಫಲಾನುಭವಿಯೇ ತಾನು ಬಡವನೆಂದು ಘೋಷಿಸಿಕೊಂಡಿದ್ದರೆ ಅವರ ಆದಾಯವನ್ನು ಲೆಕ್ಕ ಹಾಕುವಾಗ ಅವರ ವಯಸ್ಕ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬಾರದು. ಈ ಯೋಜನೆಯು 29ನೇ ಜುಲೈ 2007ರಿಂದ ಜಾರಿಗೆ ಬರಲಿದೆ. **ಈ ಯೋಜನೆಯನ್ನು ಅನುಷ್ಠಾನಗೊಳಿಸಲು ನಾನು 250 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.**

89. **ವೃದ್ಧಾಪ್ಯವೇತನ, ಅಂಗವಿಕಲರ ವೇತನ, ವಿಧವಾವೇತನವನ್ನು ಮಾಸಿಕ 400 ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.** ಈ ಉದ್ದೇಶಕ್ಕಾಗಿ 2006-07ನೇ ಸಾಲಿನಲ್ಲಿ ಹಂಚಿಕೆ ಮಾಡಿದ್ದ ಅನುದಾನಕ್ಕಿಂತ ಹೆಚ್ಚುವರಿಯಾಗಿ 350 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

90. ಈ ಎಲ್ಲಾ ಮಾಸಾಶನಗಳ ಒಟ್ಟು ವೆಚ್ಚವು 720 ಕೋಟಿ ರೂ.ಗಳಾಗಿರುತ್ತವೆ.

91. ಮಿನಿ ವಿಧಾನಸೌಧ ನಿರ್ಮಾಣಕ್ಕೆ 45 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ಇದರ ಜೊತೆಗೆ ದಾವಣಗೆರೆ ಮತ್ತು ಮಡಿಕೇರಿಯಲ್ಲಿ ಜಿಲ್ಲಾ ಕಛೇರಿಗಳ ನಿರ್ಮಾಣವನ್ನು 12 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

92. ಕಿತ್ತೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಾಪನೆಗಾಗಿ ನಾನು 3 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

**ಧಾರ್ಮಿಕ ದತ್ತಿ:**

93. ಪ್ರಸ್ತುತ ಆರಾಧನಾ ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರಗಳಿಗೆ ಐದು ಲಕ್ಷ ರೂ.ಗಳನ್ನು ಒದಗಿಸಲಾಗುತ್ತಿದೆ. ನಾನು ಇದನ್ನು ಹತ್ತು ಲಕ್ಷ ರೂ.ಗಳಿಗೆ ಹೆಚ್ಚಿಸಲು ಬಯಸಿದ್ದು ಈ ಉದ್ದೇಶಕ್ಕಾಗಿ 8.8 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

94. ಪ್ರಸಿದ್ಧ ಯಾತ್ರಾಸ್ಥಳ ತಿರುಪತಿಯಲ್ಲಿ ರಾಜ್ಯದ ಅತಿಥಿ ಗೃಹ ನಿರ್ಮಾಣಕ್ಕಾಗಿ 2007-08ನೇ ಸಾಲಿನಲ್ಲಿ ಕೂಡ ಐದು ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಖ್ಯಾತ ಕೀರ್ತನೆಕಾರ ಪುರಂದರದಾಸರ ಶಿಲಾಪ್ರತಿಮೆಯನ್ನು ತಿರುಮಲ ತಿರುಪತಿ ದೇವಸ್ಥಾನದ ಆವರಣದಲ್ಲಿ ಟಿಟಿಡಿ ಸಂಸ್ಥೆಯ ವತಿಯಿಂದಲೇ ಪ್ರತಿಷ್ಠಾಪಿಸಲಾಗುವುದು.

95. ಮಾನಸ ಸರೋವರಕ್ಕೆ ತೆರಳುವ ಯಾತ್ರಿಗಳಿಗೆ ಆರ್ಥಿಕ ನೆರವು ಒದಗಿಸಲು 2007-08ನೇ ಸಾಲಿನಲ್ಲಿ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

**ನೋಂದಣಿ ಮತ್ತು ಮುದ್ರಾಂಕ:**

96. ಮಿನಿ ವಿಧಾನಸೌಧದಲ್ಲಿ ನೋಂದಣಿ ಕಛೇರಿಗೆ ಸ್ಥಳಾವಕಾಶ ಇಲ್ಲದಿರುವ ಕಡೆ ಉಪನೋಂದಣಾಧಿಕಾರಿಗಳ ಕಛೇರಿ ಕಟ್ಟಡದ ನಿರ್ಮಾಣಕ್ಕಾಗಿ ನಾನು 3 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ನೋಂದಣಿ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯಕ್ಕಾಗಿ ಕೂಡ ಬೆಂಬಲ ಒದಗಿಸಲಾಗುವುದು.

97. ಕಟ್ಟಡ ನಿರ್ಮಾಣಕಾರರು ಮತ್ತು ಆಸ್ತಿ ಅಭಿವೃದ್ಧಿದಾರರಿಂದ ಸರ್ಕಾರಿ ಜಮೀನಿನ ಅತಿಕ್ರಮಣ ಪ್ರಕರಣಗಳು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಒಂದು ಪಿಡುಗಾಗಿ ಪರಿಣಮಿಸಿದೆ. ಹಕ್ಕುಪತ್ರ ಕಳೆದುಕೊಂಡ ಅಮಾಯಕ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಕಾನೂನು ಗೌರವಿಸುವ ಜಮೀನು ಮತ್ತು ವಸತಿ ಸಮುಚ್ಚಯಗಳ ಅಭಿವೃದ್ಧಿದಾರರು ಆಸ್ತಿ ಹಕ್ಕುಪತ್ರದ ಸಾಚಾತನದ ಬಗ್ಗೆ ಉದ್ದೇಶಿತ ಖರೀದಿಗಾರರಿಗೆ ಮನವರಿಕೆ ಮಾಡಿಕೊಡಲು ಕಷ್ಟಪಡುತ್ತಿದ್ದಾರೆ. ಮನೆ, ನಿವೇಶನ ಮತ್ತು ವಸತಿ ಸಂಕೀರ್ಣಗಳಲ್ಲಿ ಮನೆ ಖರೀದಿಸುವವರು ಆಸ್ತಿ ಒಡೆತನ ಪತ್ರದ ನ್ಯಾಯಬದ್ಧ ಸಿಂಧುತ್ವದ ಬಗ್ಗೆ ಚಿಂತಿಸುತ್ತಾರೆ. ಪೂರ್ಣವಾದ ಮತ್ತು ನ್ಯಾಯಬದ್ಧ ಸಿಂಧುತ್ವದ ಮಾಹಿತಿಯ ಕೊರತೆಯಿಂದ ಬಂಡವಾಳ ಹೂಡಿಕೆ ನಿರ್ಧಾರಗಳು ಮುಂದೂಡಲ್ಪಡುತ್ತವೆ. ದಾಖಲೆಪತ್ರಗಳ ನ್ಯಾಯಬದ್ಧತೆಯನ್ನು ದೃಢಪಡಿಸಿಕೊಳ್ಳಲು ಅಪಾರ ಹಣ ಖರ್ಚಾಗುತ್ತದೆ. ಗೃಹ ನಿರ್ಮಾಣಕ್ಕೆ ಸಾಲ ನೀಡುವ ಸಂಸ್ಥೆಗಳು ಸಹ ನ್ಯಾಯಬದ್ಧ ಹಕ್ಕುಪತ್ರಗಳ ಸಿಂಧುತ್ವವನ್ನು ಖಾತ್ರಿಪಡಿಸಿಕೊಳ್ಳಲು ಅಪಾರ ಹಣ ವೆಚ್ಚ ಮಾಡುತ್ತಿವೆ. ಈ ಅಡೆತಡೆಗಳನ್ನು ನಿವಾರಿಸಲು ನಾನು ಈ ಕೆಳಕಂಡ ಎರಡು ಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ.

(ಅ) ನಮ್ಮ ಸರ್ಕಾರವು ಆಸ್ತಿ ಹಕ್ಕಿನ ವಿಮಾ ಪತ್ರದ ವ್ಯವಸ್ಥೆಯನ್ನು ಜಾರಿಗೊಳಿಸಲು ಉದ್ದೇಶಿಸಿದೆ. ಆಸ್ತಿ ವಿಮೆಯನ್ನು ಹೊಂದಿರುವ ಎಲ್ಲಾ ಆಸ್ತಿಗಳ ನೋಂದಣಿಗೆ ಶೇ.0.5 ರಷ್ಟು ಮುದ್ರಾಂಕ ಶುಲ್ಕ ರಿಯಾಯಿತಿ ನೀಡಲು ಉದ್ದೇಶಿಸಿದ್ದೇನೆ.

(ಆ) ಬೆಂಗಳೂರು ನಗರದಲ್ಲಿನ ಅಭಿವೃದ್ಧಿದಾರರು, ಕಟ್ಟಡ ನಿರ್ಮಾಣಗಾರರು ಮತ್ತು ಮನೆ ಮಾಲೀಕರ ಹಾಗೂ ಆಸ್ತಿಯ ವಿವರಗಳನ್ನೊಳಗೊಂಡ ಮಾಹಿತಿ ಭಂಡಾರವನ್ನು ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದ ಮಾದರಿಯಲ್ಲಿ ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ಮಾಹಿತಿ ಭಂಡಾರವು ನಿರ್ದಿಷ್ಟ ಅಭಿವೃದ್ಧಿದಾರರು ಅಥವಾ ಕಟ್ಟಡ ನಿರ್ಮಾಣಗಾರರು ಅಥವಾ ಮನೆಮಾಲೀಕರು ಘೋಷಿಸಿಕೊಳ್ಳುವ ಮಾಹಿತಿಯನ್ನು ಉದ್ದೇಶಿತ ಖರೀದಿದಾರರಿಗೆ ಒದಗಿಸಲಿದೆ. ಆಸ್ತಿ ಹಕ್ಕಿನ ವಿಮಾ ಪತ್ರದ ರಕ್ಷಣೆಯನ್ನು ಹೊಂದಿರುವ ಆಸ್ತಿಗಳ ಬಗ್ಗೆ ಎಲ್ಲಾ ವಿವರ ಮತ್ತು ಮಾಹಿತಿಗಳು ಲಭ್ಯವಿರುವುದರಿಂದ ಸಹಜವಾಗಿ ಇದು ಆಸ್ತಿ ವ್ಯವಹಾರಗಳನ್ನು ಸುಲಲಿತಗೊಳಿಸುತ್ತವೆ.

## ಸಮಾಜ ಕಲ್ಯಾಣ:

*ಶತಶತಮಾನದ ಮಾಘಮೌನದಲಿ*
*ನೂರುಗಾಳಿಗಳ ಸುಲಿಗೆಯ ದಾಳಿಗೆ*
*ಎದೆಯನೊಡ್ಡಿ ಎಲೆಯುದುರಿದ ಬಾಳಿಗೆ*
*ವಸಂತ ಮೂಡುವುದೆಂದಿಗೆ?*

*- ಡಾ: ಜಿ.ಎಸ್. ಶಿವರುದ್ರಪ್ಪ*

98. ದುರ್ಬಲ ವರ್ಗದ ಜನರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ಶೈಕ್ಷಣಿಕ ಮತ್ತು ಆರ್ಥಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ. ಈ ಆಶಯಕ್ಕೆ ಅನುಗುಣವಾಗಿ ನಮ್ಮ ಸರ್ಕಾರವು ಹೆಚ್ಚಿನ ಸಂಖ್ಯೆಯಲ್ಲಿ

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸ್ಥಾಪಿಸಲು ಉದ್ದೇಶಿಸುತ್ತಿದೆ. ವಸತಿ ಶಾಲೆಗಳು ದುರ್ಬಲ ವರ್ಗದ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚಿನ ಅವಕಾಶ ಕಲ್ಪಿಸಿ ಈ ಮಕ್ಕಳು ಮಧ್ಯದಲ್ಲೇ ಶಾಲೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡುತ್ತಿರುವುದರಿಂದ ನಾವು ಮತ್ತಷ್ಟು ಹೊಸ ವಸತಿ ನಿಲಯಗಳನ್ನು ಸ್ಥಾಪಿಸುತ್ತಿದ್ದೇವೆ. ದುರ್ಬಲ ವರ್ಗಗಳ ವಿದ್ಯಾರ್ಥಿನಿಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಉನ್ನತ ಶಿಕ್ಷಣಕ್ಕೆ ಅವಕಾಶ ಕಲ್ಪಿಸಲು ನೂತನವಾಗಿ ಆರಂಭವಾಗಲಿರುವ ಹೊಸ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಶೇ.50ರಷ್ಟು ಹಾಸ್ಟೆಲ್‌ಗಳನ್ನು ಹೆಣ್ಣು ಮಕ್ಕಳಿಗೆ ಮೀಸಲಿಡಲಾಗುವುದು. ಹಲವಾರು ವಿದ್ಯಾರ್ಥಿನಿಲಯಗಳು ಬಾಡಿಗೆ ಕಟ್ಟಡದಲ್ಲಿದ್ದು, ಇಕ್ಕಟ್ಟಾದ ಪರಿಸರದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಈ ತೊಂದರೆಯನ್ನು ನಿವಾರಿಸಲು ನಾವು ಹೆಚ್ಚು ವಸತಿ ನಿಲಯ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿದ್ದೇವೆ.

99. ದುರ್ಬಲ ವರ್ಗಗಳ ಆರ್ಥಿಕ ಸುಧಾರಣೆಗಾಗಿ ನೆರವಾಗುವ ಜಮೀನು ಖರೀದಿ ಯೋಜನೆ ಮತ್ತು ಗಂಗಾಕಲ್ಯಾಣ ಯೋಜನೆಗಳಿಗೆ ನಮ್ಮ ಸರ್ಕಾರವು ಹೆಚ್ಚು ಒತ್ತು ನೀಡುತ್ತಿದೆ. ಇದರ ಜೊತೆಗೆ **'ಕಿರು ಸಾಲ'** ಎನ್ನುವ ನೂತನ ಯೋಜನೆಯನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ. ಈ ಯೋಜನೆಯಡಿ ಗ್ರಾಮೀಣ, ಅರೆನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲಿ ಅಥವಾ ಕುಶಲಿಯಲ್ಲದ ವ್ಯಕ್ತಿಗಳು ಸಣ್ಣಪುಟ್ಟ ವ್ಯಾಪಾರ ಚಟುವಟಿಕೆಗಳನ್ನು **ಕೈಗೊಳ್ಳಲು ಧನಸಹಾಯ ನೀಡಲಾಗುವುದು. ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ.ಗಳನ್ನು** ನೀಡಲು ಉದ್ದೇಶಿಸಿದ್ದೇನೆ.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು:**

100. ಪ್ರಸಕ್ತ ವರ್ಷದಲ್ಲಿ ಪರಿಶಿಷ್ಟ ಜಾತಿಗಳಿಗೆ ವಿಶೇಷ ಘಟಕ ಯೋಜನೆಯಡಿ **2560 ಕೋಟಿ** ರೂ.ಗಳನ್ನು ಮತ್ತು ಪರಿಶಿಷ್ಟ

ಪಂಗಡಗಳಿಗೆ ಗಿರಿಜನ ಉಪಯೋಜನೆಗಳಲ್ಲಿ 1035 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇದು ಗಣನೀಯವಾದ ಏರಿಕೆಯಾಗಿದೆ ಎನ್ನುವ ವಿಷಯವನ್ನು ಸದನದ ಗೌರವಾನ್ವಿತ ಸದಸ್ಯರಿಗೆ ತಿಳಿಸಲು ನನಗೆ ಸಂತಸವಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸ್ಥಾನಮಾನವನ್ನು ಉತ್ತಮಗೊಳಿಸುವ ನಮ್ಮ ಪ್ರಾಮಾಣಿಕ ಪ್ರಯತ್ನಗಳಿಗೆ ಇದು ಸಾಕ್ಷಿಯಾಗಿದೆ.

101. ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 5 ವಸತಿ ಶಾಲೆಗಳನ್ನು ಆರಂಭಿಸಲು ನಾವು ಉದ್ದೇಶಿಸಿದ್ದೇವೆ. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 75 ಹೊಸ ವಿದ್ಯಾರ್ಥಿನಿಲಯಗಳನ್ನು ಮತ್ತು ಪರಿಶಿಷ್ಟ ಪಂಗಡಗಳಿಗೆ 10 ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ಕ್ರಮವಾಗಿ 24 ಕೋಟಿ ಮತ್ತು 8.5 ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡಲಿದ್ದೇವೆ.

102. ಗಂಗಾಕಲ್ಯಾಣ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ನಮ್ಮ ಸರ್ಕಾರವು ಉದ್ದೇಶಿಸಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಒಗ್ಗೂಡಿಸಿದ ಮೊತ್ತಸೇರಿ 100 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗುವುದು. ಜಮೀನು ಖರೀದಿ ಯೋಜನೆಯಡಿ ಪರಿಶಿಷ್ಟ ಜಾತಿಯವರಿಗೆ 18.50 ಕೋಟಿ ರೂ.ಗಳನ್ನು ಮತ್ತು ಪರಿಶಿಷ್ಟಪಂಗಡದವರಿಗೆ 7 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ನಾನು ಉದ್ದೇಶಿಸಿದ್ದೇನೆ.

103. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಂದು ಸಾವಿರ ಬುದ್ಧಿವಂತ ಅರ್ಹ ವಿದ್ಯಾರ್ಥಿಗಳಿಗೆ ಜಿಲ್ಲೆಗಳಲ್ಲಿರುವ ಪ್ರತಿಷ್ಠಿತ ವಸತಿ ಮತ್ತು ವಸತಿಯೇತರ ಶಾಲೆಗಳಲ್ಲಿ ಪ್ರವೇಶ ಪಡೆಯಲು ಅನುಕೂಲವಾಗುವಂತೆ ನಾನು 2 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

104. ರಾಷ್ಟ್ರದ ದಲಿತನಾಯಕ ಶ್ರೀ ಬಾಬು ಜಗಜೀವನರಾಮ್‌ರವರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಒಂದು ಭವನವನ್ನು ನಿರ್ಮಿಸಲು ನಾನು 3 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ. ಗದಗ್‌ನಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಭವನ ನಿರ್ಮಿಸಲು ಸಹ 1 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

## ಅಲ್ಪಸಂಖ್ಯಾತರ ಅಭಿವೃದ್ಧಿ:

105. ರಾಜ್ಯದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ 2007-08ನೇ ಸಾಲಿನಲ್ಲಿ 7 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 50 ಹೊಸ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಗುವುದು. ಇದರ ಜೊತೆಗೆ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ 11 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮೂಲಕ ಗಂಗಾಕಲ್ಯಾಣ ಯೋಜನೆಯನ್ನು ಮುಂದುವರೆಸಲು ನಾವು ಉದ್ದೇಶಿಸಿದ್ದು ಇದಕ್ಕಾಗಿ 2007-08ನೇ ಸಾಲಿನಲ್ಲಿ 22 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 5.5 ಕೋಟಿ ರೂ.ಗಳ ವೆಚ್ಚದಲ್ಲಿ ಉದ್ಯೋಗ ಆಧಾರಿತ ತರಬೇತಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಿದೆ.

106. ಶಾದಿ ಮಹಲುಗಳ ನಿರ್ಮಾಣಕ್ಕಾಗಿ 6.5 ಕೋಟಿ ರೂ.ಗಳನ್ನು ನಾನು ಮೀಸಲಿಡಲು ಉದ್ದೇಶಿಸಿದ್ದೇನೆ.

107. ಅಲ್ಪಸಂಖ್ಯಾತರ ಸಮುದಾಯಕ್ಕೆ ಸ್ವಂತ ಉದ್ಯೋಗ ಅವಕಾಶಗಳನ್ನು ನೀಡುವುದರ ಜೊತೆಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಸಾಲವನ್ನು ಪಡೆಯಲು ಅನುಕೂಲವಾಗುವಂತೆ ಕರ್ನಾಟಕ ಸರ್ಕಾರವು 15 ಕೋಟಿ ರೂ.ಗಳ ಸರ್ಕಾರಿ ಖಾತರಿಯನ್ನು ನೀಡಲು ಉದ್ದೇಶಿಸಿದೆ. ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಒದಗಿಸಿರುವ 92 ಕೋಟಿ ರೂ.ಗಳ ಜೊತೆಗೆ ಇದು ಹೆಚ್ಚುವರಿಯಾಗಿದೆ. ನಿಗಮವು ಈ ಮೊತ್ತವನ್ನು ಬಳಸಿಕೊಂಡು ನಗರದ ಕೊಳೆಗೇರಿಗಳಲ್ಲಿ ಮತ್ತು ಹಳ್ಳಿಗಳಲ್ಲಿ ವಾಸಿಸುವ ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರಿಗೆ ಅಭಿವೃದ್ಧಿ ಸಾಲವನ್ನು ಒದಗಿಸಲಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ **ರಾಜ್ಯದ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ 100 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಹಂಚಿಕೆ ಮಾಡಿರುವ ವಿಷಯವನ್ನು ಸದನದಲ್ಲಿ ಹಂಚಿಕೊಳ್ಳಲು ನನಗೆ ಹೆಮ್ಮೆ ಎನಿಸುತ್ತದೆ.**

**ಹಿಂದುಳಿದ ವರ್ಗಗಳು:**

108. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ 2007-08ನೇ ಸಾಲಿನಲ್ಲಿ ಹೊಸದಾಗಿ 22 ಮೊರಾರ್ಜಿ ದೇಸಾಯಿ ಶಾಲೆಗಳನ್ನು ಸ್ಥಾಪಿಸಲು ನಾವು ಬದ್ಧರಾಗಿದ್ದೇವೆ. ಇದರ ಜೊತೆಗೆ ನಾವು ಹೊಸದಾಗಿ 75 ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ತೆರೆಯುತ್ತಿದ್ದೇವೆ. ಸ್ವಂತ ಕಟ್ಟಡವಿಲ್ಲದ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ 26 ಕೋಟಿ ರೂ.ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ. ಹಿಂದುಳಿದ ವರ್ಗಗಳ ಗಂಗಾಕಲ್ಯಾಣ ಯೋಜನೆಗಾಗಿ 2007-08ನೇ ಸಾಲಿನಲ್ಲಿ 27 ಕೋಟಿ ರೂ.ಗಳ ಹಂಚಿಕೆಯನ್ನು ಮಾಡುತ್ತಿದ್ದೇವೆ.

109. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅಲೆಮಾರಿ ಮತ್ತು ಅರೆ ಅಲೆಮಾರಿ ಪಂಗಡಗಳವರಿಗಾಗಿ ವಿಶೇಷ ಯೋಜನೆಯನ್ನು ಆರಂಭಿಸಲು ಉದ್ದೇಶಿಸಿದ್ದೇವೆ. ಈ ಕಾರ್ಯಕ್ರಮದಲ್ಲಿ ಸ್ವಂತ ಉದ್ಯೋಗ ಕೈಗೊಳ್ಳಲು ಪ್ರತಿ ಫಲಾನುಭವಿಗಳಿಗೆ 5,000 ರೂ.ಗಳ ಸಾಲ ಮತ್ತು 5,000 ಸಾವಿರ ರೂ.ಗಳ ಸಹಾಯಧನ ಸೇರಿ ಒಟ್ಟು 10,000 ಸಾವಿರ ರೂ.ಗಳನ್ನು ನೀಡಲಾಗುವುದು. ಇದಕ್ಕಾಗಿ 4 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

110. ಹಿಂದುಳಿದ ವರ್ಗಕ್ಕೆ ಸೇರಿದ ಸವಿತಾ ಸಮಾಜದವರ ಅಭಿವೃದ್ಧಿಗಾಗಿ ನಾನು 1 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಈ ಮೊತ್ತವನ್ನು ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿನ ಕೇಶಾಲಂಕಾರ ಸಲೂನ್‌ಗಳ ನವೀಕರಣಕ್ಕಾಗಿ ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು. ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ಒಟ್ಟು 10,000 ರೂ.ಗಳ ಸಾಲವನ್ನು ನೀಡಲಾಗುವುದು. ಇದರಲ್ಲಿ 5,000 ಸಾವಿರ ರೂ.ಗಳು ಸಹಾಯಧನವಾಗಿರುತ್ತದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ:

*ಮನೆ ಮನೆಯಲಿ ದೀಪ ಮುಡಿಸಿ*
*ಹೊತ್ತು ಹೊತ್ತಿಗನ್ನವುಣಿಸಿ*
*ತಂದೆ-ಮಗುವ ತಬ್ಬಿದಾಕೆ*
*ನಿನಗೆ ಬೇರೆ ಹೆಸರು ಬೇಕೆ*
*ಸ್ತ್ರೀ ಎಂದರೆ ಅಷ್ಟೆ ಸಾಕೆ?*

*ಮಹಿಳೆಯರ ಸೇವೆ ಮತ್ತು ತ್ಯಾಗ ಮನೋಭಾವವನ್ನು ರಾಷ್ಟ್ರಕವಿ ಡಾ: ಜಿ.ಎಸ್. ಶಿವರುದ್ರಪ್ಪ ಅವರು ಆರ್ದ್ರ ಹೃದಯದಿಂದ ಬಣ್ಣಿಸುವ ಪರಿ ಎಂಥಹವರನ್ನೂ ಕರಗಿಸುತ್ತದೆ.*

**ಜೊಚ್ಚಲ ಲಿಂಗ ಆಧಾರಿತ ಆಯವ್ಯಯ:**

111. ನಾನು 2006-07ನೇ ಸಾಲಿನಲ್ಲಿ ಆಯವ್ಯಯವನ್ನು ಮಂಡಿಸುವ ಸಮಯದಲ್ಲಿ ಆರ್ಥಿಕ ಇಲಾಖೆಯಲ್ಲಿ ಒಂದು ವಿಶೇಷ ಕೋಶವನ್ನು ತೆಗೆದು, ಲಿಂಗ ಆಧಾರಿತ ಆಯವ್ಯಯ ಪತ್ರವನ್ನು ಮಂಡಿಸುವ ಬಗ್ಗೆ ಗೌರವಾನ್ವಿತ ಸದನದ ಮುಂದೆ ಆಶ್ವಾಸನೆಯನ್ನು ನೀಡಿದ್ದೆನು. ಲಿಂಗ ಆಧಾರಿತ ಪತ್ರವು ಮಹಿಳೆಯರ ಸಮಸ್ಯೆಗಳ ಬಗ್ಗೆ ಸರ್ಕಾರವು ಯಾವ ರೀತಿ ಸ್ಪಂದಿಸುತ್ತಿದೆ ಎನ್ನುವುದನ್ನು ತಿಳಿಸುವ ಒಂದು ದಾಖಲೆ ಪತ್ರವಾಗಿದೆ. ಕರ್ನಾಟಕ ಸರ್ಕಾರದ **ಮೊಟ್ಟಮೊದಲ ಲಿಂಗ ಆಧಾರಿತ ಆಯವ್ಯಯದ ದಾಖಲೆಪತ್ರವನ್ನು** ಗೌರವಾನ್ವಿತ ಸದನದ ಮುಂದೆ ಮಂಡಿಸಲು ನಾನು ಹರ್ಷಿಸುತ್ತೇನೆ. ಈ ದಾಖಲೆ ಪತ್ರದ ಗುಣಮಟ್ಟವನ್ನು ಹೆಚ್ಚಿಸುವ ಬಗ್ಗೆ ತಮ್ಮಿಂದ ಟೀಕೆ ಟಿಪ್ಪಣಿಗಳು, ಸಲಹೆಗಳು ಮತ್ತು ಸಹಾಯವನ್ನು ನಾನು ಆಶಿಸುತ್ತೇನೆ. ಈ ರೀತಿಯ ಲಿಂಗ ಆಧಾರಿತ ಆಯವ್ಯಯ ದಾಖಲೆ ಪತ್ರದಿಂದ ಮುಂದಿನ ವರ್ಷಗಳಲ್ಲಿ ಮಹಿಳೆಯರ ಬಗ್ಗೆ ನಮ್ಮ ಸರ್ಕಾರದ ಸ್ಪಂದನೆಯನ್ನು ಹೆಚ್ಚಿಸಲಿದೆ ಎಂದು ನಾನು ಆಶಿಸುತ್ತೇನೆ.

112. ನಮ್ಮ ಸರ್ಕಾರವು 2006-07ನೇ ಸಾಲಿನಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳಿಗೆ ಚಾಲನೆ ನೀಡಿದೆ. ಇಡೀ ರಾಜ್ಯವೇ **ಭಾಗ್ಯಲಕ್ಷ್ಮಿ ಯೋಜನೆಯನ್ನು** ಸ್ವಾಗತಿಸಿದೆ. ಯೋಜನೆಗೆ ನೋಂದಣಿ ಮತ್ತು ಅರ್ಹತೆಯನ್ನು ಕುರಿತಂತೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ನೀಡಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬದಲ್ಲಿ ಏಪ್ರಿಲ್ 1, 2006 ರ ನಂತರ ಜನಿಸಿದ ಸುಮಾರು 1.5 ಲಕ್ಷ ಹೆಣ್ಣು ಮಕ್ಕಳನ್ನು ಇದರಡಿ ಯೋಜಿಸಿಕೊಳ್ಳಲಾಗಿದೆ. ಭಾಗ್ಯಲಕ್ಷ್ಮಿ ಯೋಜನೆಯ ನಿಧಿಯನ್ನು ನಿರ್ವಹಿಸಲು ನಮ್ಮ ಸರ್ಕಾರವು ಒಂದು ನೋಂದಾಯಿತ ಟ್ರಸ್ಟನ್ನು ಸ್ಥಾಪಿಸಿದೆ. ಪ್ರತಿ ಫಲಾನುಭವಿ ಹೆಣ್ಣು ಮಗುವಿಗೆ

ತಲಾ 10,000 ರೂ.ಗಳ ಠೇವಣಿ ಮತ್ತು ಈ ಠೇವಣಿಗೆ 2006-07ನೇ ಸಾಲಿನಲ್ಲಿ ಸಂಗ್ರಹವಾದ ಶೇ.8.5 ರ ಬಡ್ಡಿ ಹಣವನ್ನು ಸೇರಿಸಿ ಒಟ್ಟು 166 ಕೋಟಿ ರೂ.ಗಳನ್ನು ಈ ಟ್ರಸ್ಟ್‌ಗೆ ವರ್ಗಾಯಿಸಲಾಗಿದೆ. ಭಾಗ್ಯಲಕ್ಷ್ಮಿ ಯೋಜನೆಗೆ ನಿಗದಿ ಮಾಡಿರುವ ನಿಧಿಯನ್ನು ಸಂಪೂರ್ಣವಾಗಿ ವರ್ಗಾಯಿಸಲಾಗಿದ್ದು, ಇದು ಸುರಕ್ಷಿತವಾಗಿದೆ. ನಮ್ಮ ಸರ್ಕಾರವು ಈ ಯೋಜನೆಯನ್ನು 2007-08ನೇ ಸಾಲಿನಲ್ಲೂ ಕೂಡ ಮುಂದುವರೆಸಲು ಉದ್ದೇಶಿಸಿದ್ದು ಇದಕ್ಕಾಗಿ **ನಾನು 225 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

113. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು 27 ವಿದ್ಯಾರ್ಥಿನಿ ನಿಲಯಗಳನ್ನು ನಡೆಸುತ್ತಿದೆ. 2007-08ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 10 ನೂತನ ಹಾಸ್ಟೆಲ್‌ಗಳನ್ನು ಆರಂಭಿಸಲಾಗುವುದು. ಮಹಿಳೆಯರು ಉದ್ಯೋಗಾಧಾರಿತ ತರಬೇತಿಯನ್ನು ಕೈಗೊಳ್ಳಲು ಅನುವಾಗುವಂತೆ 2 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ. ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ದೇವದಾಸಿಯರ ಪುನರ್ವಸತಿ ಮತ್ತು ಮಹಿಳೆಯರ ಸ್ವಂತ ಉದ್ಯೋಗ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗುವುದು.

114. ರಾಜ್ಯದಲ್ಲಿ 2000-01ರಲ್ಲಿ ಆರಂಭವಾಗಿರುವ ಸ್ತ್ರೀಶಕ್ತಿ ಯೋಜನೆಯು ಅಭೂತಪೂರ್ವ ಯಶಸ್ಸನ್ನು ಕಂಡಿದೆ. ಗ್ರಾಮೀಣ ಮಹಿಳೆಯರು ಇದರಿಂದ ಸಬಲರಾಗಿದ್ದಾರೆ. ಕರ್ನಾಟಕದಲ್ಲಿ ಸಾರಾಯಿ ನಿಷೇಧ ಮಾಡುತ್ತಿರುವುದನ್ನು ಈ ಮುಂಗಡ ಪತ್ರದಲ್ಲಿ ನಾನು ಪ್ರಸ್ತಾಪಿಸಿದ್ದೇನೆ. ಇದರ ಭಾಗಶಃ ಯಶಸ್ಸು ಈ ಸ್ತ್ರೀಶಕ್ತಿ ತಂಡಗಳಿಗೆ ಸಲ್ಲುತ್ತದೆ.

**ಸ್ತ್ರೀಶಕ್ತಿ ಭವನ :**

115. ಸ್ತ್ರೀಶಕ್ತಿ ತಂಡಗಳ ತರಬೇತಿ ಮತ್ತು ಆವರ್ತನಿಧಿಗೆ ಹಣ ಒದಗಿಸಲು ನಾನು 23 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಸ್ತ್ರೀಶಕ್ತಿ ತಂಡಗಳ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲ ಒದಗಿಸಲು ನಾನು 2007-08ನೇ ಸಾಲಿನಲ್ಲಿ 7.5 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಆಯ್ದ 50 ತಾಲ್ಲೂಕು ಕೇಂದ್ರಗಳಲ್ಲಿ 'ಸ್ತ್ರೀಶಕ್ತಿ ಭವನ'ಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಈ ಭವನಗಳಲ್ಲಿ ಸ್ತ್ರೀಶಕ್ತಿ ತಂಡಗಳ ಉತ್ಪನ್ನಗಳ ಮಾರಾಟಕ್ಕೆ ಸ್ಥಳಾವಕಾಶ ಕಲ್ಪಿಸಲಾಗುವುದು.

**ಆದರ್ಶ ವಿವಾಹ:**

116. ನಮ್ಮ ಸಮಾಜದಲ್ಲಿ ಈಗ ವಿವಾಹಗಳು ದುಬಾರಿಯ ವಿಷಯಗಳಾಗುತ್ತಿವೆ. ಬಡಕುಟುಂಬಗಳಿಗೆ ಮತ್ತು ಮಧ್ಯಮವರ್ಗದ ಕುಟುಂಬಗಳಿಗೆ ಮದುವೆ ಹೊರೆಯಾಗುತ್ತಿದೆ. ಸಾಮೂಹಿಕ ವಿವಾಹಗಳು ಈ ನಿಟ್ಟಿನಲ್ಲಿ ಒಂದು ಪರಿಹಾರವಾಗಿದೆ. ಇದಕ್ಕೆ ಬೆಂಬಲವಾಗಿ ಸರ್ಕಾರವು **'ಆದರ್ಶ ವಿವಾಹ'** ಎನ್ನುವ ನೂತನ ಕಾರ್ಯಕ್ರಮವನ್ನು ಜಾರಿಗೆ ತರಲು ಉದ್ದೇಶಿಸಿದೆ. ಈ ಯೋಜನೆಯಡಿ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗುವ ಪ್ರತಿಯೊಬ್ಬ ಯುವತಿಗೂ 10,000 ರೂ.ಗಳ ಪ್ರೋತ್ಸಾಹ ಧನವನ್ನು 2 ವರ್ಷಗಳ ಅವಧಿಯ ಠೇವಣಿ ರೂಪದಲ್ಲಿ ಸರ್ಕಾರದ ವತಿಯಿಂದ ನೀಡಲಾಗುವುದು. ಕನಿಷ್ಠ 25 ವಿವಾಹಗಳು ನಡೆದಿರುವ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮದುವೆಯಾಗಿರುವವರು ಮಾತ್ರ ಈ ಅನುಕೂಲ ಪಡೆಯಲು ಅರ್ಹತೆ ಹೊಂದಿರುತ್ತಾರೆ. **ನಾನು ಈ ಉದ್ದೇಶಕ್ಕಾಗಿ 10 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.**

**ಅಮೃತ ಯೋಜನೆ:**

117. ಸಾಮಾಜಿಕ-ಧಾರ್ಮಿಕ ಕಟ್ಟುಪಾಡುಗಳಿಂದಾಗಿ ವಿಧವೆಯರು ಮತ್ತು ದೇವದಾಸಿಯರು ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ಜೀವನ ನಿರ್ವಹಿಸುತ್ತಿದ್ದಾರೆ. ಇವರು ಗೌರವಯುತ ಜೀವನ ನಡೆಸಲು ಅನುಕೂಲವಾಗುವಂತೆ ನಾನು **'ಅಮೃತಾ ಯೋಜನೆ'** ಯನ್ನು ಆರಂಭಿಸಲು ಉದ್ದೇಶಿಸಿದ್ದೇನೆ. ಈ ಯೋಜನೆಯಡಿ 50,000 ಮಹಿಳೆಯರಿಗೆ ತಲಾ ಒಂದೊಂದು ಹಾಲು ಕರೆಯುವ ಹಸು ಅಥವಾ ಎಮ್ಮೆಯನ್ನು ಖರೀದಿಸಲು ನೆರವು ನೀಡಲಾಗುವುದು. 10,000 ರೂ.ಗಳ ಸಾಲದ ಜೊತೆಗೆ 10,000 ರೂ.ಗಳ ಸಹಾಯಧನ ಸೇರಿಸಿ ಒಟ್ಟು 20,000 ರೂ.ಗಳನ್ನು ಈ ಮಹಿಳೆಯರಿಗೆ ನೀಡಲಾಗುವುದು.

118. ಕರ್ನಾಟಕ ಹಾಲು ಒಕ್ಕೂಟವು ಈ ಮಹಿಳೆಯರಿಗೆ ಉತ್ತಮ ತಳಿಯ ಹಸು, ಎಮ್ಮೆಯನ್ನು ನೀಡುವುದರಿಂದ ಹಿಡಿದು ಸೂಕ್ತ ತರಬೇತಿ, ಚಿಕಿತ್ಸೆ ಹಾಗೂ ಹಾಲು ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲಿದೆ. **ಈ ಉದ್ದೇಶಕ್ಕಾಗಿ ನಾನು 50 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

119. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯಚಟುವಟಿಕೆಗಳಿಗೆ 2007-08ನೇ ಸಾಲಿನಲ್ಲಿ ನಾನು 1 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

**ಅಂಗವಿಕಲರ ಕಲ್ಯಾಣ:**

120. ಅಂಗವಿಕಲರಿಗಾಗಿ 2001-02ರಲ್ಲಿ ಜಾರಿಗೊಳಿಸಿರುವ ಎನ್‌ಪಿಡಿಆರ್‌ಪಿ ಯೋಜನೆಯನ್ನು ನಮ್ಮ ಸರ್ಕಾರವು ಪುನರ್ ಪರಿಶೀಲಿಸಿ ಹೊಸ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು. ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು **ನಾನು 5.92 ಕೋಟಿ ರೂಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.**

121. ಅಂಗವಿಕಲರಿಗಾಗಿ ರೂಪಿಸಿರುವ ಆಧಾರ ಯೋಜನೆಯಡಿ ಪ್ರತಿ ಫಲಾನುಭವಿಗೆ 35,000 ರೂ.ಗಳ ಸಾಲವನ್ನು ಒದಗಿಸಲಾಗುವುದು. ಇದರಲ್ಲಿ 15,000 ರೂ.ಗಳ ಕಿರು ಮಳಿಗೆ ದೊರೆಯುತ್ತದೆ ಮತ್ತು ಉಳಿಕೆ 20,000 ರೂ.ಗಳು ಉದ್ಯೋಗ ಕೈಗೊಳ್ಳಲು ಬಡ್ಡಿರಹಿತ ಸಾಲವಾಗಿರುತ್ತದೆ. ಈ ಉದ್ದೇಶಕ್ಕಾಗಿ 1 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗುವುದು.

122. ಅಂಗವಿಕಲರು ಸಾಮಾನ್ಯರಂತೆ ಕಾರ್ಯನಿರ್ವಹಿಸಲು **ಕೆಲವೊಮ್ಮೆ ಅವರಿಗೆ ಟ್ರೈಸಿಕಲ್, ಶ್ರವಣ ಸಾಧನ ಅಥವಾ ಊರುಗೋಲಿನಂತಹ** ಸರಳ ಉಪಕರಣಗಳು ಅಥವಾ ಸಾಧಾರಣ ನೆರವು ಅಗತ್ಯವಿರುತ್ತದೆ. ಆದ್ದರಿಂದ ಇವರಿಗೆ ಅಗತ್ಯವಿರುವ ಉಪಕರಣ ಹಾಗೂ ನೆರವನ್ನು ಒದಗಿಸಿ ಅವರ ಸಾಮರ್ಥ್ಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ. **ಇದಕ್ಕಾಗಿ 10 ಕೋಟಿ ರೂ..ಗಳನ್ನು ಒದಗಿಸಲಾಗುವುದು.**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ:**

123. ನಮ್ಮ ಸರ್ಕಾರವು 2006-07ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಟೆಲಿಮೆಡಿಸನ್ ಕಾರ್ಯಕ್ರಮಗಳನ್ನು ಜಾರಿಗೊಳಿಸಿತು. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಮಲೇರಿಯಾ ನಿಯಂತ್ರಣ, ಅಂಧತ್ವ ತಡೆ ಮತ್ತು ನಿಯಂತ್ರಣ, ಕ್ಷಯ ರೋಗ ನಿಯಂತ್ರಣ ಇವುಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ರಾಜ್ಯದ ಪಾಲಿನ ಹಣವನ್ನು ಸಂಪೂರ್ಣವಾಗಿ ಒದಗಿಸಲಾಗಿದೆ.

124. ಭಾರತ ಸರ್ಕಾರವು ತನ್ನ 2007-08ನೇ ಸಾಲಿನ ಆಯವ್ಯಯದಲ್ಲಿ **'ಆಮ್ ಆದ್ಮಿ ವಿಮಾ ಯೋಜನೆ'** ಎನ್ನುವ ನೂತನ ಯೋಜನೆಯನ್ನು ಘೋಷಿಸಿದೆ. ನಮ್ಮ **'ಸುವರ್ಣ ಸುರಕ್ಷಾ ಯೋಜನೆ'**ಯನ್ನು ಕೇಂದ್ರದ

ನೂತನ ಯೋಜನೆಯ ಜೊತೆಗೆ ಸಂಯೋಜಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಸುವರ್ಣ ಸುರಕ್ಷಾ ಯೋಜನೆಯನ್ನು ಅನುಷ್ಠಾನಗೊಳಿಸಲು 2007-08ನೇ ಸಾಲಿಗೆ 35 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

125. ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕು ಆಸ್ಪತ್ರೆಗಳನ್ನು ಹಂತ ಹಂತವಾಗಿ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು 2006-07ನೇ ಸಾಲಿನಲ್ಲಿ ನಾವು ತೀರ್ಮಾನ ಕೈಗೊಂಡಿದ್ದೆವು. ಈಗಾಗಲೇ 45 ಆಸ್ಪತ್ರೆಗಳ ಕಟ್ಟಡ ನಿರ್ಮಾಣವು ಆರಂಭವಾಗಿದೆ. ಉಳಿದ ಆಸ್ಪತ್ರೆಗಳ ಕಟ್ಟಡ ನಿರ್ಮಾಣ ಕಾರ್ಯ 2007-08ನೇ ಸಾಲಿನಲ್ಲಿ ಆರಂಭವಾಗಲಿದೆ. **ಈ ಉದ್ದೇಶಕ್ಕಾಗಿ ನಾನು 45 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.**

**ಆಸ್ಪತ್ರೆಗಳಲ್ಲಿ ಸಂಜೆ ಹೊರ ರೋಗಿ ಸೇವೆಗಳ ಆರಂಭ:**

126. ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸುವವರು ಬಹುತೇಕ ಬಡಜನರಾಗಿರುತ್ತಾರೆ. ನಮ್ಮ ಹಲವಾರು ಆಸ್ಪತ್ರೆಗಳ ಹೊರರೋಗಿ ವಿಭಾಗಗಳು ಸರ್ಕಾರಿ ಕಛೇರಿಗಳಂತೆ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಿವೆ. ಇದು ದುಡಿಯುವ ಜನರು, ಮತ್ತು ಕಛೇರಿಗೆ ಹೋಗುವ ಜನರು ಕೆಲಸಕ್ಕೆ ಹೋಗುವ ಸಮಯವಾಗಿರುತ್ತದೆ. ಅವರು ಕೆಲಸದಿಂದ ವಾಪಸ್ಸು ಬರುವ ವೇಳೆಗೆ ಹೊರರೋಗಿ ವಿಭಾಗಗಳು ಮುಚ್ಚಿರುತ್ತವೆ. ಹೀಗಾಗಿ ನಮ್ಮ ಆಸ್ಪತ್ರೆ ವ್ಯವಸ್ಥೆ ಗರಿಷ್ಠ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಆದ್ದರಿಂದ ನಮ್ಮ ಆಸ್ಪತ್ರೆಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು 30 ಹಾಸಿಗೆ ಹಾಗೂ ಅದಕ್ಕಿಂತ ಹೆಚ್ಚಿನ ಹಾಸಿಗೆ ಸಾಮರ್ಥ್ಯವುಳ್ಳ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಂಜೆಯ ಹೊರರೋಗಿ ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ. ಈ

ವಿಭಾಗಗಳು ಸಂಜೆ 5.30 ರಿಂದ ರಾತ್ರಿ 8.30 ರವರೆಗೆ ಕಾರ್ಯ ನಿರ್ವಹಿಸಲಿವೆ. ಸರ್ಕಾರಿ ಆಸ್ಪತ್ರೆಯ ಎಲ್ಲಾ ವೈದ್ಯರು ವಾರದಲ್ಲಿ ಗರಿಷ್ಟ ಐದು ದಿನ ಸಂಜೆ ಹೊರರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಬೇಕು. ಈ ವಿಭಾಗದಲ್ಲಿ ಕಾರ್ಯನಿರ್ವಹಿಸುವ ವೈದ್ಯರಿಗೆ ಪ್ರತಿ ದಿನಕ್ಕೆ 300 ರೂ.ಗಳ ಹೆಚ್ಚುವರಿ ಗೌರವ ಧನವನ್ನು ನೀಡಲಾಗುವುದು. ಇದೇ ರೀತಿ ದಾದಿಯರು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಗೆ ಪ್ರತಿ ದಿನಕ್ಕೆ 100 ರೂ.ಗಳ ಗೌರವ ಧನವನ್ನು ನೀಡಲಾಗುವುದು. ಸಂಬಂಧಿಸಿದ ಆಸ್ಪತ್ರೆಯ ಆಡಳಿತ ವೈದ್ಯರು ಮತ್ತು ವೈದ್ಯಾಧಿಕಾರಿಗಳು ಸಂಜೆ ಹೊರರೋಗಿಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಸಿಬ್ಬಂದಿಗಳನ್ನು ನಿಯೋಜಿಸುತ್ತಾರೆ. ಈ ಸಂಜೆ ಹೊರರೋಗಿ ಸೇವೆಯು ವೈದ್ಯರುಗಳಿಗೆ ಸ್ವಯಂ ಪ್ರೇರಣೆ ಸೇವೆಯಾಗಿರುತ್ತದೆ. ಸರ್ಕಾರಿ ವೈದ್ಯರುಗಳು ಸಂಜೆ ಹೊರರೋಗಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಮುಂದೆ ಬಾರದಿದ್ದರೆ ಸಂಬಂಧಿಸಿದ ಆಡಳಿತ ವೈದ್ಯಾಧಿಕಾರಿಗಳು ಅರ್ಹತೆಯುಳ್ಳ ಖಾಸಗಿ ವೈದ್ಯರ ಸೇವೆಯನ್ನು ಪಡೆದು ಸಂಜೆ ಹೊರರೋಗಿ ವಿಭಾಗವನ್ನು ನಡೆಸಬಹುದು. ಈ ಬಗ್ಗೆ ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು.

127. ಈ ಹೊಸ ವಿಧಾನದಿಂದ ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆಯಿದೆ. ಆದ್ದರಿಂದ ಆಸ್ಪತ್ರೆಗೆ ಪೂರೈಸುವ ಔಷಧಿಗಳಿಗಾಗಿ ಅನುದಾನವನ್ನು **2007-08ನೇ ಸಾಲಿನಲ್ಲಿ 107 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.**

128. ಗರ್ಭಿಣಿ ತಾಯಂದಿರು ಹೆರಿಗೆಗೆ ಸಾರ್ವಜನಿಕ ಆಸ್ಪತ್ರೆಗಳಿಗೆ ಹೋಗುವಂತೆ ಉತ್ತೇಜಿಸಲು ವೈದ್ಯಕೀಯ ಕಿಟ್ ಒದಗಿಸಲು ಉದ್ದೇಶಿಸಲಾಗಿದೆ. ಈ ಕಿಟ್‌ನಲ್ಲಿ ಹೆರಿಗೆ ನಂತರದ ಮೂರು ತಿಂಗಳವರೆಗೆ ತಾಯಿ ಮತ್ತು ಮಗುವಿಗೆ ಅಗತ್ಯವಿರುವ ಸೊಳ್ಳೆ ಪರದೆ,

ಸೋಪು, ಲೋಶನ್ ಇತ್ಯಾದಿ ಆರೋಗ್ಯ ಸಂಬಂಧಿ ಸಾಮಗ್ರಿಗಳಿರುತ್ತವೆ. **ಈ ಕಿಟ್‌ಗಳ ಪೂರೈಕೆಗಾಗಿ ನಾನು 5 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

**ವೈದ್ಯಕೀಯ ಶಿಕ್ಷಣ:**

129. ಸರ್ಕಾರವು 2005-06ನೇ ಸಾಲಿನಲ್ಲಿ ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಆರಂಭಿಸಲು ಚಾಲನೆ ನೀಡಿತು. ಈ ಕಾರ್ಯ ಚುರುಕಿನಿಂದ ನಡೆಯುತ್ತಿದೆ. ಆರು ಕಾಲೇಜುಗಳ ಪ್ರಥಮ ಹಂತದ ಕಾಮಗಾರಿಗಳು ಮುಗಿದಿದ್ದು, ಎರಡನೆ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತವೆ. ಈ ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸಲು 2007-08ನೇ ಸಾಲಿನಲ್ಲಿ ನಾನು **64.5 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.**

130. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು (ಕೆಎಂಸಿ) ತನ್ನ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದೆ. ನಮ್ಮ ಸರ್ಕಾರವು ಈ ಸಂಸ್ಥೆಯನ್ನು ಚಂಡಿಗಡದ ಪಿಜಿಐ ಮಾದರಿಯಲ್ಲಿ 100 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ನಿರ್ಧರಿಸಿದೆ. 2007-08ನೇ ಸಾಲಿನಲ್ಲಿ ಈ ಉದ್ದೇಶಕ್ಕೆ **20 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

131. **ಬಳ್ಳಾರಿಯ ವೈದ್ಯಕೀಯ ಕಾಲೇಜನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು,** ಇದಕ್ಕಾಗಿ 8 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ. ಇದರಿಂದ 100 ವಿದ್ಯಾರ್ಥಿಗಳ ಪ್ರವೇಶ ಸಾಮರ್ಥ್ಯವು 150ಕ್ಕೆ ಏರಿಕೆಯಾಗಲಿದೆ. ಇದರ ಜೊತೆಗೆ ಬಳ್ಳಾರಿಯ ದಂತವೈದ್ಯ ಕಾಲೇಜಿನ ಕಟ್ಟಡ ನಿರ್ಮಾಣವನ್ನು 8 **ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.**

132. **ಗುಲ್ಬರ್ಗಾದಲ್ಲಿರುವ ನರ್ಸಿಂಗ್ ಶಾಲೆಯ** ಸೌಲಭ್ಯಗಳನ್ನು ಮೇಲ್ದರ್ಜೆಗೇರಿಸುವ ಅಗತ್ಯವಿದ್ದು ಇದಕ್ಕಾಗಿ **ನಾನು 1.3 ಕೋಟಿ** ರೂ.ಗಳನ್ನು ಒದಗಿಸುತ್ತಿದ್ದೇನೆ.

133. ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ಬೆಂಗಳೂರು ಪೂರ್ವ ಭಾಗದ ನಾಗರೀಕರಿಗೆ ಆರೋಗ್ಯ ಸೇವೆ ನೀಡಲು ಸಾರ್ವಜನಿಕ ಆಸ್ಪತ್ರೆಗಳು ಇರುವುದಿಲ್ಲ. ಆದ್ದರಿಂದ ಇಂದಿರಾನಗರದಲ್ಲಿ **ಸಾರ್ವಜನಿಕ ಆಸ್ಪತ್ರೆಯ ನಿರ್ಮಾಣಕ್ಕಾಗಿ ನಾನು 10 ಕೋಟಿ** ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

134. ಮಧುಮೇಹ ಕಾಯಿಲೆಯು ಈಗ ಶ್ರೀಮಂತರ ಖಾಯಿಲೆಯಾಗಿ ಉಳಿದಿಲ್ಲ. ಇತ್ತೀಚಿನ ಸಮೀಕ್ಷೆಯಂತೆ ಬಡಜನರಲ್ಲೂ ಕೂಡ ಈ ಖಾಯಿಲೆಯು ವ್ಯಾಪಕವಾಗಿದೆ. ಆದ್ದರಿಂದ **'ಬೆಂಗಳೂರು ಮಧುಮೇಹ ಕೇಂದ್ರ'**ವನ್ನು ಸ್ಥಾಪಿಸಲು ನಾನು 6 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

135. ಕರ್ನಾಟಕ ನೆಫ್ರೋಯುರಾಲಜಿ ಸಂಸ್ಥೆಗೆ 2007-08ನೇ ಸಾಲಿನಲ್ಲಿ 3.5 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

136. ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಾದ ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಗಳಿಗೆ ನೀಡುವ ಅನುದಾನವನ್ನು 2006-07ನೇ ಸಾಲಿನಲ್ಲಿನ 30 ಕೋಟಿ ರೂ.ಗಳಿಂದ 2007-08ನೇ ಸಾಲಿನಲ್ಲಿ 40.50 ಕೋಟಿ ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ.

**ರಾಮನಗರ ಆರೋಗ್ಯ ನಗರ:**

137. ನಮ್ಮ ಸರ್ಕಾರವು ರಾಮನಗರವನ್ನು **'ಆರೋಗ್ಯ ನಗರ'**ವನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ವೈದ್ಯಕೀಯ ವಿಶ್ವವಿದ್ಯಾನಿಲಯವು ತನ್ನ ಆಡಳಿತ ವಿಭಾಗ, ಸಂಯೋಜಿತ ವೈದ್ಯಕೀಯ ಕಾಲೇಜು, ದಂತವೈದ್ಯಕಾಲೇಜು ಮತ್ತು ನರ್ಸಿಂಗ್ ಶಾಲೆಗಳನ್ನು ಉದ್ದೇಶಿತ ಆರೋಗ್ಯ ನಗರದಲ್ಲಿ ಸ್ಥಾಪಿಸಲಿದೆ. ವೈದ್ಯಕೀಯ ವಿಶ್ವವಿದ್ಯಾಲಯವು 250 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೂಡ ಸ್ಥಾಪಿಸಲಿದೆ. ಈ ಯೋಜನೆಯ ಒಟ್ಟಾರೆ ವೆಚ್ಚವು 283 ಕೋಟಿ ರೂ.ಗಳಾಗಿದ್ದು ವೈದ್ಯಕೀಯ ವಿಶ್ವವಿದ್ಯಾಲಯವು ಮುಂದಿನ ಮೂರು ವರ್ಷಗಳಲ್ಲಿ 150 ಕೋಟಿ ರೂ.ಗಳನ್ನು ವೆಚ್ಚ ಮಾಡಲಿವೆ. ನಮ್ಮ ಸರ್ಕಾರವು ಮುಂದಿನ ಮೂರು ವರ್ಷಗಳಲ್ಲಿ 133 ಕೋಟಿ ರೂ.ಗಳನ್ನು ಒದಗಿಸಲಿದೆ. ಈ ಉದ್ದೇಶಕ್ಕಾಗಿ **2007-08ನೇ ಸಾಲಿನಲ್ಲಿ ನಾನು 43 ಕೋಟಿ ರೂ.ಗಳನ್ನು** ಒದಗಿಸುತ್ತಿದ್ದೇನೆ.

**ಪ್ರಾಥಮಿಕ ಶಿಕ್ಷಣ:**

***'ವಿದ್ಯೆಯಿಂದ ವಿನಯ,***
***ವಿನಯದಿಂದ ಗೌರವ***
***ಗೌರವದಿಂದ ಧನ ಪ್ರಾಪ್ತಿ***
***ಧನದಿಂದ ಧರ್ಮಾಚರಣೆ***
***ತನ್ಮೂಲಕ ಸುಖ ಪ್ರಾಪ್ತಿ' - ಎಂದು ಸುಭಾಷಿತ ಸಾರುತ್ತದೆ.***

*ಎಲ್ಲರೂ ವಿದ್ಯಾವಂತರಾಗಿ ಏಳಿಗೆ ಹೊಂದಬೇಕೆಂಬುದು ಸರ್ಕಾರದ ಆಶಯ. ಆದ್ದರಿಂದ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ.*

138. ಕರ್ನಾಟಕವು ಮೂಲ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ರಾಜ್ಯದ ಶೇಕಡಾ 97ರಷ್ಟು ಜನಸಂಖ್ಯೆಯು ಒಂದು

ಕಿಲೋ ಮೀಟರ್ ಅಂತರದಲ್ಲಿ ಪ್ರಾಥಮಿಕ ಶಾಲೆಯನ್ನು ಹೊಂದಿರುತ್ತದೆ. ಒಂದರಿಂದ ಐದನೇ ತರಗತಿ ನಡುವೆ ಶಾಲೆ ಬಿಡುವ ಮಕ್ಕಳ ಪ್ರಮಾಣ ಅತ್ಯಲ್ಪವಾಗಿದೆ. ಶಿಕ್ಷಕರ ನೇಮಕಾತಿಯ ಜೊತೆಗೆ ನಾವು ಶಿಕ್ಷಕರ ತರಬೇತಿ ಶಾಲೆಗಳನ್ನು ಸ್ಥಾಪಿಸಲು ಕೂಡ ಹೆಚ್ಚು ಒತ್ತು ನೀಡುತ್ತಿದ್ದೇವೆ.

139. ಸರ್ವಶಿಕ್ಷಣ ಅಭಿಯಾನ ಯೋಜನೆಯು ಕೇಂದ್ರ ನೆರವಿನ ಯೋಜನೆಯಾಗಿದೆ. ಈ ಯೋಜನೆಗಾಗಿ 2007-08ನೇ ಸಾಲಿನಿಂದ ರಾಜ್ಯಸರ್ಕಾರವು ಶೇ.50ರಷ್ಟು ವೆಚ್ಚವನ್ನು ಭರಿಸಬೇಕಾಗಿದ್ದು ಇದು ಈವರೆಗೆ ಶೇ.25ರಷ್ಟು ಮಾತ್ರ ಇತ್ತು. ಆದ್ದರಿಂದ 2007-08ನೇ ಸಾಲಿಗೆ ನಾನು 700 ಕೋಟಿ ರೂ.ಗಳನ್ನು ಸರ್ವಶಿಕ್ಷಣ ಅಭಿಯಾನ ಯೋಜನೆಗೆ ಒದಗಿಸಲು ಉದ್ದೇಶಿಸಿದ್ದೇನೆ.

140. ನಮ್ಮ ಸರ್ಕಾರವು **'ವಿದ್ಯಾವಿಕಾಸ'** ಕಾರ್ಯಕ್ರಮವನ್ನು ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೂ ಕೂಡ ವಿಸ್ತರಿಸಲು ಉದ್ದೇಶಿಸಿದೆ. ಈ ಕಾರ್ಯಕ್ರಮದ ವಿಸ್ತರಣೆಯಿಂದ 4.70 ಲಕ್ಷ ವಿದ್ಯಾರ್ಥಿಗಳು ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳ ಅನುಕೂಲ ಪಡೆಯಲಿದ್ದಾರೆ. ಈ ಕಾರ್ಯಕ್ರಮಕ್ಕಾಗಿ ನಾನು 6 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

141. ನಮ್ಮ ಸರ್ಕಾರವು **'ಅಕ್ಷರ ದಾಸೋಹ'** ಯೋಜನೆಯನ್ನು 2007-08ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಎಂಟರಿಂದ ಹತ್ತನೇ ತರಗತಿ ವಿದ್ಯಾರ್ಥಿಗಳಿಗೂ ಕೂಡ ವಿಸ್ತರಿಸಲು ಉದ್ದೇಶಿಸಿದೆ. ಇದರಿಂದ ಎಂಟರಿಂದ ಹತ್ತನೇ ತರಗತಿಯಲ್ಲಿ ಕಲಿಯುತ್ತಿರುವ ಸುಮಾರು 17.18 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ದೊರೆಯಲಿದೆ.

142. 2007-08ನೇ ಸಾಲಿನಲ್ಲಿ ನಾನು ಸರ್ಕಾರಿ ಪ್ರೌಢಶಾಲೆ ಮತ್ತು ಪಿ.ಯು. ಕಾಲೇಜುಗಳಲ್ಲಿ **ಕೊಠಡಿಗಳ ನಿರ್ಮಾಣಕ್ಕಾಗಿ 70 ಕೋಟಿ** ರೂ.ಗಳನ್ನು ಒದಗಿಸಲಿದ್ದೇನೆ.

**ಸಹಾಯಾನುದಾನದ ವಿಸ್ತರಣೆ:**

143. ದಿನಾಂಕ 01.06.1987 ರಿಂದ 01.07.1992ರ ವರೆಗಿನ ನಡುವೆ ಆರಂಭವಾಗಿರುವ ಪರಿಶಿಷ್ಟ ಜಾತಿ/ ಪಂಗಡಗಳ ಆಡಳಿತ ವರ್ಗಕ್ಕೆ ಸೇರಿದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರಿ ಅನುದಾನಕ್ಕೆ ಒಳಪಡಿಸಲಾಗಿದೆ. ಈ ಅನುದಾನ ಸೌಲಭ್ಯವನ್ನು ಶಿಕ್ಷಣ ಇಲಾಖೆಯು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ, 1992-93 ಮತ್ತು ಅದಕ್ಕೂ ಹಿಂದೆ ಆರಂಭವಾಗಿರುವ; ಪ್ರಾಥಮಿಕ, ಹೈಸ್ಕೂಲ್ ಮತ್ತು ಪಿ.ಯು. ಕಾಲೇಜುಗಳಿಗೂ ಕೂಡ ವಿಸ್ತರಿಸಲಾಗುವುದು.

144. ವಿದ್ಯಾರ್ಥಿಗಳ ಪ್ರಗತಿ ಆಧರಿಸಿ ಅನುದಾನ ನೀಡುವ ನೂತನ ನೀತಿಯನ್ನು ಸರ್ಕಾರವು ಜಾರಿಗೊಳಿಸಲು ಉದ್ದೇಶಿಸಿದೆ. ಈ ನೀತಿಯು 1993-94ನೇ ಶೈಕ್ಷಣಿಕ ವರ್ಷದಿಂದೀಚೆಗೆ ಆರಂಭವಾಗಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನ್ವಯವಾಗುತ್ತದೆ. ಈ ನೀತಿಯಿಂದ ಅನುದಾನಿತವಲ್ಲದ ಹಲವಾರು ಶಿಕ್ಷಣ ಸಂಸ್ಥೆಗಳಿಗೆ ಕಾರ್ಯಾಧಾರಿತ ಅನುದಾನವನ್ನು ಪಡೆಯುವ ಅವಕಾಶ ದೊರೆಯುತ್ತದೆ. ಈ ಸಂಬಂಧ **ವಿವರವಾದ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ 50 ಕೋಟಿ ರೂ.ಗಳನ್ನು ನಾನು ಹಂಚಿಕೆ ಮಾಡುತ್ತಿದ್ದೇನೆ.**

145. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಉತ್ತಮ ಗುಣಮಟ್ಟ ಸಾಧಿಸಲು ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳನ್ನು ಸರಿಯಾಗಿ ಉಸ್ತುವಾರಿ ಮಾಡುವುದು ಅಗತ್ಯವಾಗಿದೆ. ಇದಕ್ಕಾಗಿ ಪ್ರತಿಯೊಂದು ಕ್ಲಸ್ಟರ್‌ನಲ್ಲಿರುವ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಆಯ್ಕೆ ಮಾಡಿ ಅದನ್ನು ಎಲ್ಲಾ ರೀತಿಯ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರವನ್ನಾಗಿ ರೂಪಿಸಲಾಗುವುದು. ರಾಜ್ಯದಲ್ಲಿ 2,158 ಕ್ಲಸ್ಟರ್‌ಗಳಿದ್ದು, ಪ್ರತಿ ಕ್ಲಸ್ಟರ್‌ನಲ್ಲಿ ಆಯ್ಕೆಮಾಡುವ ಪ್ರೌಢಶಾಲೆಗೆ ಎಲ್ಲಾ ರೀತಿಯ ಮೂಲಸೌಕರ್ಯಗಳನ್ನು ಒದಗಿಸಲಾಗುವುದು. ಹೀಗೆ ಆಯ್ಕೆಮಾಡಿದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರನ್ನು ಕ್ಲಸ್ಟರ್ ಎಜುಕೇಷನ್ ಆಫೀಸರ್ ಎಂದು ನಿಯೋಜಿಸಿ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗುವುದು. ಶಿಕ್ಷಕರಿಗಾಗಿ ವಸತಿ ಗೃಹಗಳನ್ನು ಕೂಡ ಹಂತ ಹಂತವಾಗಿ ನಿರ್ಮಿಸಲಾಗುವುದು. ಆರಂಭದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಕೆಲವು ಬ್ಲಾಕ್‌ಗಳಲ್ಲಿ ಶಿಕ್ಷಕರ ವಸತಿ ಗೃಹಗಳನ್ನು ನಿರ್ಮಿಸಲಾಗುವುದು. ಈ ಉದ್ದೇಶಕ್ಕಾಗಿ ನಾನು 19 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

146. ‘ಎಜುಸ್ಯಾಟ್-1 ಕಾರ್ಯಕ್ರಮವನ್ನು ಭಾರತ ಸರ್ಕಾರದ ಇಸ್ರೋದ ಸಹಯೋಗದೊಂದಿಗೆ ರಾಜ್ಯಾದ್ಯಂತ ಆಯ್ದ ಸರ್ಕಾರಿ ಉನ್ನತ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ 2 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ.

147. ನಮ್ಮ ಸರ್ಕಾರವು ಶ್ರೀ ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳ ಮೇರೆಗೆ ಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗವನ್ನು ಆರಂಭಿಸಲು ಉದ್ದೇಶಿಸಿದೆ. ಇದನ್ನು ಅನುಷ್ಠಾನಗೊಳಿಸಲು ನಾನು 2 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. 2007-08ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುವುದು.

148. ಇದರ ಜೊತೆಗೆ ರಾಜ್ಯದ ಅತೀ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ 200 ಹೊಸ ಸರ್ಕಾರಿ ಪ್ರೌಢ ಶಾಲೆಗಳು ಮತ್ತು 100 ಸರ್ಕಾರಿ ಪಿ.ಯು. ಕಾಲೇಜುಗಳನ್ನು 2007-08ನೇ ಸಾಲಿನಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ.

**ಉನ್ನತ ಶಿಕ್ಷಣ:**

149. ಇಂಜಿನಿಯರಿಂಗ್ ಕಾಲೇಜುಗಳಿಗೆ ಏರುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ನಾನು ಕುಶಾಲನಗರ, ರಾಯಚೂರು, ಚಾಮರಾಜನಗರ ಮತ್ತು ಬಳ್ಳಾರಿಗಳಲ್ಲಿರುವ ಪಾಲಿಟೆಕ್ನಿಕ್‌ಗಳನ್ನು ಇಂಜಿನಿಯರಿಂಗ್ ಕಾಲೇಜುಗಳಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಿದ್ದೇನೆ. ಇದರ ಜೊತೆಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ತನ್ನ ಸಂಯೋಜಿತ ಇಂಜಿನಿಯರಿಂಗ್ ಕಾಲೇಜನ್ನು ಹಾಸನದಲ್ಲಿ ಆರಂಭಿಸಲಿದೆ. ಈ ಎಲ್ಲಾ ಉದ್ದೇಶಗಳಿಗಾಗಿ 2007-08ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

150. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧನೆಯ ಗುಣಮಟ್ಟವನ್ನು ಟೆಕ್‌ವ್ಯೂಪ್ (Tequip) ಯೋಜನೆಯಡಿ ಮೇಲ್ದರ್ಜೆಗೇರಿಸಲಾಗುವುದು. ಇದಕ್ಕಾಗಿ 2007-08ನೇ ಸಾಲಿನಲ್ಲಿ 70 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

151. ಚಾಮರಾಜನಗರ, ಚಿಕ್ಕಮಗಳೂರು, ಕೆ.ಆರ್.ಪೇಟೆ, ಮಂಗಳೂರು, ಚನ್ನಪಟ್ಟಣ, ಬಿಜಾಪುರ, ಬಳ್ಳಾರಿ, ಕಾರವಾರ ಮತ್ತು ಶಿಕಾರಿಪುರಗಳಲ್ಲಿನ ಪಾಲಿಟೆಕ್ನಿಕ್ ಕಾಲೇಜುಗಳ ಕಟ್ಟಡಗಳನ್ನು ಪೂರ್ಣಗೊಳಿಸಲಾಗುವುದು. ಶಿಕಾರಿಪುರ ತಾಲ್ಲೂಕಿನ ಶಿರಾಳಕೊಪ್ಪದಲ್ಲಿ ಮಹಿಳಾ ಪಾಲಿಟೆಕ್ನಿಕ್‌ನ್ನು ಸ್ಥಾಪಿಸಲಾಗುವುದು. ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 6 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

152. ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ 2007-08ನೇ ಸಾಲಿನಲ್ಲಿ ನಾನು 45 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

153. ರಾಜ್ಯದ 17 ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಣವನ್ನು ಆರಂಭಿಸಲಾಗುವುದು.

154. ರಾಜಧರ್ಮ ಮತ್ತು ನ್ಯಾಯದರ್ಶನ ಇವು ನಮ್ಮ ಶ್ರೀಮಂತ ಸಾಂಸ್ಕೃತಿ ಪರಂಪರೆಗೆ ಹೊಸದಲ್ಲ. ಹಳೆಯ ಪದ್ಧತಿಗಳನ್ನು ಅಧ್ಯಯನ ಮಾಡಿ ಪ್ರಸಕ್ತ ಪರಿಸ್ಥಿತಿಯ ಜೊತೆಗೆ ಹೋಲಿಕೆ ಮಾಡುವ ಅಗತ್ಯವಿದೆ. ಇದು ನ್ಯಾಯಾಂಗ ಆಡಳಿತ ವಿಧಾನಕ್ಕೆ ಹೊಸತನವನ್ನು ನೀಡಲು ನೆರವಾಗಲಿದೆ. ಇದಕ್ಕಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನ್ಯಾಯದರ್ಶನ ಮತ್ತು ರಾಜಧರ್ಮ ಅಧ್ಯಯನಕ್ಕಾಗಿ ಪೀಠವನ್ನು ಸ್ಥಾಪಿಸಲು 1 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

155. ಕುಪ್ಪಂನಲ್ಲಿರುವ ದ್ರಾವಿಡಿಯನ್ ವಿಶ್ವವಿದ್ಯಾನಿಲಯದಲ್ಲಿ ತುಳು ಅಧ್ಯಯನ ಕೇಂದ್ರ ಸ್ಥಾಪಿಸಲು ನಾನು 10 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

156. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕೊಡವರ ಇತಿಹಾಸ ಅಧ್ಯಯನಕ್ಕಾಗಿ ಒಂದು ಪೀಠವನ್ನು ಸ್ಥಾಪಿಸಲು 25 ಲಕ್ಷ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

157. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಸೋಮವಂಶ ಸಹಸ್ರ ಅರ್ಜುನ ಕ್ಷತ್ರಿಯ'ರ ಅಧ್ಯಯನಕ್ಕಾಗಿ ಪೀಠ ಸ್ಥಾಪಿಸಲು 25 ಲಕ್ಷ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

158. ಹಂಪಿ ವಿಶ್ವವಿದ್ಯಾಲಯವು 'ಆಡಳಿತದಲ್ಲಿ ಕನ್ನಡ ಬಳಕೆ' ವಿಷಯದ ಬಗ್ಗೆ ಕೋರ್ಸ್‌ನ್ನು ಆರಂಭಿಸಲು ಉದ್ದೇಶಿಸಿದೆ. ಸರ್ಕಾರಿ ಆಡಳಿತಗಾರರಿಗೆ ಈ ಕೋರ್ಸ್‌ನಿಂದ ಬಹಳ ಉಪಯೋಗವಾಗಲಿದೆ. ಇದಕ್ಕಾಗಿ ನಾನು 50 ಲಕ್ಷ ರೂ.ಗಳನ್ನು ಒದಗಿಸುತ್ತಿದ್ದೇನೆ.

159. ಧಾರವಾಡ ಮತ್ತು ಮೈಸೂರಿನಲ್ಲಿ ಕನಕ ಅಧ್ಯಯನ ಪೀಠಗಳಿಗಾಗಿ ತಲಾ 1 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

160. ಶಿವಮೊಗ್ಗದಲ್ಲಿರುವ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕ್ರೀಡಾಂಗಣದ ನಿರ್ಮಾಣಕ್ಕಾಗಿ ನಾನು 2 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

161. ಶಿವಮೊಗ್ಗ ಮತ್ತು ಗುಲ್ಬರ್ಗಾ ನಗರಗಳಲ್ಲಿ ಕಾನೂನು ಕಾಲೇಜುಗಳನ್ನು ಆರಂಭಿಸಲಾಗುವುದು.

**ಗ್ರಾಮೀಣಾಭಿವೃದ್ಧಿ:**

162. ಅಗತ್ಯ ಕನಿಷ್ಠ ಮೂಲ ಸೇವೆಗಳಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವುದು ಅತೀ ಮುಖ್ಯವಾಗಿದೆ. ನಾವು ಸುರಕ್ಷಿತ ಕುಡಿಯುವ ನೀರನ್ನು ಕೊಳವೆ ನೀರು ಸರಬರಾಜು, ಕಿರು ನೀರು ಸರಬರಾಜು ಮತ್ತು ಕೈಪಂಪಿನ ಕೊಳವೆಬಾವಿಗಳ ಮೂಲಕ ಒದಗಿಸುತ್ತಿದ್ದೇವೆ. 2006-07ನೇ ಸಾಲಿನಲ್ಲಿ ಭಾರತ ಸರ್ಕಾರವು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗಾಗಿ 210 ಕೋಟಿ ರೂ.ಗಳನ್ನು ಒದಗಿಸಿದೆ. 2007-08ನೇ ಸಾಲಿನಲ್ಲಿ ನಾನು ಕುಡಿಯುವ ನೀರಿನ ಯೋಜನೆಗಳಿಗಾಗಿ 420 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಈ ಯೋಜನೆಗಳಿಗೆ ಅಗತ್ಯವಾದ ರಾಜ್ಯದ ಪಾಲಿನ ಹಣವನ್ನು ಒದಗಿಸಲಾಗುವುದು.

163. **'ಸುವರ್ಣ ಗ್ರಾಮೋದಯ'** ಯೋಜನೆಯ ಪ್ರಥಮ ಹಂತದ ಗ್ರಾಮಗಳ ಆಯ್ಕೆ ಪೂರ್ಣಗೊಂಡಿದೆ. 2007-08ನೇ ಸಾಲಿನಲ್ಲಿ ಈ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು 350 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ.

164. 'ಜಲನಿರ್ಮಲ ಯೋಜನೆ' ಅನುಷ್ಠಾನಕ್ಕೆ ನಾನು 2007-08ನೇ ಸಾಲಿನಲ್ಲಿ 311 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

**ಸಾರಿಗೆ:**

165. ಕೈಗೆಟಕುವ ದರಗಳಲ್ಲಿ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ಒದಗಿಸುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. 2007-08ನೇ ಸಾಲಿನಲ್ಲಿ ಸುಮಾರು 11.3 ಲಕ್ಷ ವಿದ್ಯಾರ್ಥಿಗಳು ರಿಯಾಯಿತಿ ದರದ ಪಾಸ್‌ನ ಸೌಲಭ್ಯವನ್ನು ಪಡೆಯುವ ನಿರೀಕ್ಷೆಯಿದೆ. ಈ ವೆಚ್ಚದ ಶೇ.25 ರಷ್ಟನ್ನು ಸಾರಿಗೆ ನಿಗಮಗಳು, ಮತ್ತು ಶೇ.25 ರಷ್ಟನ್ನು ವಿದ್ಯಾರ್ಥಿಗಳು ಭರಿಸುತ್ತಾರೆ. ಉಳಿಕೆ ಶೇ.50 ಸಹಾಯಧನವನ್ನು ಸರ್ಕಾರವು ಭರಿಸಲಿದ್ದು, ಈ ಉದ್ದೇಶಕ್ಕಾಗಿ ನಾನು 130 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

166. ಎಲ್ಲಾ ಜಿಲ್ಲೆಗಳಲ್ಲಿ ವಾಹನ ಪರೀಕ್ಷಾ ಟ್ರಾಕ್‌ಗಳನ್ನು ಸ್ಥಾಪಿಸುವ ಕಾರ್ಯಕ್ರಮಕ್ಕೆ 2006-07ರಲ್ಲಿ ಚಾಲನೆ ನೀಡಲಾಗಿತ್ತು. ಈ ಚಟುವಟಿಕೆಯನ್ನು ಮುಂದುವರಿಸಲು 2007-08ನೇ ಸಾಲಿನಲ್ಲಿ ನಾನು 5 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

167. ಸಾರಿಗೆ ಇಲಾಖೆಯ ಆಧುನೀಕರಣಕ್ಕಾಗಿ ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಿದ್ದೇನೆ.

168. ಪ್ರಾಂತೀಯ ಸಾರಿಗೆ ಅಧಿಕಾರಿಗಳ ಕಛೇರಿ ನಿರ್ಮಾಣಕ್ಕಾಗಿ ನಾನು 5 ಕೋಟಿ ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ.

169. ಟ್ರಕ್ ಟರ್ಮಿನಲ್‌ಗಳ ನಿರ್ಮಾಣಕ್ಕಾಗಿ ನಾನು 5 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

170. ಬೆಂಗಳೂರಿನಲ್ಲಿರುವ ಬಿಎಂಟಿಸಿ ಸಂಸ್ಥೆಯು ಉತ್ತಮ ಮೂಲಸೌಕರ್ಯಗಳನ್ನು ಹೊಂದಿರುತ್ತದೆ. ಆದರೆ ಎನ್‌ಇಕೆಆರ್‌ಟಿಸಿ ಮತ್ತು ಎನ್‌ಡಬ್ಲ್ಯೂಕೆಆರ್‌ಟಿಸಿ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳು ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಈ ಬಸ್ ನಿಲ್ದಾಣಗಳ ಮೂಲಸೌಕರ್ಯ ಸುಧಾರಿಸಲು ನಾನು ಪ್ರಾಂತೀಯ ಅಸಮತೋಲನೆ ನಿವಾರಿಸಲು ಮೀಸಲಿಟ್ಟಿರುವ ವಿಶೇಷ ಅಭಿವೃದ್ಧಿ ಯೋಜನೆಯ ನಿಧಿಯಿಂದ 100 ಕೋಟಿ ರೂ.ಗಳನ್ನು ಒದಗಿಸಲಿದ್ದೇನೆ.

**ಕಾರ್ಮಿಕ, ಉದ್ಯೋಗ ಮತ್ತು ತರಬೇತಿ:**

171. ಕೇರಳ ಸರ್ಕಾರದ ಮಾದರಿಯಲ್ಲಿ ನಮ್ಮ ಸರ್ಕಾರವೂ ಸಹ ದರ್ಜಿಗಳು, ಕುಂಬಾರರು, ಕಮ್ಮಾರರು, ಮಡಿವಾಳರು ಇತ್ಯಾದಿ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ಮಂಡಳಿಯನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ನಾನು ಆರಂಭಿಕವಾಗಿ 3 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

172. ಕಾರ್ಮಿಕ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ ಒದಗಿಸಲು ಕರ್ನಾಟಕ ರಾಜ್ಯ ಕಾರ್ಮಿಕರ ಅಧ್ಯಯನ ಸಂಸ್ಥೆಯನ್ನು ರಾಷ್ಟ್ರೀಯ ಕಾನೂನು ಶಾಲೆ ಸಹಯೋಗದಲ್ಲಿ ಸ್ಥಾಪಿಸಲಾಗುವುದು.

173. ಪ್ರಸ್ತುತ ರಾಜ್ಯದಲ್ಲಿ 636 ಖಾಸಗಿ ಐಟಿಐ ಗಳಿರುತ್ತವೆ. ಇದರಲ್ಲಿ 124 ಐಟಿಐ ಗಳು ಅನುದಾನವನ್ನು ಪಡೆಯುತ್ತಿವೆ. ಗುಣಮಟ್ಟದ ವೃತ್ತಿಶಿಕ್ಷಣ ತರಬೇತಿಯನ್ನು ಉತ್ತೇಜಿಸಲು ನಾನು **'ವಿದ್ಯಾರ್ಥಿ ಕೇಂದ್ರಿಕೃತ ಸಹಾಯಾನುದಾನ'** ನೂತನ ನೀತಿಯನ್ನು ಈವರೆಗೆ ಅನುದಾನ ಪಡೆಯದಿರುವ ಐಟಿಐಗಳಿಗಾಗಿ ಜಾರಿಗೊಳಿಸುತ್ತಿದ್ದೇನೆ. ಈ ಯೋಜನೆಯ ವಿವರವಾದ ಮಾರ್ಗಸೂತ್ರಗಳನ್ನು ಶೀಘ್ರದಲ್ಲೇ ಹೊರಡಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ನಾನು 10 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

174. ಹೊರದೇಶಗಳಲ್ಲಿ ಉದ್ಯೋಗಕ್ಕೆ ತೆರಳುವ ಕುಶಲ ಕೆಲಸಗಾರರಿಗೆ ವಿದೇಶಕ್ಕೆ ತೆರಳುವ ಮುನ್ನ ಸೂಕ್ತ ತರಬೇತಿ ನೀಡಲು ಒಂದು ತರಬೇತಿ ಯೋಜನೆ ರೂಪಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ರಾಜ್ಯದ ವ್ಯಕ್ತಿಗಳ ವಿವರ ಮತ್ತು ಅವರ ಕಲ್ಯಾಣವನ್ನು ನೋಡಿಕೊಳ್ಳಲು ಸಂಸ್ಥೆಯೊಂದನ್ನು ಸ್ಥಾಪಿಸಲಾಗುವುದು. ಇದು ಕೇಂದ್ರ ಸರ್ಕಾರದ ನೆರವಿನ ಯೋಜನೆಯಾಗಿದ್ದು ರಾಜ್ಯದ ಪಾಲು ಶೇ.25 ರಷ್ಟಿರುತ್ತದೆ.

175. ಅಸಂಘಟಿತ ವಲಯದ ಕಾರ್ಮಿಕರ ಕೌಶಲ್ಯ ವೃದ್ಧಿಸುವ ಸಲುವಾಗಿ ನಾನು 1 ಕೋಟಿ ರೂಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

176. ಅತೀ ಹೆಚ್ಚು ಹಿಂದುಳಿದ 39 ತಾಲ್ಲೂಕುಗಳ ಪೈಕಿ ಈಗಾಗಲೇ 15 ತಾಲ್ಲೂಕುಗಳಲ್ಲಿ ಸರ್ಕಾರಿ ಐಟಿಐಗಳು ಇರುತ್ತವೆ. ಉಳಿದ ತಾಲ್ಲೂಕುಗಳಲ್ಲಿ ಐಟಿಐಗಳನ್ನು ಸ್ಥಾಪಿಸಲು ನಾನು ವಿಶೇಷ ಅಭಿವೃದ್ಧಿ ಯೋಜನೆಯಡಿ ಹಣವನ್ನು ನೀಡಲು ಉದ್ದೇಶಿಸಿದ್ದೇನೆ. ಇದರ ಜೊತೆಗೆ ಹಲವಾರು ಮಹಿಳೆಯರು ವೃತ್ತಿ ಶಿಕ್ಷಣ ತರಬೇತಿಯನ್ನು ಬಯಸುತ್ತಿದ್ದು ಇವರಿಗಾಗಿ 2007-08ನೇ ಸಾಲಿನಲ್ಲಿ ಎಂಟು ನೂತನ ಸರ್ಕಾರಿ ಮಹಿಳಾ ಐಟಿಐಗಳನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

177. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಹಿತಾಸಕ್ತಿ ರಕ್ಷಿಸಲು ನಾನು ಮಹಿಳಾ ಹಕ್ಕು ತರಬೇತಿ ಮತ್ತು ಸುರಕ್ಷಾ ಉಸ್ತುವಾರಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದೇನೆ.

**ಲೋಕೋಪಯೋಗಿ:**

178. ನಮ್ಮ ರಾಜ್ಯದಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿ ಹೊಂದಿರುವ ಜಲಮಾರ್ಗ ಮತ್ತು ವಾಯುಮಾರ್ಗ ವ್ಯವಸ್ಥೆ ಇಲ್ಲದೇ ಇರುವುದರಿಂದ ಭೂಮಾರ್ಗದ ರಸ್ತೆಗಳೇ ನಮ್ಮ ರಾಜ್ಯದ ಜೀವನಾಡಿಗಳಾಗಿವೆ. ಅತ್ಯುತ್ತಮವಾಗಿ ನಿರ್ಮಿಸಿರುವ ಮತ್ತು ಉತ್ತಮವಾಗಿ ನಿರ್ವಹಿಸಿರುವ ರಸ್ತೆಗಳು, ಆರ್ಥಿಕ ಚಟುವಟಿಕೆಯನ್ನು ಉತ್ತೇಜಿಸುತ್ತವೆ. ಸಮಾನ ಆರ್ಥಿಕ ಬೆಳವಣಿಗೆಗೆ ದಾರಿ ಮಾಡಿಕೊಡುತ್ತವೆ. ನಮ್ಮ ಸಾರ್ವಜನಿಕ ಆಸ್ತಿಗಳನ್ನು ಕಾಪಾಡಿಕೊಂಡು ಅವುಗಳಿಂದ ಗರಿಷ್ಟ ಪ್ರತಿಫಲ ಪಡೆಯಲು ನಮ್ಮ ರಸ್ತೆಗಳನ್ನು ಉತ್ತಮ ಸ್ಥಿತಿಯಲ್ಲಿಟ್ಟುಕೊಳ್ಳುವುದು ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನಾನು ಜಿಲ್ಲಾ ಪ್ರಮುಖ ರಸ್ತೆಗಳ ಉತ್ತಮ ನಿರ್ವಹಣೆಗಾಗಿ 2006-07ನೇ ಸಾಲಿನಲ್ಲಿ ಮೀಸಲಿಟ್ಟಿದ್ದ 132.71 ಕೋಟಿ ರೂ.ಗಳ ಹಂಚಿಕೆಯನ್ನು 2007-08ನೇ ಸಾಲಿನಲ್ಲಿ 300 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ. ಪ್ರಮುಖ ಜಿಲ್ಲಾ ರಸ್ತೆಗಳ ನಿರ್ಮಾಣಕ್ಕಾಗಿ ನಾನು 2007-08ನೇ ಸಾಲಿನಲ್ಲಿ 111.8 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದು, ಇದು 2006-07ನೇ ಸಾಲಿನ 81.16 ಕೋಟಿ ರೂ.ಗಳಿಗಿಂತ ಹೆಚ್ಚಾಗಿರುತ್ತದೆ.

179. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ (ಕೆಆರ್‌ಡಿಸಿಎಲ್) ಮೂಲಕ ರಾಜ್ಯದ ಹೆದ್ದಾರಿಗಳನ್ನು ಮುಂದಿನ ಮೂರು ವರ್ಷಗಳಲ್ಲಿ 450 ಕೋಟಿ ರೂ.ಗಳ ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯು 2007-08 ರಲ್ಲಿ ಪೂರ್ಣಗೊಳ್ಳಲಿದ್ದು, ಕಾಮಗಾರಿಗಳ

ಬಾಕಿ ಹಣ ಪಾವತಿಗಾಗಿ ನಾನು 108 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಈ ಯೋಜನೆಯ ದಕ್ಷತೆಯನ್ನು ಆಧರಿಸಿ ಮುಂದಿನ ದಿನಗಳಲ್ಲಿ ರಾಜ್ಯ ಹೆದ್ದಾರಿಯ ನಿರ್ವಹಣೆ ಮತ್ತು ಮೇಲ್ದರ್ಜೆ ಕಾಮಗಾರಿಗಳ ಬಗ್ಗೆ ಮುಂದಿನ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೇವೆ.

180. ಈ ಹಿಂದಿನ ವರ್ಷಗಳಲ್ಲಿ ಸಾಕಷ್ಟು ದೂರದ ಪ್ರಮುಖ ಜಿಲ್ಲಾ ರಸ್ತೆಗಳನ್ನು ರಾಜ್ಯ ಹೆದ್ದಾರಿಯೆಂದು ಘೋಷಿಸಲಾಗಿದೆ. ಇದೀಗ ಈ ರಸ್ತೆಗಳನ್ನು ರಾಜ್ಯ ಹೆದ್ದಾರಿಯ ಮಟ್ಟಕ್ಕೆ ತರಲು ರಸ್ತೆಗಳನ್ನು ಅಗಲೀಕರಿಸಿ ಮೇಲ್ದರ್ಜೆಗೇರಿಸುವುದು ಅತಿ ಮುಖ್ಯವಾಗಿದೆ. ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆಯಡಿಯಲ್ಲಿ ರಾಜ್ಯ ಹೆದ್ದಾರಿಗಳ ಗುಣಮಟ್ಟ ಸುಧಾರಣೆಗೆ ಸಾಕಷ್ಟು ಶ್ರಮಿಸಲಾಗಿದೆ. ಈ ಯೋಜನೆಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುವಾಗುವಂತೆ ನಾನು 2007-08ರಲ್ಲಿ 251 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ವಿದೇಶಿ ನೆರವಿನ ಮೂಲಕ ಕರ್ನಾಟಕ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆ-2ನ್ನು ಕೈಗೆತ್ತಿಕೊಳ್ಳಲು ರಾಜ್ಯವು ಯೋಚಿಸುತ್ತಿದೆ. ಈ ಯೋಜನೆಯನ್ನು 2007-08 ರಲ್ಲಿ ಕಾರ್ಯಾಚರಣೆಗೊಳಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು. ಯೋಜನೆ ಮಂಜೂರಾದ ನಂತರ ಆಯವ್ಯಯ ಬೆಂಬಲವನ್ನು ನೀಡಲಾಗುವುದು.

181. ಕೆಆರ್‌ಡಿಸಿಎಲ್ ಸಂಸ್ಥೆಯು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯದ ಹೆದ್ದಾರಿಗಳ ಮೇಲ್ದರ್ಜೆ; ಸೇತುವೆ ಮತ್ತು ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತಿದೆ. ಈ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದರಿಂದ ರಾಜ್ಯದ ಆರ್ಥಿಕತೆಗೆ ಉತ್ತೇಜನ ದೊರೆಯಲಿದೆ. ಈ ಉದ್ದೇಶದಿಂದ ನಾನು ಕೆಆರ್‌ಡಿಸಿಎಲ್‌ನ ಬಂಡವಾಳ

ಕಾಮಗಾರಿಗಳಿಗಾಗಿ ಹಂಚಿಕೆಯನ್ನು 2006-07ರಲ್ಲಿನ 200 ಕೋಟಿ ರೂ.ಗಳಿಂದ 2007-08ರಲ್ಲಿ 300 ಕೋಟಿ ರೂ.ಗಳಿಗೆ ಹೆಚ್ಚಿಸುತ್ತಿದ್ದೇನೆ.

182. ಕಳೆದ ವರ್ಷ ನಾವು ಬೆಂಗಳೂರು ನಗರದ ಸುತ್ತಮುತ್ತಲಿನ ರಸ್ತೆ ಸಂಚಾರವನ್ನು ಸುಗಮಗೊಳಿಸಲು ಮೂರು ವರ್ಷಗಳ ಕಾಲಮಿತಿಯನ್ನಿಟ್ಟುಕೊಂಡು 600 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಂಡಿದ್ದೆವು. ಈ ಯೋಜನೆಗಾಗಿ 2006-07ನೇ ಸಾಲಿನಲ್ಲಿ 200 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಈ ಯೋಜನೆಯನ್ನು ಮುಂದುವರೆಸಲು 2007-08ನೇ ಸಾಲಿನಲ್ಲಿ ಕೂಡ ನಾನು 200 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

183. ಮೇಲೆ ಹೇಳಿದ ಎಲ್ಲಾ ರಸ್ತೆ ಕಾಮಗಾರಿಗಳ ಜೊತೆಗೆ, ಗ್ರಾಮೀಣ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಧಿಯಿಂದ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಸಹ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು. ನಾನು ಈ ಕಾಮಗಾರಿಗಳಿಗಾಗಿ 2006-07ರಲ್ಲಿ ನಿಗದಿಪಡಿಸಿದ್ದ 135 ಕೋಟಿ ರೂ.ಗಳ ಹಂಚಿಕೆಯನ್ನು ಮೀರಿ ಹೆಚ್ಚುವರಿಯಾಗಿ 150 ಕೋಟಿ ರೂ.ಗಳನ್ನು ಒದಗಿಸಿದ್ದೇನೆ. ಈಗ 2007-08ನೇ ಸಾಲಿನಲ್ಲಿ ಈ ಕಾಮಗಾರಿಗಳಿಗಾಗಿ 135 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

184. ನಾನು ಕಳೆದ ಆಯವ್ಯಯ ಭಾಷಣದಲ್ಲಿ ಹಾಸನ ನಗರದ ವರ್ತುಲ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಅಗತ್ಯದ ಬಗ್ಗೆ ಹೇಳಿದ್ದೆ. ಈ ಸಂಬಂಧ ಪ್ರಾಥಮಿಕ ಅಧ್ಯಯನ ನಡೆಸಿದ್ದು, 2007-08ನೇ ಸಾಲಿನಲ್ಲಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ನಾನು 50 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

185. ದಕ್ಷ ಹಾಗೂ ಪರಿಣಾಮಕಾರಿ ಸಾರ್ವಜನಿಕ ಸೇವೆಯನ್ನು ಒದಗಿಸಲು ಉತ್ತಮ ಸಾರ್ವಜನಿಕ ಕಟ್ಟಡಗಳ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಕಟ್ಟಡಗಳ ನಿರ್ಮಾಣದ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡಲು ನಾನು 2006-07ನೇ ಸಾಲಿನಲ್ಲಿದ್ದ 101 ಕೋಟಿ ರೂ.ಗಳ ಅನುದಾನವನ್ನು 2007-08ರಲ್ಲಿ 190 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ.

186. ಈ ಎಲ್ಲಾ ಕಾಮಗಾರಿಗಳ ಜೊತೆಗೆ 12ನೇ ಹಣಕಾಸು ಆಯೋಗದ ಅನುದಾನದ ಅಡಿಯಲ್ಲಿ ರಸ್ತೆ ಮತ್ತು ಕಟ್ಟಡ ನಿರ್ವಹಣೆಯನ್ನು ಕೈಗೆತ್ತಿಕೊಳ್ಳಲು 2007-08ರಲ್ಲಿ ರಸ್ತೆಗಳಿಗಾಗಿ 146.15 ಕೋಟಿ ಮತ್ತು ಕಟ್ಟಡ ನಿರ್ವಹಣೆಗೆ 13.20 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

187. ಮೇಲೆ ಹೇಳಿದ ಹಂಚಿಕೆಗಳ ಜೊತೆಗೆ ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ವಲಯಗಳಲ್ಲಿನ ಕಟ್ಟಡ ನಿರ್ಮಾಣಗಳಿಗೆ ಹಣವನ್ನು ಒದಗಿಸಲಾಗಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಲು ಬಯಸುತ್ತೇನೆ.

188. 2007-08ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ ಒಟ್ಟು 2253 ಕೋಟಿ ರೂ.ಗಳು ಹಂಚಿಕೆಯಾಗಿರುತ್ತದೆ.

**ವಾರ್ತೆ:**

189. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಅಭಿವೃದ್ಧಿಗೆ ಅಗತ್ಯವಾದ ಮಾಹಿತಿಯನ್ನು ಬಿತ್ತರಿಸಲು ಸಮುದಾಯ ರೇಡಿಯೋ ಕೇಂದ್ರಗಳ ಸ್ಥಾಪನೆಗೆ ಉತ್ತೇಜನ ನೀಡಲು ಸರ್ಕಾರವು ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಲು ಮುಂದೆ ಬರುವ ಸ್ವಯಂ ಸೇವಾ ಸಂಸ್ಥೆಗಳು,

ಶಿಕ್ಷಣ ಸಂಸ್ಥೆಗಳಿಗೆ ಸಹಾಯಧನ ನೀಡಲು **'ನಮ್ಮ ಬಾನುಲಿ'** ಎನ್ನುವ ನೂತನ ಯೋಜನೆಯನ್ನು ಆರಂಭಿಸಲಾಗಿದೆ. 2007-08ನೇ ಸಾಲಿನಲ್ಲಿ ರಾಜ್ಯದ ನಾಲ್ಕು ಕಂದಾಯ ವಲಯಗಳಲ್ಲಿ ಒಟ್ಟು 12 ಸಮುದಾಯ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಲು ನಾನು 1.80 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇನೆ.

190. ನಮ್ಮ ಸರ್ಕಾರವು ಹಿರಿಯ ಪತ್ರಕರ್ತರ ಭದ್ರತೆಗಾಗಿ ನಿಧಿಯೊಂದನ್ನು ಸ್ಥಾಪಿಸಲು ಉದ್ದೇಶಿಸಿದೆ. ಇದಕ್ಕಾಗಿ ನಾನು 50 ಲಕ್ಷ ರೂ.ಗಳನ್ನು 2007-08ನೇ ಸಾಲಿನಲ್ಲಿ ಮೀಸಲಿಡುತ್ತಿದ್ದೇನೆ.

191. ತ್ವರಿತವಾಗಿ ಬದಲಾಗುತ್ತಿರುವ ಸಮೂಹ ಮಾಧ್ಯಮಗಳ ಸ್ವರೂಪಕ್ಕೆ ಅನುಗುಣವಾಗಿ ಸರ್ಕಾರದ ಜಾಹೀರಾತು ನೀತಿ ಕೂಡ ಬದಲಾಗಬೇಕಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಪತ್ರಿಕೆಗಳು ಅದರಲ್ಲೂ ವಿಶೇಷವಾಗಿ ಜಿಲ್ಲಾ ಮಟ್ಟದ ಸಣ್ಣ ಪತ್ರಿಕೆಗಳ ಹಿತ ಕಾಪಾಡುವಂತಹ **'ನೂತನ ಜಾಹೀರಾತು ನೀತಿ'**ಯನ್ನು ರೂಪಿಸಲು ನಾನು ಉದ್ದೇಶಿಸಿದ್ದೇನೆ.

192. ಕನ್ನಡ ಚಲನ ಚಿತ್ರೋದ್ಯಮಕ್ಕೆ ಪ್ರವೇಶಿಸುವ ಹೊಸ ಪ್ರತಿಭೆಗಳಿಗೆ, ಕನ್ನಡದ ಕಥೆ, ಕಾದಂಬರಿ ಆಧಾರಿತ ಕನ್ನಡ ಚಲನ ಚಿತ್ರಗಳಿಗೆ, ಹೊಸ ಅಲೆಯ ಚಿತ್ರಗಳಿಗೆ ಹಾಗೂ ಆಧುನಿಕ ತಂತ್ರಜ್ಞಾನವಾದ ಡಿಜಿಟಲ್ ಚಲನ ಚಿತ್ರಗಳಿಗೆ ಪ್ರೋತ್ಸಾಹ ನೀಡಲು ಅನುಕೂಲವಾಗುವಂತೆ **'ನೂತನ ಕನ್ನಡ ಚಲನ ಚಿತ್ರ ನೀತಿ'**ಯನ್ನು ರೂಪಿಸಲು ನಾನು ಉದ್ದೇಶಿಸಿದ್ದೇನೆ.

193. ಟೆಲಿವಿಷನ್ ಮಾಧ್ಯಮವು ಸಮಾಜದ ಮೇಲೆ ಗಾಢ ಪ್ರಭಾವವನ್ನು ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಕಿರುತೆರೆಯಲ್ಲಿ ಪ್ರಸಾರವಾಗುವ ಉತ್ತಮ ಗುಣಮಟ್ಟದ ಕಾರ್ಯಕ್ರಮಗಳಿಗೆ ಹಾಗೂ

ಪ್ರತಿಭಾವಂತ ಕಲಾವಿದರಿಗೆ, ತಂತ್ರಜ್ಞರಿಗೆ ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ. 2007-08ನೇ ಸಾಲಿನಿಂದಲೇ ಈ ಪ್ರಶಸ್ತಿಗಳನ್ನು ನೀಡಲಾಗುವುದು.

**ಪ್ರವಾಸೋದ್ಯಮ:**

194. ಕರ್ನಾಟಕ ಪ್ರವಾಸೋದ್ಯಮವು ವೇಗದ ಹಳಿಯ ಮೇಲಿದ್ದು, ಪ್ರವಾಸೋದ್ಯಮ ಚಟುವಟಿಕೆಗಳು ಚುರುಕುಗೊಂಡಿವೆ. 2005-06ನೇ ಸಾಲಿಗೆ ಹೋಲಿಸಿದರೆ ಕರ್ನಾಟಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆಯಲ್ಲಿ ಶೇ.40ರಷ್ಟು ಏರಿಕೆಯಾಗಿದೆ.

195. ಪ್ರವಾಸೋದ್ಯಮವನ್ನು ಉತ್ತೇಜಿಸಲು ನಾವು ನಾಲ್ಕು ಮುಖ್ಯ ಪ್ರವಾಸಿ ಮಾರ್ಗಗಳನ್ನು ಗುರುತಿಸಿದ್ದೇವೆ.

- ಬೇಲೂರು-ಹಳೆಬೀಡು-ಶ್ರವಣಬೆಳಗೊಳ-ಮಡಿಕೇರಿ-ಮೈಸೂರು - ಶ್ರೀರಂಗಪಟ್ಟಣ-ಸೋಮನಾಥಪುರ-ಶಿಂಷಾ.
- ಶಿವಮೊಗ್ಗ-ತೀರ್ಥಹಳ್ಳಿ-ಆಗುಂಬೆ-ಜೋಗ್-ಮಂಗಳೂರು.
- ಹಂಪಿ-ಬಾದಾಮಿ-ಐಹೊಳೆ-ಪಟ್ಟದಕಲ್ಲು-ಕೂಡಲಸಂಗಮ-ಬಿಜಾಪುರ.
- ಮಂಗಳೂರು-ಉಡುಪಿ-ಧರ್ಮಸ್ಥಳ-ಕೊಲ್ಲೂರು-ಮರವಂತೆ-ಮುರುಡೇಶ್ವರ- ಗೋಕರ್ಣ.

196. ಪ್ರತೀ ಸರ್ಕ್ಯೂಟ್‌ನಲ್ಲಿ ಎರಡು ಸ್ಥಳ ಆಯ್ಕೆ ಮಾಡಿ ಅಲ್ಲಿ ಪ್ರವಾಸಿಗರಿಗೆ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಮೂಲಸೌಕರ್ಯ ಗಳನ್ನು ಕಲ್ಪಿಸಲು ನಮ್ಮ ಸರ್ಕಾರವು ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ಖಾಸಗಿ-ಸಾರ್ವಜನಿಕ ಪ್ರವಾಸಿ ಚಟುವಟಿಕೆಗಳಿಗೆ ಚಾಲನೆ ನೀಡಲು

ಪಟ್ಟದಕಲ್ಲು, ಬೇಲೂರು, ಮರವಂತೆ, ಕೊಡಚಾದ್ರಿ, ತಲಕಾಡು ಇಲ್ಲಿ ಈಗಾಗಲೇ ಸರ್ಕಾರಿ ಜಾಗವನ್ನು ಗುರುತಿಸಲಾಗಿದೆ. ಹಂಪಿ, ಬಿಜಾಪುರ ಮತ್ತು ಹೊರನಾಡಿನಲ್ಲಿ ಸೂಕ್ತ ಸ್ಥಳಕ್ಕಾಗಿ ಪರಿಶೀಲನೆ ನಡೆದಿದೆ. ಈ ಖಾಸಗಿ-ಸಾರ್ವಜನಿಕ ಸಹಭಾಗಿತ್ವದ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಕೊರತೆ ಬೀಳಬಹುದಾದ ನಿಧಿಯನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು. ಈ ಯೋಜನೆಗಳಿಗೆ ಕೆಎಸ್‌ಐಐಡಿಸಿ ನೋಡಲ್ ಏಜೆನ್ಸಿಯಾಗಿರುತ್ತದೆ. 2007-08ನೇ ಸಾಲಿನಲ್ಲಿ ನಾನು 50 ಕೋಟಿ ರೂ.ಗಳನ್ನು ಸಾಮರ್ಥ್ಯ ಕೊರತೆ ನಿಧಿಗಾಗಿ ನೀಡಲು ಉದ್ದೇಶಿಸಿದ್ದೇನೆ.

197. ನಮ್ಮ ಸರ್ಕಾರವು ಅಕ್ವಾಮೆರೈನ್ ಪಾರ್ಕ್, ಗಾಲ್ಫ್ ಕ್ಲಬ್ ಹಾಗೂ ಮಂಗಳೂರು ಸಮೀಪದಲ್ಲಿರುವ ತಣ್ಣೀರು ಬಾವಿ ಮತ್ತು ಸುಲ್ತಾನ್‌ಬತ್ತೇರಿ ನಡುವೆ ರೋಪ್‌ವೇಗಳನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಿದೆ. ಈ ಕಾರ್ಯವನ್ನು ಕೆಎಸ್‌ಐಐಡಿಸಿಗೆ ವಹಿಸಲಾಗುವುದು. ಯೋಜನೆ ಅನುಷ್ಠಾನಗೊಳಿಸುವಲ್ಲಿ ಕೊರತೆ ಬೀಳಬಹುದಾದ ಹಣ ಭರಿಸಲು 2007-08ನೇ ಸಾಲಿನಲ್ಲಿ 20 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ. ನಂದಿಬೆಟ್ಟ ಮತ್ತು ಕೆಮ್ಮಣ್ಣುಗುಂಡಿಗಳಲ್ಲಿರುವ ನಮ್ಮ ಪ್ರಮುಖ ಗಿರಿಧಾಮಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದೆ. ಈ ಉದ್ದೇಶಕ್ಕಾಗಿ ನಾನು 25 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ. ಖಾಸಗಿ ಹೂಡಿಕೆದಾರರನ್ನು ಗುರುತಿಸುವ ಕಾರ್ಯವನ್ನು ಕೆಎಸ್‌ಐಐಡಿಸಿಗೆ ವಹಿಸಲಾಗುವುದು. ಪ್ರವಾಸೋದ್ಯಮದ ಹೆಸರಿನಲ್ಲಿ ನಮ್ಮ ಪ್ರಶಾಂತ ಪರಿಸರವು ಕಲುಷಿತಗೊಳ್ಳದಂತೆ ನಾವು ಎಚ್ಚರ ವಹಿಸಬೇಕಾಗಿದೆ.

198. ಮಲೆಮಹಾದೇಶ್ವರ ಬೆಟ್ಟವು ಪ್ರಸಿದ್ಧ ಯಾತ್ರಾಸ್ಥಳ ಹಾಗೂ ಪ್ರವಾಸಿ ತಾಣವಾಗಿದೆ. ಇಲ್ಲಿ ಜಾನಪದ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದ್ದು ಇದಕ್ಕಾಗಿ ನಾನು 5 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದ್ದೇನೆ.

199. ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು 6 ಮಿನಿ ವಿಮಾನನಿಲ್ದಾಣಗಳು ಮತ್ತು 22 ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿ ಗೊಳಿಸಲಾಗುವುದು.

200. ಹಂಪಿ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಯುನೆಸ್ಕೋದ ಸಹಭಾಗಿತ್ವದೊಂದಿಗೆ ಸಿದ್ದಪಡಿಸಲಾಗಿದೆ. 2007-08ನೇ ಸಾಲಿನಲ್ಲಿ ಯುನೆಸ್ಕೋದ ಸಹಯೋಗದೊಂದಿಗೆ ಬೇಲೂರು ಮತ್ತು ಹಳೇಬೀಡಿನಲ್ಲಿ ಪುರಾತನ ಮನೆಗಳನ್ನು ಗುರುತಿಸಿ ಅವುಗಳನ್ನು ಬಾಟಿಕ್ ಹೋಟೆಲ್‌ಗಳಾಗಿ ಅಭಿವೃದ್ಧಿ ಪಡಿಸಲಾಗುವುದು.

201. **2007-08ನೇ ಸಾಲಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನಾನು ಒಟ್ಟು 148 ಕೋಟಿ ರೂ.ಗಳನ್ನು ಒದಗಿಸುತ್ತಿದ್ದು ಇದು ಕರ್ನಾಟಕದ ಪ್ರವಾಸೋದ್ಯಮಕ್ಕೆ ನವಚೈತನ್ಯವನ್ನು ತುಂಬಲಿದೆ.**

**ಯುವ ಜನಸೇವೆ:**

202. ಕ್ರೀಡಾ ಹಾಸ್ಟೆಲ್‌ನ ವಿದ್ಯಾರ್ಥಿಗಳ ಊಟ, ವಸತಿ ಮತ್ತು ಕ್ರೀಡಾ ಸಾಮಗ್ರಿಗಳ ಕಿಟ್‌ಗಳಿಗೆ ನಾನು 4.73 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ. ಇದಲ್ಲದೆ ಕರ್ನಾಟಕ ಕ್ರೀಡಾ ಪ್ರಾಧಿಕಾರಕ್ಕೆ 1.67 ಕೋಟಿ ರೂ.ಗಳನ್ನು ರಾಜ್ಯಮಟ್ಟದ ಒಲಂಪಿಕ್ ಕ್ರೀಡೆಗಳನ್ನು ನಡೆಸುವ ಉದ್ದೇಶಕ್ಕಾಗಿ ಒದಗಿಸಲಾಗುವುದು.

**ವಾಣಿಜ್ಯ ಮತ್ತು ಕೈಗಾರಿಕೆ:**

203. ಕೈಗಾರಿಕೆಗಳು ಪ್ರಾಥಮಿಕ ಮತ್ತು ಪೂರಕವಲಯಗಳ ನಡುವೆ ಪ್ರಮುಖ ಸಂಪರ್ಕವಾಗಿವೆ. ಚುರುಕಾದ ಕೈಗಾರಿಕಾ ಬೆಳವಣಿಗೆಯಾಗದ ಹೊರತು ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಬೆಳವಣಿಗೆ ಸಾಧಿಸುವುದು ಕಷ್ಟ. ಭಾರತ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನಾ ಇಲಾಖೆಯ ಮಾಹಿತಿಯ ಪ್ರಕಾರ ರಾಷ್ಟ್ರದಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವಲ್ಲಿ ಕರ್ನಾಟಕವು ಪ್ರಥಮ ಸ್ಥಾನದಲ್ಲಿದೆ ಎನ್ನುವ ವಿಷಯವನ್ನು ಈ ಗೌರವಾನ್ವಿತ ಸದನಕ್ಕೆ ತಿಳಿಸಲು ನನಗೆ ಹೆಮ್ಮೆಯಾಗುತ್ತಿದೆ. ನಮ್ಮ ಸರ್ಕಾರವು ರೂಪಿಸಿರುವ ಹೂಡಿಕೆದಾರರ ಸ್ನೇಹಮಯಿ ವಾತಾವರಣವೇ ಇದಕ್ಕೆ ಕಾರಣವಾಗಿದೆ. ಕಳೆದ ಆಯವ್ಯಯ ಭಾಷಣದಲ್ಲಿ ನಾನು ಪ್ರಸ್ಥಾಪಿಸಿದ್ದಂತೆ ನೂತನ ಕೈಗಾರಿಕಾ ನೀತಿ 2006-11 ಘೋಷಣೆ ಮಾಡಲಾಗಿದೆ. ಈ ನೂತನ ನೀತಿಯು ಹಳೇ ಮಾದರಿಯ ತೆರಿಗೆ ವಿನಾಯಿತಿ ಆಧಾರಿತ ಸೂತ್ರಗಳಿಂದ ದೂರ ಸರಿದು ಮೂಲ ಸೌಕರ್ಯಗಳ ಸುಧಾರಣೆ ಮತ್ತು ಕೌಶಲ್ಯ ವೃದ್ಧಿಯ ಮೂಲಕ ಉದ್ಯೋಗ ಸೃಜನೆ ಮಾಡುವುದಕ್ಕೆ ಒತ್ತು ನೀಡಿದೆ.

204. **ನೂತನ ಕೈಗಾರಿಕಾ** ನೀತಿಯಲ್ಲಿ ಹೇಳಿರುವಂತೆ ಮುಂದಿನ ಐದು ವರ್ಷಗಳಲ್ಲಿ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿಗೆ 500 ಕೋಟಿ ರೂ.ಗಳನ್ನು ವೆಚ್ಚಮಾಡಲು ರಾಜ್ಯವು ಬದ್ಧವಾಗಿದೆ. ಈ ನಿಟ್ಟಿನಲ್ಲಿ **2007-08ನೆ ಸಾಲಿನಲ್ಲಿ ನಾನು 100 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.**

205. ಕೃಷಿ ವಲಯ ಒಂದೇ ಗ್ರಾಮೀಣ ಪ್ರದೇಶಗಳಲ್ಲಿ ಬಡತನವನ್ನು ಕಡಿಮೆ ಮಾಡಲಾರದು. ಆದ್ದರಿಂದ ಇತರೇ ವಲಯಗಳಲ್ಲಿ ಗ್ರಾಮೀಣ ಪ್ರದೇಶದ ಯುವಜನರ ಕೌಶಲ್ಯವೃದ್ಧಿಸಲು ನಾವು ಪ್ರಯತ್ನಗಳನ್ನು

ಮಾಡಬೇಕು. ಈ ನಿಟ್ಟಿನಲ್ಲಿ ಕಳೆದ ವರ್ಷ ನಾವು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಿರುವ ಸುವರ್ಣ ಕಾಯಕ ಯೋಜನೆ ಪ್ರಶಂಸೆಗೆ ಒಳಗಾಗಿದ್ದು ಸಾವಿರಾರು ನಿರುದ್ಯೋಗಿ ಯುವಜನರಿಗೆ ಅನುಕೂಲ ಕಲ್ಪಿಸಿದೆ. ಈ ಕಾರ್ಯಕ್ರಮಕ್ಕೆ ನಾನು ಮತ್ತಷ್ಟು ಉತ್ತೇಜನ ನೀಡಲು ಬಯಸಿದ್ದು, ಮುಂದಿನ ವರ್ಷದಲ್ಲಿ ಕನಿಷ್ಟ ಒಂದು ಲಕ್ಷ ಯುವ ಜನರಿಗೆ ತರಬೇತಿ ನೀಡಲು ಉದ್ದೇಶಿಸಿದ್ದೇನೆ. **ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 60 ಕೋಟಿ ರೂ.ಗಳನ್ನು ಮೀಸಲಿಡಲಾಗುತ್ತಿದೆ.**

206. ನೂತನ ಕೈಗಾರಿಕಾ ನೀತಿಯಲ್ಲಿ ಘೋಷಿಸಿರುವಂತೆ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ **ಕೌಶಲ್ಯ ಅಭಿವೃದ್ಧಿ ಯೋಜನೆಯಡಿ** 2007-08ನೇ ಸಾಲಿನಲ್ಲಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು **ಈ ಯೋಜನೆಗೆ 30 ಕೋಟಿ ರೂ.ಗಳನ್ನು** ನಾನು ಹಂಚಿಕೆ ಮಾಡಲಿದ್ದೇನೆ.

207. ಈ ಹಿಂದಿನ ವರ್ಷಗಳಲ್ಲಿ **ಬಾಕಿ ಉಳಿದಿರುವ ಕೈಗಾರಿಕಾ ಸಹಾಯ ಧನದ** ಸಂಪೂರ್ಣ ಬಾಕಿಯನ್ನು 2007-08ನೇ ಸಾಲಿನಲ್ಲಿ ಪೂರ್ಣವಾಗಿ ಪಾವತಿಸಲಾಗುವುದು. **ಈ ಉದ್ದೇಶಕ್ಕಾಗಿ ನಾನು 75 ಕೋಟಿ ರೂ.**ಗಳನ್ನು ಮೀಸಲಿಡುತ್ತಿದ್ದೇನೆ.

208. ನಗರ ಸಂತೆಗಳು ಸ್ಥಳೀಯ ಕುಶಲಕರ್ಮಿಗಳ ಉತ್ಪನ್ನಗಳನ್ನು ಪ್ರದರ್ಶಿಸಲು ಪ್ರಮುಖ ಮೂಲಸೌಕರ್ಯಗಳಾಗಿವೆ. ಮಂಗಳೂರು ಮತ್ತು ಶಿವಮೊಗ್ಗ ನಗರಗಳಲ್ಲಿ ನಗರ ಸಂತೆಗಳನ್ನು ಆರಂಭಿಸಲಾಗುವುದು. **ಈ ಉದ್ದೇಶಕ್ಕಾಗಿ 6 ಕೋಟಿ ರೂ.ಗಳನ್ನು ನಾನು ಮೀಸಲಿಡುತ್ತಿದ್ದೇನೆ.** ಭಾರತ ಸರ್ಕಾರದ ನಗರ ಸಂತೆ ಯೋಜನೆಯಡಿ ಇದನ್ನು ಅನುಷ್ಠಾನಗೊಳಿಸಲಾಗುವುದು.

209. ಆಭರಣ ಹಾಗೂ ಮುತ್ತು, ರತ್ನಗಳ ವ್ಯವಹಾರದಲ್ಲಿ ತೊಡಗಿರುವ ಯುವಕರಿಗೆ ಸೂಕ್ತ ತರಬೇತಿ ನೀಡುವ ಸಂಸ್ಥೆಗಳು ರಾಜ್ಯದಲ್ಲಿ ಇರುವುದಿಲ್ಲ. ಈ ಕೊರತೆಯನ್ನು ನಿವಾರಿಸಲು ನಾನು ಆಭರಣ ತರಬೇತಿ ಸಂಸ್ಥೆಯನ್ನು ಬೆಂಗಳೂರು ಮತ್ತು ಕಾರವಾರಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದು **ಇದಕ್ಕಾಗಿ 2 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

**ಕೆಎಸ್‌ಎಫ್‌ಸಿ:**

210. ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಸಣ್ಣ ಪ್ರಮಾಣದ ಸಾಲ ಪಡೆದಿರುವ ಬಹಳಷ್ಟು ಜನರು ಈ ಹಿಂದಿನ ವರ್ಷಗಳಲ್ಲಿನ ಕೈಗಾರಿಕಾ ಹಿನ್ನಡೆಯಿಂದಾಗಿ ಸಾಲ ತೀರಿಸಲಾಗದೆ ತುಂಬಾ ತೊಂದರೆಯಲ್ಲಿರುವುದು ನನ್ನ ಗಮನಕ್ಕೆ ಬಂದಿದೆ. ಒಂದು ಅವಧಿಯ ತೀರುವಳಿ ಯೋಜನೆಯಡಿ ಈ ಸಾಲದ ಮೇಲಿನ ಬಡ್ಡಿಗೆ ವಿನಾಯಿತಿ ನೀಡುವ ಯೋಜನೆಯನ್ನು ಕೆಎಸ್‌ಎಫ್‌ಸಿ ಈಗಾಗಲೇ ಜಾರಿಗೊಳಿಸಿದೆ. ಈ ಸಾಲಗಾರರಿಗೆ ಮತ್ತಷ್ಟು ನೆರವು ಕಲ್ಪಿಸುವ ಉದ್ದೇಶದಿಂದ ನಾನು 10 ಲಕ್ಷ ರೂ.ಗಳಿಗಿಂತ ಕಡಿಮೆ ಇರುವ ಸಾಲದ ಮೇಲಿನ ಸರಳ ಬಡ್ಡಿಯನ್ನು ಮನ್ನಾ ಮಾಡಲು ಉದ್ದೇಶಿಸಿದ್ದೇನೆ. ಇದಕ್ಕಾಗಿ **ನಾನು 2007-08ನೇ ಸಾಲಿನಲ್ಲಿ 54 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

**ರೇಷ್ಮೆ, ಕೈಮಗ್ಗ ಮತ್ತು ಜವಳಿ:**

211. **ಕೇಂದ್ರ ನೆರವಿನ ಕ್ಯಾಟಲಿಟಿಕ್ ಅಭಿವೃದ್ಧಿ** ಯೋಜನೆಯಡಿ ನಮ್ಮ ರೇಷ್ಮೆ ಉತ್ಪಾದನೆ ಸಾಮರ್ಥ್ಯವನ್ನು ಸುಧಾರಿಸುವ **ಉದ್ದೇಶಕ್ಕಾಗಿ ನಾನು 24.40 ಕೋಟಿ** ರೂ.ಗಳನ್ನು ಒದಗಿಸಲಿದ್ದೇನೆ.

212. ಸುಧಾರಿತ ರೇಷ್ಮೆ ಸಾಕಾಣಿಕೆ ಪದ್ಧತಿಯನ್ನು ಅಳವಡಿಸಲು ನಾನು 3.40 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

213. ರೇಷ್ಮೆ ವರದಾನ ಯೋಜನೆಗಾಗಿ ನಾನು 2007-08ನೇ ಸಾಲಿನಲ್ಲಿ 3.00 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

214. ದೊಡ್ಡಬಳ್ಳಾಪುರದ ಬಳಿ ನಿರ್ಮಾಣವಾಗುತ್ತಿರುವ ಸಿದ್ಧಉಡುಪು ಪಾರ್ಕ್‌ನ ಅಭಿವೃದ್ಧಿಗಾಗಿ ರಾಜ್ಯದ ಪಾಲಿನ ಹಣ 4.70 ಕೋಟಿ ರೂ.ಗಳನ್ನು ನಾನು ಒದಗಿಸುತ್ತಿದ್ದೇನೆ.

215. **ಖಾದಿ ಮತ್ತು ಕೈಮಗ್ಗ ಜವಳಿಯನ್ನು ಉತ್ತೇಜಿಸಲು** ನಾನು ಖಾದಿ ವಸ್ತ್ರಕ್ಕೆ ವರ್ಷಪೂರ್ತಿ ಶೇಕಡಾ 5ರ ಸಹಾಯಧನವನ್ನು ಮತ್ತು ವಿಶೇಷ ಸಂದರ್ಭಗಳಲ್ಲಿ ಶೇಕಡಾ 10ರ ಸಹಾಯಧನವನ್ನು ನೀಡಲು ಉದ್ದೇಶಿಸಿದ್ದೇನೆ. ವಿದ್ಯುತ್ ಮಗ್ಗದ ಉತ್ಪನ್ನಗಳ ಜೊತೆ ಕೈಮಗ್ಗದ ಉತ್ಪನ್ನಗಳು ಸ್ಪರ್ಧಿಸಿ ಮಾರುಕಟ್ಟೆ ಮಾಡಲು ವಿಶೇಷ ನೆರವಿನ ಅಗತ್ಯವಿದೆ. ಇದಕ್ಕಾಗಿ ನಾನು 2007-08ನೇ ಸಾಲಿನಲ್ಲಿ 3 **ಕೋಟಿ** ರೂ.ಗಳ ನೆರವನ್ನು ಕೈಮಗ್ಗ ವಲಯಕ್ಕೆ ನೀಡಲಿದ್ದೇನೆ.

216. ಸುವರ್ಣ ಕರ್ನಾಟಕದ ಹಿನ್ನೆಲೆಯಲ್ಲಿ ನಮ್ಮ ಗೌರವಾನ್ವಿತ ರಾಷ್ಟ್ರಪತಿಗಳು ರಾಜ್ಯವಿಧಾನಮಂಡಲವನ್ನುದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ಸಿದ್ದ ಉಡುಪುಗಳ ವಲಯದ ಪ್ರಾಮುಖ್ಯತೆ ಮತ್ತು ಅದರ ಅಭಿವೃದ್ಧಿಯ ಉತ್ತೇಜನಕ್ಕೆ ಸಲಹೆ ನೀಡಿದ್ದರು. ನಮ್ಮ ಸರ್ಕಾರವು **'ಸಿದ್ಧ ಉಡುಪು** ನೀತಿ'ಯನ್ನು ಪ್ರಕಟಿಸಲಿದ್ದು, ಮುಂದಿನ ಐದು ವರ್ಷಗಳಲ್ಲಿ ಸಿದ್ದ ಉಡುಪುಗಳ ವಲಯದ ಅಭಿವೃದ್ಧಿಗೆ ಉತ್ತೇಜನ ನೀಡಲು 500 ಕೋಟಿ ರೂ.ಗಳನ್ನು ಒದಗಿಸಲಿದೆ. ಮುಂದಿನ ಐದು ವರ್ಷಗಳಲ್ಲಿ ಜವಳಿ ವಲಯದಲ್ಲಿ ಐದು ಲಕ್ಷ ಉದ್ಯೋಗಗಳನ್ನು ಸೃಜಿಸಲು ನಾನು ಉದ್ದೇಶಿಸಿದ್ದೇನೆ. ಗೌರವಾನ್ವಿತ ಜವಳಿ ಸಚಿವರ ಅಧ್ಯಕ್ಷತೆಯ ಸಮಿತಿಯು ಈ ಸಂಬಂಧ ಸೂಕ್ತ ವಿಧಿವಿಧಾನಗಳನ್ನು ಕೈಗೊಳ್ಳಲಿದೆ. ಈ ಉದ್ದೇಶಕ್ಕಾಗಿ ನಾನು 2007-08ನೇ ಸಾಲಿನಲ್ಲಿ 100 ಕೋಟಿ ರೂ.ಗಳನ್ನು ಹಂಚಿಕೆ

ಮಾಡಲಿದ್ದೇನೆ. ಇದರಲ್ಲಿ 50.00 ಕೋಟಿ ರೂ.ಗಳನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಿಶೇಷ ಅಭಿವೃದ್ಧಿ ಯೋಜನೆ ಆಧಾರಗಳ ಮೇಲೆ ಉಪಯೋಗಿಸಲಾಗುವುದು.

**ನೇಕಾರರ ಪ್ಯಾಕೇಜ್:**

217. ನೇಕಾರರ ವಿಶೇಷ ಪ್ಯಾಕೇಜ್‌ಗಾಗಿ ನಾನು 60 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದು, ಇದರ ಅಡಿಯಲ್ಲಿ ನೇಕಾರರಿಗೆ ಹಲವಾರು ರಿಯಾಯಿತಿಗಳು ದೊರೆಯಲಿವೆ.

- ವಿದ್ಯುತ್ ಮಗ್ಗಗಳಿಗೆ ವಿದ್ಯುತ್ ಸಹಾಯಧನ ನೀಡಲು 30 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಸಹಕಾರಿ ಸಂಘಗಳು ಮತ್ತು ಪಟ್ಟಣ ಸಹಕಾರಿ ಬ್ಯಾಂಕುಗಳ ಮೂಲಕ ಕೈಮಗ್ಗ ನೇಕಾರರು ಪಡೆದಿರುವ 25,000 ರೂ.ಗಳ ವರೆಗಿನ ಸಾಲಗಳನ್ನು ಮನ್ನಾ ಮಾಡಲಾಗುವುದು. 25,000 ರೂ.ಗಳವರೆಗೆ ಸಾಲಪಡೆದಿರುವ ನೇಕಾರರು ತಮ್ಮ ಸಾಲದ ಅಸಲನ್ನು ಮಾರ್ಚ್ 2007ಕ್ಕೆ ಮುನ್ನ ಪಾವತಿ ಮಾಡಿದರೆ ಅವರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು.
- ಕೈಮಗ್ಗದ ನೇಕಾರರಿಗೆ ಸಾಲ ನೀಡಿರುವ ಪಟ್ಟಣ ಸಹಕಾರಿ ಬ್ಯಾಂಕ್‌ಗಳಿಗೆ ಶೇ.4 ರಷ್ಟು ಬಡ್ಡಿ ಸಹಾಯಧನವನ್ನು ಪಾವತಿಸಲಾಗುವುದು.
- ಗದಗ್‌ನಲ್ಲಿರುವ ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆಗೆ ಮತ್ತು ಜಮಖಂಡಿಯಲ್ಲಿರುವ ಸುಧಾರಿತ ಕೈಮಗ್ಗ ತರಬೇತಿ ಕೇಂದ್ರಕ್ಕೆ ಅನುದಾನ ಒದಗಿಸಲಾಗುವುದು.
- ಬಳ್ಳಾರಿಯಲ್ಲಿ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲಾಗುವುದು.
- ಇಳಕಲ್‌ನಲ್ಲಿ ನೇಕಾರರ ಕಾಲೋನಿಯನ್ನು ಸ್ಥಾಪಿಸಲಾಗುವುದು.

**ವಸತಿ:**

218. ನಮ್ಮ ಸರ್ಕಾರವು ವಸತಿಗೆ ಅತಿ ಹೆಚ್ಚಿನ ಆದ್ಯತೆಯನ್ನು ನೀಡಿದೆ. ಅಪೂರ್ಣ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲು 2006-07ನೇ ಸಾಲಿನಲ್ಲಿ 370 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. 2007-08ನೇ ಸಾಲಿನಲ್ಲಿ 6 ಲಕ್ಷ ಮನೆಗಳ ನಿರ್ಮಾಣ ಕೈಗೆತ್ತಿಕೊಳ್ಳಲು 600 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

**ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ:**

219. ಜವಾಹರಲಾಲ್ ನೆಹರು ನಗರ ನವೀಕರಣ ಯೋಜನೆಯಡಿ ಬೆಂಗಳೂರು ನಗರದ ಕೊಳಗೇರಿಗಳನ್ನು 160 ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದೇ ರೀತಿ 40 ಕೋಟಿ ರೂ.ಗಳ ವೆಚ್ಚದಲ್ಲಿ ಮೈಸೂರು ನಗರದ ಕೊಳಗೇರಿಗಳನ್ನು ಅಭಿವೃದ್ಧಿಪಡಿಸಲಾಗುವುದು.

220. ಐ.ಹೆಚ್.ಎಸ್.ಡಿ.ಪಿ. ಯೋಜನೆಯು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲದೆ ಉಳಿದ ನಗರಗಳಲ್ಲಿನ ಕೊಳಗೇರಿ ನಿವಾಸಿಗಳಿಗೆ ವಸತಿ ಮತ್ತು ಮೂಲಸೌಕರ್ಯಗಳನ್ನು ಒದಗಿಸಲಿದೆ. 2007-08ನೇ ಸಾಲಿನಲ್ಲಿ ಈ ಯೋಜನೆಯನ್ನು 100 ಕೋಟಿ ರೂ.ಗಳಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾವಿಸುತ್ತೇವೆ. ಈ ಯೋಜನೆಗಾಗಿ 2007-08ನೇ ಸಾಲಿನಲ್ಲಿ ರಾಜ್ಯದ ಪಾಲಾಗಿ 20.80 ಕೋಟಿ ರೂ.ಗಳನ್ನು ಒದಗಿಸಲಾಗುವುದು.

**ನಗರಾಭಿವೃದ್ಧಿ:**

221. ನಮ್ಮ ಸರ್ಕಾರವು ತುಮಕೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು 54 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದೆ.

222. ಮಂಗಳೂರು ಮತ್ತು ಶಿವಮೊಗ್ಗ ನಗರಗಳ ರಸ್ತೆ ಅಭಿವೃದ್ಧಿಗಾಗಿ ನಾನು ತಲಾ 20 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

223. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಗಾಗಿ ರೂಪಿಸಿರುವ ನಗರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಈ ನಗರಗಳ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಮಳೆ ನೀರಿನ ಚರಂಡಿ, ಮತ್ತು ರಸ್ತೆ ನಿರ್ಮಾಣಕ್ಕೆ 2007-08ನೇ ಸಾಲಿನಲ್ಲಿ 369 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

224. ಉತ್ತರ ಕರ್ನಾಟಕದ ಪ್ರಾಂತೀಯ ಅಸಮತೋಲನೆಯನ್ನು ನಿವಾರಿಸುವ ಪ್ರಯತ್ನದಲ್ಲಿ ರೂಪಿತವಾಗಿರುವ ಉತ್ತರ ಕರ್ನಾಟಕ ನಗರ ಮೂಲ ಸೌಕರ್ಯಗಳ ಅಭಿವೃದ್ಧಿ ಯೋಜನೆಗಾಗಿ 2007-08ನೇ ಸಾಲಿನಲ್ಲಿ 220 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

225. ಕರ್ನಾಟಕ ಕರಾವಳಿ ನಿರ್ವಹಣೆ ಮತ್ತು ನಗರಾಭಿವೃದ್ಧಿ ಯೋಜನೆಗಾಗಿ 167.04 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ. ಇದು ಕರಾವಳಿ ತೀರದ 10 ಪಟ್ಟಣಗಳ ಸಮಗ್ರ ಮೂಲ ಸೌಕರ್ಯ ಅಭಿವೃದ್ಧಿಗಾಗಿ ವೆಚ್ಚವಾಗಲಿದೆ.

## ನಗರ ನೀರು ಸರಬರಾಜು:

226. ಕರ್ನಾಟಕದಲ್ಲಿ ಶೀಘ್ರ ಗತಿಯಲ್ಲಿ ನಗರೀಕರಣವಾಗುತ್ತಿದ್ದು, ನಗರ ಪ್ರದೇಶದಲ್ಲಿ ಕುಡಿಯುವ ನೀರಿಗೆ ಬೇಡಿಕೆ ಹೆಚ್ಚಾಗಿದೆ. ಒಳಚರಂಡಿ ವ್ಯವಸ್ಥೆ ಹಾಗೂ ತ್ಯಾಜ್ಯ ವಸ್ತುಗಳ ನಿರ್ಮೂಲನೆಯ ನಿರ್ವಹಣೆ ತ್ರಾಸದಾಯಕವಾಗುತ್ತಿದೆ. ಈ ತೊಂದರೆಯನ್ನು ನಿವಾರಿಸಲು ನಾನು

ಕೇಂದ್ರ ನೆರವಿನ ತ್ವರಿತ ನೀರು ಸರಬರಾಜು ಯೋಜನೆಗೆ ರಾಜ್ಯದ ಪಾಲಿನ ಹಣವಾದ 30.98 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

227. ಕರ್ನಾಟಕ ನಗರ ನೀರು ಸರಬರಾಜು ಮತ್ತು ನೈರ್ಮಲ್ಯ ಸುಧಾರಣೆ ಯೋಜನೆಯು ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ಮತ್ತು ಬೆಳಗಾವಿ ನಗರಗಳ ನೈರ್ಮಲ್ಯ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಸುಧಾರಿಸುವ ಕಾಳಜಿಯನ್ನು ಹೊಂದಿದ್ದು, ಈ ಯೋಜನೆಗೆ ನಾನು 2007-08ನೇ ಸಾಲಿನಲ್ಲಿ 57.01 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

228. ಇದರ ಜೊತೆಗೆ ನಾನು ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗಳಿಗೆ 2007-08ನೇ ಸಾಲಿನಲ್ಲಿ 128.89 ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇನೆ.

229. ಕಾವೇರಿ 4ನೇ ಹಂತದ ಎರಡನೇ ಘಟ್ಟದ ನೀರು ಸರಬರಾಜು ಯೋಜನೆಗೆ ಮತ್ತು ಬೆಂಗಳೂರು ನಗರಕ್ಕೆ 500 ಎಂ.ಎಲ್.ಡಿ. ಸಂಸ್ಕರಣಾ ನೀರಿನ ಪೂರೈಕೆಗಾಗಿ 415 ಕೋಟಿ ರೂ.ಗಳನ್ನು 2007-08ನೇ ಸಾಲಿನಲ್ಲಿ ಒದಗಿಸುತ್ತಿದ್ದೇನೆ.

230. ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆಯನ್ನು JNNURM ಯೋಜನೆಯಡಿ 198 ಕೋಟಿ ರೂ.ಗಳ ವೆಚ್ಚದಲ್ಲಿ ಸುಧಾರಿಸಲಾಗುವುದು.

231. ಇದಲ್ಲದೇ ಕೋಲಾರದ 2ನೇ ಹಂತದ ಒಳಚರಂಡಿ ಯೋಜನೆಯನ್ನು 6.42 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. ಯರಗೋಳ ನೀರು ಸರಬರಾಜು ಯೋಜನೆಯನ್ನು

2007-08ನೇ ಸಾಲಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮೂಲಕ ಅನುಷ್ಠಾನ ಗೊಳಿಸಲಾಗುವುದು.

**ಬೆಂಗಳೂರು ಅಭಿವೃದ್ಧಿ:**

232. ಕರ್ನಾಟಕ ಪೌರಾಡಳಿತ ಸುಧಾರಣಾ ಯೋಜನೆಗೆ ನಾನು 2007-08ನೇ ಸಾಲಿನಲ್ಲಿ 250 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದು, ಇದು 2006-07ನೇ ಸಾಲಿನಲ್ಲಿ ನೀಡಿದ ಹಣಕ್ಕಿಂತ ದುಪ್ಪಟ್ಟಾಗಿದೆ.

233. ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ರೂಪಿಸಿದೆ. ದಿನಾಂಕ:16.01.2007 ರಿಂದ ಜಾರಿಗೆ ಬರುವಂತೆ ಏಳು ನಗರ ಸಭೆಗಳು, ಒಂದು ಪುರಸಭೆ ಮತ್ತು 110 ಗ್ರಾಮಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸೇರಿವೆ. ಇದರೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ 225 ಚ.ಕಿಮೀ ನಿಂದ ಸುಮಾರು 741 ಚ.ಕಿಮೀಗಳಿಗೆ ವಿಸ್ತಾರವಾಗಿದೆ. ಹಾಲಿ ಇರುವ ವಲಯಗಳ ಜೊತೆಗೆ 5 ಹೊಸ ವಲಯಗಳನ್ನು ರಚಿಸಲಾಗಿದ್ದು, 1106 ಹೊಸ ಹುದ್ದೆಗಳಿಗೆ ಮಂಜೂರಾತಿ ನೀಡಲಾಗಿದೆ.

234. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಜಾಗತಿಕ ಮಟ್ಟದ ನಗರವನ್ನಾಗಿ ರೂಪಿಸಲು ನಮ್ಮ ಸರ್ಕಾರವು ಬದ್ಧವಾಗಿದೆ. ಈ ಉದ್ದೇಶಕ್ಕಾಗಿ ಹಲವು ಕಾರ್ಯಕ್ರಮಗಳಿಗೆ ಅನುದಾನವನ್ನು ನೀಡಲು ಪ್ರಸ್ತಾಪಿಸಿರುತ್ತೇನೆ. ಮೊಟ್ಟಮೊದಲನೆಯದಾಗಿ ಹೊಸದಾಗಿ ಸೃಷ್ಟಿಸಲಾಗಿರುವ ಬ್ಯಾಟರಾಯನಪುರ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿ ನಗರ ವಲಯಗಳು, ಹಿಂದಿನ ಎಂಟು ನಗರ ಸಭೆಗಳು ಮತ್ತು ಸದ್ಯದಲ್ಲಿ ಬೃಹತ್ ಬೆಂಗಳೂರು ಮಹಾನಗರ

ಪಾಲಿಕೆಯ ಪರಿದಿಯಲ್ಲಿ ಬರುವ ಹಳ್ಳಿಗಳನ್ನೊಳಗೊಂಡಂತೆ ಈ ಸ್ಥಳಗಳಲ್ಲಿ ಮುಖ್ಯ ರಸ್ತೆಗಳ ಡಾಂಬರೀಕರಣ, ರಸ್ತೆ ಪಕ್ಕದ ಚರಂಡಿ ನಿರ್ಮಾಣ ಮತ್ತು ಕಾಲುದಾರಿ ನಿರ್ಮಾಣಕ್ಕಾಗಿ ಪ್ರತಿ ವಲಯಕ್ಕೆ ತಲಾ 30 ಕೋಟಿ ರೂ.ಗಳನ್ನು ಅನುದಾನವಾಗಿ ನೀಡಲು ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಜನದಟ್ಟಣೆ ಇರುವ ಒಂಭತ್ತು ಸ್ಥಳಗಳಲ್ಲಿ ಓವರ್ ಪಾಸ್‌ಗಳನ್ನು ಕಟ್ಟಲು 50 ಕೋಟಿ ರೂ.ಗಳನ್ನು ಹಂಚಿಕೆ ಮಾಡಲು ಬಯಸುತ್ತೇನೆ. ಇದಲ್ಲದೇ ಬಿಡಿಎ ಸಮೀಪದಿಂದ ಮಿನ್ಸ್ಕ್ ವೃತ್ತದವರೆಗೆ ಸುರಂಗ ಮಾರ್ಗವನ್ನು ನಿರ್ಮಿಸಲು 2007-08ನೇ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.

235. ಬೆಂಗಳೂರು ನಗರದ ಸಂಚಾರಿ ವ್ಯವಸ್ಥೆಯ ತೊಂದರೆಯನ್ನು ನಿವಾರಿಸಲು 'ನಮ್ಮ ಮೆಟ್ರೋ' ರೈಲು ಯೋಜನೆಗೆ 2006-07ನೇ ಸಾಲಿನಲ್ಲಿ ಚಾಲನೆ ನೀಡಲಾಗಿತ್ತು. ಇದು ಭಾರತ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ಸಹಭಾಗಿತ್ವದ 6395 ಕೋಟಿ ರೂ.ಗಳ ವೆಚ್ಚದ ಯೋಜನೆಯಾಗಿದ್ದು, 2009ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಈ ಯೋಜನೆಗೆ ಕರ್ನಾಟಕ ಸರ್ಕಾರವು 2007-08ನೇ ಸಾಲಿನಲ್ಲಿ ರಾಜ್ಯದ ಪಾಲಿನ ಕೊಡುಗೆಯಾದ 172.88 ಕೋಟಿ ರೂ.ಗಳನ್ನು ಒದಗಿಸಲಿದೆ.

236. ಬೆಂಗಳೂರು ನಗರದ ಮೂಲಭೂತ ಸೌಕರ್ಯ ಅಗತ್ಯತೆಗಳನ್ನು ಜವಹರ್‌ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಯೋಜನೆಯಡಿ ತೆಗೆದುಕೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ 2007-08ನೇ ಸಾಲಿನಲ್ಲಿ 800 ಕೋಟಿ ರೂ.ಗಳನ್ನು ಒದಗಿಸಲಾಗುವುದು. 2007-08ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

- ಮಳೆ ನೀರನ್ನು ಸೂಕ್ತವಾಗಿ ಹರಿಸಲು ಅನುಕೂಲ ಕಲ್ಪಿಸುವ **'ಕಣಿವೆ ಯೋಜನೆ'** ಯನ್ನು 640 ಕೋಟಿ ರೂ.ಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು.

- ಮಹಾತ್ಮಗಾಂಧಿರಸ್ತೆ ಮತ್ತು ಕೋರಮಂಗಲದ ಸುತ್ತಮುತ್ತಲಿನ ರಸ್ತೆ ಅಭಿವೃದ್ಧಿಯನ್ನು 99 ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

- ಬೃಹತ್ ಬೆಂಗಳೂರು ನಗರ ಪಾಲಿಕೆಯಡಿ ಬರುವ 110 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಿವೃದ್ಧಿಗಾಗಿ ಈ ಯೋಜನೆಯನ್ನು 98 ಕೋಟಿ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳುವುದು.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿರುವ 110 ಗ್ರಾಮಗಳಿಗೆ 98 ಕೋಟಿ ರೂ.ಗಳ ವೆಚ್ಚದಲ್ಲಿ ನೀರಿನ ಸೌಕರ್ಯ ಕಲ್ಪಿಸುವುದು.

- JNNURM ಯೋಜನೆಗೆ ರಾಜ್ಯದ ಪಾಲಿನ ಹಣವಾಗಿ 800 ಕೋಟಿ ರೂ.ಗಳನ್ನು ನಾನು 2007-08ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿದ್ದೇನೆ.

## ಮೂಲ ಸೌಕರ್ಯ ಅಭಿವೃದ್ಧಿ:

237. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯು ತೃಪ್ತಿದಾಯಕ ವೇಗದಲ್ಲಿ ಸಾಗುತ್ತಿದ್ದು, ನಿಗದಿತ ವೇಳೆಯಲ್ಲಿ ಕಾರ್ಯಾರಂಭಗೊಳ್ಳಲಿದೆ. 2007-08ನೇ ಸಾಲಿನಲ್ಲಿ ಈ

ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಪಾಲಿನ ಹಣ 137.33 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

238. ಮೈಸೂರು, ಹಾಸನ, ಶಿವಮೊಗ್ಗ, ಬೆಳಗಾವಿ, ಬಿಜಾಪುರ, ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲಾ ಕೇಂದ್ರಗಳಲ್ಲಿ **ಚಿಕ್ಕ ವಿಮಾನ ನಿಲ್ದಾಣಗಳನ್ನು** ಆರಂಭಿಸಲು ಯೋಜಿಸಲಾಗಿದೆ. ಪ್ರಸ್ತುತ ಹುಬ್ಬಳ್ಳಿ ಮತ್ತು ಮಂಗಳೂರಿನಲ್ಲಿರುವ ವಿಮಾನ ನಿಲ್ದಾಣಗಳನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. ಕಾರವಾರ ಮತ್ತು ಬೀದರ್‌ನಲ್ಲಿರುವ ಮಿಲಿಟರಿ ವಿಮಾನ ನಿಲ್ದಾಣಗಳನ್ನು ನಾಗರೀಕ ಸೇವೆಗೆ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. **ಈ ನಿಟ್ಟಿನಲ್ಲಿ ನಾನು 50 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.**

239. ಹೆಲಿಕ್ಯಾಪ್ಟರ್‌ಗಳು ದೂರದ ಸ್ಥಳಗಳಿಗೆ ಶೀಘ್ರ ಸಂಪರ್ಕ ಕಲ್ಪಿಸಲು ಉತ್ತಮ ವಾಹನವಾಗಿದ್ದು ಇದು ರಾಜ್ಯದ ಪ್ರವಾಸೋದ್ಯಮಕ್ಕೆ ಚೈತನ್ಯ ನೀಡುವ ಸಾಮರ್ಥ್ಯ ಹೊಂದಿವೆ. ಈ ನಿಟ್ಟಿನಲ್ಲಿ ನಾನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿರುವ ಹಾಗೂ ಪ್ರಮುಖ ಪ್ರವಾಸಿ ಸ್ಥಳಗಳಲ್ಲಿರುವ ಹೆಲಿಪ್ಯಾಡ್‌ಗಳನ್ನು ಅಭಿವೃದ್ಧಿಪಡಿಸಿ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು 2 ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಿದ್ದೇನೆ.

240. ಕರ್ನಾಟಕ ರಾಜ್ಯವು ಹಲವಾರು **ರೈಲ್ವೆ ಯೋಜನೆಗಳಿಗೆ** ಗಣನೀಯ ಪ್ರಮಾಣದಲ್ಲಿ ಹಣ ಹೂಡುತ್ತಿರುವ ದೇಶದಲ್ಲಿನ ಏಕೈಕ ಭಾಗೀದಾರ ರಾಜ್ಯವಾಗಿದೆ. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳಿಗೆ ರಾಜ್ಯದ ಪಾಲಿನ ಹಣವನ್ನು ನೀಡಿ ಶೀಘ್ರವಾಗಿ ಪೂರ್ಣಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ. ರೈಲ್ವೆ ಮೇಲುಸೇತುವೆಗಳು ಮತ್ತು ಕೆಳಸೇತುವೆಗಳು ವೇಗವಾದ ಮತ್ತು ಸುರಕ್ಷ

ಸಂಚಾರಕ್ಕೆ ನೆರವಾಗುತ್ತಿವೆ. ರಾಜ್ಯದ ರೈಲ್ವೆ ಯೋಜನೆಗಳಿಗೆ ಬೆಂಬಲ ಮುಂದುವರೆಸುವ ನಿಟ್ಟಿನಲ್ಲಿ 2007-08ನೇ ಸಾಲಿನಲ್ಲಿ ನಾನು ರಾಜ್ಯದ ಪಾಲಿನ ಹಣ ನೀಡಲು 158 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

241. ಹಲವಾರು ಮೂಲಸೌಕರ್ಯ ಯೋಜನೆಗಳಿಗೆ ಬೇಡಿಕೆ ಹೆಚ್ಚುತ್ತಿದ್ದು ಮೂಲಸೌಕರ್ಯ ನಿಧಿಯ ಮೊತ್ತವನ್ನು ಹೆಚ್ಚಿಸುವ ಅಗತ್ಯವಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಯು ಮೂಲವಿನ್ಯಾಸ ಬದಲಾವಣೆಯಾದ ನಂತರ ಉಳಿದಿರುವ ಹೆಚ್ಚುವರಿ ಜಮೀನನ್ನು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಆದ್ದರಿಂದ ಈ ಹೆಚ್ಚುವರಿ ಜಮೀನನ್ನು ಸಾರ್ವಜನಿಕವಾಗಿ ಹರಾಜು ಮಾಡುವ ಮೂಲಕ ಕನಿಷ್ಟ 700 ಕೋಟಿ ರೂ.ಗಳನ್ನು 2007-08ನೇ ಸಾಲಿನಲ್ಲಿ ಸಂಗ್ರಹಿಸಲು ಉದ್ದೇಶಿಸಲಾಗಿದೆ.

**ಮಾಹಿತಿ ತಂತ್ರಜ್ಞಾನ:**

242. ಕರ್ನಾಟಕವು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತ್ವರಿತ ಬೆಳವಣಿಗೆ ಸಾಧಿಸಿದೆ. ಬೆಂಗಳೂರು ನಗರವಂತೂ ಐಟಿ ವಲಯದಲ್ಲಿ ಮುಂಚೂಣಿಯಲ್ಲಿದೆ. ಮಾಹಿತಿ ತಂತ್ರಜ್ಞಾನವನ್ನು ಕರ್ನಾಟಕದ ಇತರೆ ಪ್ರದೇಶಗಳಿಗೆ ವಿಸ್ತರಿಸಲು ರಾಜ್ಯವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಈಗಾಗಲೇ ರಾಜ್ಯ ಸರ್ಕಾರವು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನೀತಿಯನ್ನು ಪ್ರಚುರಪಡಿಸಿ ರಾಜ್ಯ ಸರ್ಕಾರದ ಉದ್ದೇಶವನ್ನು ಸಮಸ್ತರಿಗೂ ಸಹ ತಿಳಿಸಿದೆ. ಯಾವ ರೀತಿಯ ಉತ್ತೇಜನ ಮತ್ತು ಅನುಕೂಲಗಳನ್ನು ಸರ್ಕಾರ ನೀಡಲಿದೆ ಎನ್ನುವ ಮಾಹಿತಿ ಇದರಲ್ಲಿದೆ.

243. ನಿಜವಾಗಿ ಹೇಳಬೇಕಾದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಂಸ್ಥೆಗಳು ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಯ ರಿಯಾಯತಿಯನ್ನು ಕೇಳುತ್ತಿಲ್ಲ. ಈ ಸಂಸ್ಥೆಗಳು ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರೆ ಪ್ರದೇಶಗಳಲ್ಲಿ ಹಲವು ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸಲು ಕೇಳುತ್ತಿವೆ. ಈ ಹಿನ್ನೆಲೆಯಲ್ಲಿ ನಾವು ನಗರಾಭಿವೃದ್ಧಿ ಮತ್ತು ಮೂಲ ಸೌಕರ್ಯ ಕ್ಷೇತ್ರಗಳಲ್ಲಿ ಹೆಚ್ಚು ಬಂಡವಾಳವನ್ನು ಹೂಡುತ್ತಿದ್ದು, ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯ ಬಗ್ಗೆ ನಮ್ಮ ಬದ್ಧತೆಯನ್ನು ತೋರಿಸಿದ್ದೇವೆ.

244. ಧಾರವಾಡದಲ್ಲಿ ಪ್ರಾಂತೀಯ ವಿಜ್ಞಾನ ಕೇಂದ್ರವನ್ನು ಸ್ಥಾಪನೆ ಪ್ರಗತಿಯಲ್ಲಿದೆ. ಈ ಯೋಜನೆಗೆ 2007-08ನೇ ಸಾಲಿನಲ್ಲಿ 1 ಕೋಟಿ ರೂ.ಗಳ ಹಣವನ್ನು ನಿಗದಿಪಡಿಸಿರುತ್ತೇನೆ. ಅಂತೆಯೇ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಇತರೆ ಯೋಜನೆಗಳಿಗೂ ಸಹ 5 ಕೋಟಿ ರೂ.ಗಳನ್ನು ಒದಗಿಸಲು ನಾನು ಪ್ರಸ್ತಾಪಿಸಿರುತ್ತೇನೆ. ಇದರ ಜೊತೆಗೆ **ಜಿಲ್ಲಾ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಬೇಡಿಕೆ ಬರುತ್ತಿದ್ದು ಈ ಉದ್ದೇಶಕ್ಕಾಗಿ ನಾನು 5 ಕೋಟಿ ರೂ.ಗಳನ್ನು ನಿಗದಿಪಡಿಸುತ್ತಿದ್ದೇನೆ.** ಹೊಸ ಉದ್ಯಮಗಳನ್ನು ಸ್ಥಾಪಿಸಲು ಮುಂದೆ ಬರುವ ಉದ್ದಿಮೆದಾರರಿಗೆ ಬಂಡವಾಳ ನೆರವನ್ನು ನೀಡಲು ನಾನು 5 ಕೋಟಿ ರೂ.ಗಳನ್ನು ಮೀಸಲಿಡುತ್ತಿದ್ದೇನೆ.

245. ನ್ಯಾನೋ ಟೆಕ್ನಾಲಜಿ ವಿಜ್ಞಾನದ ಹೊಸ ಕ್ಷೇತ್ರವಾಗಿ ಹೊರಹೊಮ್ಮುತ್ತಿದ್ದು, ಇದು ಅನೇಕ ಅವಕಾಶಗಳನ್ನು ಒದಗಿಸಿಕೊಡಲಿದೆ. ಈ ದಿಕ್ಕಿನಲ್ಲಿ ಮುನ್ನಡೆಯಲು ನಾನು ಪ್ರಾಸ್ತವಿಕವಾಗಿ 3 ಕೋಟಿ ರೂ.ಗಳನ್ನು ನೀಡಲು ಬಯಸುತ್ತೇನೆ. ಅವಶ್ಯಕತೆ ಇದ್ದಲ್ಲಿ ಮುಂದೆ ಇನ್ನೂ ಹೆಚ್ಚಿನ ಹಣವನ್ನು ಈ ಉದ್ದೇಶಕ್ಕೆ ಒದಗಿಸಲಾಗುವುದು.

**ಇಂಧನ:**

246. ಕರ್ನಾಟಕ ವಿದ್ಯುತ್ ನಿಗಮ ಸಂಸ್ಥೆಯ ಸ್ಥಾಪಿತ ಸಾಮರ್ಥ್ಯವು 4994.83 ಮೆಗಾ ವ್ಯಾಟ್ ಆಗಿರುತ್ತದೆ. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಘಟಕ 1 ಮತ್ತು 2, ವರಾಹಿ ಜಲವಿದ್ಯುತ್ ಯೋಜನೆ, ಹಾಗೂ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 400 ಮೆಗಾ ವ್ಯಾಟ್ ಸಾಮರ್ಥ್ಯದ ಗುಂಡ್ಯ ಜಲೋತ್ಪನ್ನ ವಿದ್ಯುತ್ ಕೇಂದ್ರವನ್ನು ಹನ್ನೊಂದನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕೈಗೆತ್ತಿಕೊಳ್ಳಲಾಗುವುದು. ನಮ್ಮ ಸರ್ಕಾರವು ಖಾಸಗಿ ಸಂಸ್ಥೆಗಳಿಗೆ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳವನ್ನು ಹೂಡಲು ಉತ್ತೇಜನ ನೀಡಲಿದೆ. ಹರಾಜು ಮೂಲಕ ಖಾಸಗಿ ಬಂಡವಾಳ ಹೂಡಿಕೆಯನ್ನು ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಲು ಕ್ರಮವನ್ನು ಕೈಗೊಳ್ಳಲಿದ್ದೇವೆ.

247. ಈಗಾಗಲೇ ಕರ್ನಾಟಕ ವಿದ್ಯುತ್ ನಿಯಂತ್ರಣಾ ಪ್ರಾಧಿಕಾರಕ್ಕೆ **ತಿಳಿಸಿರುವಂತೆ 2007-08ನೇ ಸಾಲಿನಲ್ಲೂ 1,800 ಕೋಟಿ ರೂ.ಗಳನ್ನು ವಿದ್ಯುತ್ ಸಹಾಯಧನ ರೂಪದಲ್ಲಿ ನೀಡಲು ಪ್ರಸ್ತಾಪಿಸುತ್ತೇನೆ.** ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ದಿನಾಂಕ: 31.05.2002ಕ್ಕೆ ಬಾಕಿ ಇರುವ ವಿದ್ಯುತ್ ಸರಬರಾಜು ಕಂಪನಿಗಳ ನೌಕರರ ಪಿಂಚಣಿ, ಗ್ರಾಚುಯಿಟಿ ಹಣವನ್ನು ನೀಡಲು 280 ಕೋಟಿ ರೂ.ಗಳನ್ನು ಒದಗಿಸಲು ಪ್ರಸ್ತಾಪಿಸುತ್ತೇನೆ.

248. ಹಿಂದುಳಿದ ತಾಲ್ಲೂಕುಗಳಲ್ಲಿ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಒದಗಿಸುವುದು ನಮ್ಮ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ವಿದ್ಯುತ್ ವಿತರಣಾ ಸಂಸ್ಥೆಗಳಿಗೆ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ನಿರ್ವಹಣಾ ಯೋಜನೆಯನ್ನು ವಹಿಸಲಾಗುವುದು. ಈ ಕಾರ್ಯಕ್ಕೆ 250 ಕೋಟಿ

ರೂ.ಗಳನ್ನು ನೀಡಲು ಉದ್ದೇಶಿಸಿದ್ದೇನೆ. ಈ ಹಣವನ್ನು ವಿಶೇಷ ಅಭಿವೃದ್ಧಿ ಯೋಜನೆಯಲ್ಲಿರುವಂತೆ ಪ್ರಾಂತೀಯ ಅಸಮಾನತೆ ನಿವಾರಿಸಲು ಉದ್ದೇಶಿಸಿದ್ದೇನೆ.

249. 2007-08 ನೇ ಸಾಲಿನಲ್ಲಿ 1,000 ತಾಂಡಾಗಳಿಗೆ ಸೌರಶಕ್ತಿ, ಕಿರು ಜಲೋತ್ಪನ್ನ, ಜೈವಿಕ, ಅನಿಲ ರೂಪದ ನವೀಕೃತ ಇಂಧನ ಮೂಲಗಳಿಂದ ಉತ್ಪಾದನೆ ಆಗುವ ವಿದ್ಯುತ್‌ನ್ನು ಒದಗಿಸಲು ಉದ್ದೇಶಿಸಿದ್ದೇನೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಶೇಕಡಾ 90ರಷ್ಟು ಸಹಾಯ ಧನ ದೊರೆಯಲಿದೆ.

**ಅರಣ್ಯ:**

250. ಜೆಬಿಐಸಿ ನೆರವಿನ **'ಕರ್ನಾಟಕ ಸುಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೈವಿಕ ವೈವಿಧ್ಯ ಸಂರಕ್ಷಣಾ ಯೋಜನೆ'**ಯನ್ನು ಅನುಷ್ಠಾನಗೊಳಿಸಲು ನಾನು 2007-08ರಲ್ಲಿ 137 **ಕೋಟಿ ರೂ.ಗಳನ್ನು** ಒದಗಿಸಲು ಉದ್ದೇಶಿಸಿದ್ದೇನೆ.

251. ತುಮಕೂರು ಜಿಲ್ಲೆಯ ಮೈದನಹಳ್ಳಿಯಲ್ಲಿ ಸುಮಾರು 323.28 ಹೆಕ್ಟೇರ್ ಪ್ರದೇಶದಲ್ಲಿ ವನ್ಯ ಜೀವಿಗಳನ್ನು ಕಾಪಾಡಲು ಹಾಗೂ ಸಂರಕ್ಷಣೆ ಮಾಡುವ ಉದ್ದೇಶದಿಂದ "ಕೃಷ್ಣಮೃಗ ಸಂರಕ್ಷಣಾ ವಲಯ" (Black Buck Conservation Area) ಎಂದು ಘೋಷಿಸಲು 2007-08ನೇ ಸಾಲಿನಲ್ಲಿ ಕ್ರಮವನ್ನು ಕೈಗೊಳ್ಳಲಾಗುವುದು.

**ಪರಿಸರ ಮತ್ತು ಜೀವಿಶಾಸ್ತ್ರ:**

252. 2007-08ನೇ ಸಾಲಿನಲ್ಲಿ **'ಕರ್ನಾಟಕ ರಾಜ್ಯ ಪರಿಸರ ಪ್ರಭಾವ ಮೌಲ್ಯಮಾಪನಾ ಪ್ರಾಧಿಕಾರ'** ಮತ್ತು **'ಕರ್ನಾಟಕ ರಾಜ್ಯ ತಜ್ಞ ಮಾಲೀಕರಣ ಸಮಿತಿ'** ಯನ್ನು ಸ್ಥಾಪಿಸಲಾಗುವುದು. ರಾಷ್ಟ್ರೀಯ ಕೆರೆ ಸಂರಕ್ಷಣಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ನದಿ ಸಂರಕ್ಷಣಾ ಕಾರ್ಯಕ್ರಮ

ಎನ್ನುವ ಎರಡು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಈ ಕಾರ್ಯಕ್ಕಾಗಿ ರೂ.3.4 ಕೋಟಿಗಳನ್ನು 2007-08ನೇ ಸಾಲಿನಲ್ಲಿ ಮೀಸಲಿಡಲು ಉದ್ದೇಶಿಸಿರುತ್ತೇನೆ.

253. ಕರ್ನಾಟಕ ರಾಜ್ಯ ಮತ್ತು ವಿಶೇಷವಾಗಿ ಬೆಂಗಳೂರು ನಗರದಲ್ಲಿ ಎಲೆಕ್ಟ್ರಾನಿಕ್ ವಸ್ತುಗಳ ಪುನರ್ ಬಳಕೆಗೆ ವಿಪುಲವಾದ ಅವಕಾಶಗಳಿವೆ. ಎಲೆಕ್ಟ್ರಾನಿಕ್ ವಸ್ತುಗಳು ಬಹು ಬೇಗ ಹಾಳಾಗುವುದರಿಂದ ಸಧ್ಯಕ್ಕೆ ಈ ವಸ್ತುಗಳ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ವ್ಯವಸ್ಥೆ ಅಥವಾ ಅನುಕೂಲಗಳಿರುವುದಿಲ್ಲ. ಪುನರ್ ಬಳಕೆ ಮಾಡಬಹುದಾದ ಎಲೆಕ್ಟ್ರಾನಿಕ್ ವಸ್ತುಗಳನ್ನು ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಬೇಕಾಗಿರುತ್ತದೆ. ಈ ರೀತಿ ಕ್ರಮಗಳನ್ನು ಕೈಗೊಳ್ಳಲು 85 ಲಕ್ಷ ರೂ.ಗಳನ್ನು ಮೀಸಲಿಡಲು ಬಯಸುತ್ತೇನೆ.

**ಕಾನೂನು ಮತ್ತು ಸಂಸದೀಯ ವ್ಯವಹಾರಗಳು:**

254. ತ್ವರಿತಗತಿಯ ನ್ಯಾಯಾಲಯಗಳನ್ನು ಈ ಹಿಂದೆ ಸ್ಥಾಪಿಸಲಾಗಿದ್ದು, ಅವುಗಳನ್ನು 2007-08ನೇ ಸಾಲಿನಲ್ಲಿಯೂ ಸಹ ಮುಂದುವರಿಸುವುದು ನಮ್ಮ ಧ್ಯೇಯವಾಗಿದೆ ಅಲ್ಲದೇ ಎಲ್ಲಾ ಜಿಲ್ಲೆಗಳಲ್ಲೂ ಸಹ ಲೋಕ ಅದಾಲತ್‌ನ್ನು ಸ್ಥಾಪಿಸಲು 2.00 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು. ನವ ಕಾನೂನು ಪದವೀಧರರಿಗೆ ಸಧ್ಯಕ್ಕೆ ನೀಡುತ್ತಿರುವ ಮಾಸಾಶನವನ್ನು 1000 ರೂ.ಗಳಿಂದ 2000 ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ.

255. ಧಾರವಾಡ ಮತ್ತು ಗುಲ್ಬರ್ಗಾಗಳಲ್ಲಿ ಸಂಚಾರಿ ಪೀಠದ ನಿರ್ಮಾಣ ಪೂರ್ಣಗೊಳಿಸಲು 20 ಕೋಟಿ ರೂ.ಗಳನ್ನು ಪ್ರಸ್ತಾವಿಸಿರುತ್ತೇನೆ.

256. ಶಿವಮೊಗ್ಗ ಮತ್ತು ಗುಲ್ಬರ್ಗಾಗಳಲ್ಲಿ ಸರ್ಕಾರಿ ಕಾನೂನು ಕಾಲೇಜುಗಳನ್ನು ಸ್ಥಾಪಿಸಲಾಗುವುದು.

## ಗೃಹ:

257. ಕರ್ನಾಟಕ ರಾಜ್ಯದ ಕಾನೂನು ಸುವ್ಯವಸ್ಥೆ ವರ್ಷದೊಳಗೆ ಸಾಲಿನಲ್ಲಿ ಶಾಂತಿಯುತವಾಗಿತ್ತು. ತೀವ್ರ ಸ್ವರೂಪದ ಅವಘಡಗಳು ಸಂಭವಿಸಿರುವುದಿಲ್ಲ. ಆದರೂ ರಾಜ್ಯದಲ್ಲಿ ಹೆಚ್ಚಿರುವ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಸಾಮರ್ಥ್ಯವನ್ನು ಬಲಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ ಮುನಿರಾಬಾದ್‌ನಲ್ಲಿ ಇಂಡಿಯಾ ರಿಸರ್ವ್ ಪೊಲೀಸ್ ಪಡೆಯನ್ನು ಸ್ಥಾಪಿಸಲು ನಾನು 2 ಕೋಟಿ ರೂ.ಗಳನ್ನು ಮೀಸಲಿಡಲು ಬಯಸುತ್ತೇನೆ. ಅಲ್ಲದೇ, ಹೂವಿನಹಡಗಲಿಯಲ್ಲಿ ಸಶಸ್ತ್ರ ಮೀಸಲು ಪಡೆಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲು 3.00 ಕೋಟಿ ರೂ.ಗಳನ್ನು ಒದಗಿಸಲು ಪ್ರಸ್ತಾಪಿಸಿರುತ್ತೇನೆ. ಹುಬ್ಬಳ್ಳಿ ನಗರ ಸಶಸ್ತ್ರ ಮೀಸಲು ಪಡೆಯ ನೌಕರರಿಗೆ ವಸತಿ ಸೌಕರ್ಯ ಒದಗಿಸುವ ಸಲುವಾಗಿ ರೂ.3.00 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ ಮತ್ತು ಈ ಕೆಲಸವನ್ನು ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ಕೈಗೆತ್ತಿಕೊಳ್ಳಲಿದೆ.

258. ರಾಜ್ಯದ ಪ್ರಾಸಿಕ್ಯೂಷನ್ ಇಲಾಖೆಯು ಕಂಪ್ಯೂಟರ್‌ಗಳನ್ನು ಕಾನೂನು ಪುಸ್ತಕಗಳನ್ನು, ನಿಯತಕಾಲಿಕೆಗಳನ್ನು ನೀಡಲು ಕೋರಿಕೆ ಸಲ್ಲಿಸಿರುತ್ತದೆ. ಈ ಹಿನ್ನೆಲೆಯಲ್ಲಿ ನಾನು 1.50 ಕೋಟಿ ರೂ. ನೀಡಲು ಪ್ರಸ್ತಾಪಿಸಿರುತ್ತೇನೆ.

259. ಬೆಂಗಳೂರು ನಗರದಲ್ಲಿ ವಾಹನ ಸಂಚಾರ ನಿಯಂತ್ರಣಕ್ಕೆ 'ಬಿ' ಟ್ರಾಕ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗೆ

2007-08ನೇ ಸಾಲಿನಲ್ಲಿ 35 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ.

**ಅಗ್ನಿಶಾಮಕ ದಳ:**

260. ಕೆ-ಸೇಫ್ (K-safe) 2010 ಎನ್ನುವ ಯೋಜನೆಯಡಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಕೇಂದ್ರಗಳನ್ನು ತೆರೆಯುವ ಉದ್ದೇಶ ಇದೆ. ಇದಕ್ಕಾಗಿ 35 ಕೋಟಿ ರೂ.ಗಳನ್ನು ಈ ಕಾರ್ಯಕ್ಕಾಗಿ ಮೀಸಲಿಡುತ್ತಿದ್ದೇನೆ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನವನ್ನು ವೆಚ್ಚ ಮಾಡಲಾಗುವುದು.

261. ಸದ್ಯಕ್ಕೆ ಪೊಲೀಸ್ ಸಿಬ್ಬಂದಿಗಳಿಗೆ ಮಾತ್ರ ಸರ್ಕಾರದ ವತಿಯಿಂದ ಉಚಿತ ಆಹಾರ ಧಾನ್ಯಗಳನ್ನು ಪೂರೈಸಲಾಗುತ್ತಿದೆ ಮತ್ತು ಪೊಲೀಸರ ಕಲ್ಯಾಣ ನಿಧಿಗೆ ಸರ್ಕಾರ ವಂತಿಗೆ ನೀಡುತ್ತಿದೆ. ಇದೇ ಅನುಕೂಲಗಳನ್ನು ಅಗ್ನಿಶಾಮಕದ ಸೇವೆಯಲ್ಲಿ ಮತ್ತು ಹೋಮ್‌ಗಾರ್ಡ್ ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಖಾಯಂ ನೌಕರರಿಗೂ ಸಹ ನೀಡಲು ಯೋಜಿಸಲಾಗಿದೆ. ಇದಲ್ಲದೆ ಅಗ್ನಿಶಾಮಕದಳ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ಮತ್ತೊಂದು ಜೊತೆ ಸಮವಸ್ತ್ರಕ್ಕಾಗಿ ಭತ್ಯೆ ನೀಡಲು ಪ್ರಸ್ತಾಪಿಸಿರುತ್ತೇನೆ.

262. ಬೆಂಗಳೂರು ಅಗ್ನಿಶಾಮಕ ದಳಕ್ಕೆ ಅಗತ್ಯವಿರುವ ಸ್ಕೈ ಲಿಫ್ಟ್ ನೀಡಲು ಉದ್ದೇಶಿಸಲಾಗಿದೆ.

**ಜೈಲು ಮತ್ತು ಬಂದೀಖಾನೆ:**

263. ರಾಜ್ಯದಲ್ಲಿ ಹಾಲಿ ಸುಮಾರು 13,000 ಖೈದಿಗಳು ಮತ್ತು ವಿಚಾರಣಾಧೀನರು ಇರುತ್ತಾರೆ. ಈ ರೀತಿಯ ವ್ಯಕ್ತಿಗಳಿಗೆ ಪುನರ್ವಸತಿ ಯೋಜನೆ ಕಾರ್ಯಕ್ರಮದಡಿಯಲ್ಲಿ ಅನೇಕ ರೀತಿಯ ಸೇವಾ ಕೌಶಲ್ಯ

ತರಬೇತಿಯನ್ನು ನೀಡಲಾಗುವುದು. ಸಧ್ಯಕ್ಕೆ ಸೇವಾ ಕೌಶಲ್ಯ ನೀಡಲು ಅಗತ್ಯ ಇರುವ ಸ್ಥಳಾವಕಾಶ, ಉಪಕರಣಗಳು, ತರಬೇತಿದಾರರು, ಲಭ್ಯ ಇದ್ದರೂ ಸಹ ತರಬೇತಿ ನೀಡಲು ಬೇಕಾಗಿರುವ ಕಚ್ಚಾಸಾಮಗ್ರಿಗಳಿಗೆ ಹಣ ಸಾಕಷ್ಟು ಇರುವುದಿಲ್ಲ. **ಆದುದರಿಂದ 2007-08ನೇ ಸಾಲಿನಲ್ಲಿ ಕಚ್ಚಾಸಾಮಗ್ರಿಗಳಿಗಾಗಿ 2.70 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ.** ಎರಡನೆಯದಾಗಿ ವಿಚಾರಣಾಧೀನ ಖೈದಿಗಳು ನ್ಯಾಯಾಧೀಶರ ಮುಂದೆ ಹಾಜರಾಗಲು ಸೆರೆಮನೆಯಿಂದ ಹೊರಗೆ ಬರುವುದನ್ನು ತಪ್ಪಿಸುವ ಸಲುವಾಗಿ ನ್ಯಾಯಾಲಯ ಮತ್ತು ಬಂದೀಖಾನೆಗಳ ಮಧ್ಯೆ ವೀಡಿಯೋ ಕಾನ್‌ಫರೆನ್ಸಿಂಗ್ ತಂತ್ರಜ್ಞಾನವನ್ನು ಅಳವಡಿಸಲು ಯೋಜಿಸಲಾಗಿದೆ. **ಈ ನಿಟ್ಟಿನಲ್ಲಿ 12 ಬಂದೀಖಾನೆಗಳ ಮತ್ತು 12 ನ್ಯಾಯಾಲಯಗಳ ಮಧ್ಯೆ ವೀಡಿಯೋ ಕಾನ್‌ಫರೆನ್ಸಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು 1.78 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಸ್ತಾಪಿಸಿರುತ್ತೇನೆ.**

**ಆಹಾರ ಮತ್ತು ನಾಗರೀಕ ಪೂರೈಕೆ:**

264. ದುರ್ಬಲ ವರ್ಗದವರಿಗೆ ಆಹಾರ ಸುರಕ್ಷತೆ ಒದಗಿಸುವುದು ರಾಜ್ಯ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಪಡಿತರ ಚೀಟಿಯ ಬಳಕೆಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಕೇವಲ ಪಡಿತರ ಪಡೆಯಲಿಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ. ಇನ್ನು ಮುಂದೆ ಸರ್ಕಾರದ ಹಲವಾರು ಕಾರ್ಯಕ್ರಮಗಳ ಅನುಕೂಲ ಪಡೆಯಲು ಪಡಿತರ ಚೀಟಿ ಹೊಂದಿರುವುದು ಆಧಾರವಾಗಿರುವುದಿಲ್ಲ.

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಇ-ಆಡಳಿತ:**

265. ಮೊದಲಬಾರಿಗೆ ವಿಧಾನಸಭೆ ಅಧಿವೇಶನವು ರಾಜಧಾನಿಯ ಹೊರಗೆ ನಡೆದಿದೆ. ಈ ಅಧಿವೇಶನದ ನಂತರ, ಡಾ: ಡಿ.ಎಂ. ನಂಜುಂಡಪ್ಪ ವರದಿ ಪ್ರಾದೇಶಿಕ ಅಸಮತೋಲನ ವರದಿಯ ಶಿಫಾರಸ್ಸುಗಳು ನಿರ್ದಿಷ್ಟರೂಪ ಪಡೆದಿರುತ್ತದೆ. ಇದನ್ನು ಆಯವ್ಯಯದಲ್ಲಿ ಹೇಳಲಾಗಿದೆ. ಇನ್ನು ಮುಂದೆ ಪ್ರತಿವರ್ಷ ಕಡೆ ಪಕ್ಷ 15 ದಿನದ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ತೀರ್ಮಾನಿಸಿರುತ್ತೇವೆ. ಈ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ಸುವರ್ಣ ವಿಧಾನಸೌಧ ನಿರ್ಮಾಣವನ್ನು 250 ಕೋಟಿ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗುವುದು. **ರೂ.70 ಕೋಟಿಯನ್ನು ವಿಧಾನಸೌಧ ಹಾಗೂ ಇತರೇ ಕಟ್ಟಡಗಳ ನಿರ್ಮಾಣಕ್ಕಾಗಿ ಮೀಸಲಿಡುತ್ತೇನೆ.**

266. ಹೈದರಾಬಾದ್ ಕರ್ನಾಟಕ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ ರಮಾನಂದತೀರ್ಥರು, ಕೊಲ್ಲೂರುಮಲ್ಲಪ್ಪ, ಚಂದ್ರಶೇಖರ ಪಾಟೀಲ, ಶಿವಮೂರ್ತಿಅಳವಂಡಿ ಮೊದಲಾದ ಮಹನೀಯರ ಹೆಸರಿನಲ್ಲಿ ಸುವರ್ಣ ಸ್ವಾತಂತ್ರ್ಯ ಹೋರಾಟ ಭವನವನ್ನು ನಿರ್ಮಿಸಲು **5 ಕೋಟಿ ರೂ.ಗಳನ್ನು ಮೀಸಲಿಡಲು ಪ್ರಸ್ತಾಪಿಸುತ್ತಿದ್ದೇನೆ.** ಹಾವೇರಿ ಜಿಲ್ಲೆಯ ಹೊಸರೀಕ್ತಿಯಲ್ಲಿ ಸ್ವಾತಂತ್ರ್ಯ ಯೋಧರ ಸ್ಮಾರಕ ಭವನವನ್ನು **ಕಟ್ಟಲು ರೂ.40 ಲಕ್ಷ ರೂ.ಗಳನ್ನು ಭರಿಸಲು ಪ್ರಸ್ತಾಪಿಸುತ್ತೇನೆ.**

**ಸ್ವಾತಂತ್ರ್ಯ ಹೋರಾಟಗಾರರ ಗೌರವಧನ:**

267. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದವರು ಪ್ರಸ್ತುತ ಮಾಸಿಕ 1500 ರೂ.ಗಳ ಗೌರವಧನ ಪಡೆಯುತ್ತಿದ್ದಾರೆ. ಈ ಮೊತ್ತವನ್ನು ಹೆಚ್ಚಿಸುವಂತೆ

ಹಲವಾರು ಸಂಘ ಸಂಸ್ಥೆಗಳಿಂದ ಮನವಿ ಮತ್ತು ಬೇಡಿಕೆಗಳು ಬಂದಿವೆ. ಇವರ ಮನವಿಯನ್ನು ಪರಿಗಣಿಸಿ ಸ್ವಾತಂತ್ರ್ಯ ಹೋರಾಟಗಾರರ **ಗೌರವಧನವನ್ನು 1,500 ರೂ.ಗಳಿಂದ 3,000 ರೂ.ಗಳಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.**

**ಗೋವಾ ವಿಮೋಚನಾ ಚಳವಳಿಗಾರರಿಗೆ ಗೌರವಧನ:**

268. ಕ್ವಿಟ್ ಇಂಡಿಯ ಚಳವಳಿ ಮತ್ತು 1947ರ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವಧನವನ್ನು ನೀಡಲಾಗುತ್ತಿದೆ. ಆದರೆ ಗೋವಾ ವಿಮೋಚನಾ ಚಳವಳಿಗಾರರಿಗೆ ಈ ಗೌರವಧನವನ್ನು ನೀಡುತ್ತಿಲ್ಲ. ಬಹಳ ದಿನಗಳಿಂದ ನೆನೆಗುದಿಯಲ್ಲಿದ್ದ ಬೇಡಿಕೆಯನ್ನು ಮೈತ್ರಿಕೂಟ ಸರ್ಕಾರ ಈಡೇರಿಸಲಿದೆ. ಆದ್ದರಿಂದ ಗೋವಾ ವಿಮೋಚನಾ ಚಳವಳಿಗಾರರ ಬಹಳ ದಿನಗಳ ಬೇಡಿಕೆಯನ್ನು ಮನ್ನಿಸಿ **ಅವರಿಗೆ ಮಾಸಿಕ 2000 ರೂ.ಗಳ** ಗೌರವಧನವನ್ನು ನೀಡಲು ನಾನು ಉದ್ದೇಶಿಸಿದ್ದೇನೆ.

269. ಸರ್ಕಾರ ಮತ್ತು ನಾಗರೀಕರ ನಡುವೆ ಸಂಪರ್ಕವನ್ನು ಹೆಚ್ಚಿಸಲು ನಮ್ಮ ಸರ್ಕಾರವು "ಕರ್ನಾಟಕ ಕರೆ ಕೇಂದ್ರ" ಎನ್ನುವ ಸಂಸ್ಥೆಯನ್ನು ಪ್ರಾರಂಭಿಸಲು ತೀರ್ಮಾನಿಸಿದೆ. ಇದರಿಂದಾಗಿ ಸಾರ್ವಜನಿಕರು ತಮ್ಮ ಕುಂದು ಕೊರತೆಗಳನ್ನು ಸರ್ಕಾರಕ್ಕೆ ತಿಳಿಸಲು ಬೆಂಗಳೂರು ಮತ್ತು ಇತರೇ ಜಿಲ್ಲಾ ಕೇಂದ್ರಕ್ಕೆ ಬರುವ ಅಗತ್ಯವಿರುವುದಿಲ್ಲ. ತಾವಿರುವ ಸ್ಥಳದಿಂದಲೇ ತಮ್ಮ ತೊಂದರೆಗಳನ್ನು ಈ ಕರೆ ಕೇಂದ್ರಕ್ಕೆ ತಿಳಿಸಬಹುದಾಗಿರುತ್ತದೆ. ಈ ಕೇಂದ್ರವು ಹೆಚ್ಚು ನೈಪುಣ್ಯತೆಯಿಂದ ಹಾಗೂ ದಕ್ಷತೆಯಿಂದ ಕೆಲಸ ನಿರ್ವಹಿಸಲು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಲ್ಲಿ ಕರೆ ಕೇಂದ್ರವನ್ನು ತೆರೆಯಲು ಯೋಜಿಸಲಾಗಿದೆ.

**ಸರ್ಕಾರಿ ನೌಕರರು**

270. ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ಸರ್ಕಾರವು ರಚಿಸಿದ 5ನೇ ವೇತನ ಆಯೋಗವು ತನ್ನ ವರದಿಯನ್ನು ನೀಡಿದೆ. ನಮ್ಮ ಸರ್ಕಾರವು ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಆಯೋಗವು ಶಿಫಾರಸ್ಸು ಮಾಡಿರುವಂತೆ **ದಿನಾಂಕ : 01-07-2005 ರಿಂದ ಸಾಂಕೇತಿಕವಾಗಿ ಅನ್ವಯವಾಗುವಂತೆ ವೇತನವನ್ನು ನಿಗದಿಪಡಿಸಲಾಗುವುದು.**

271. ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ಸಿಬ್ಬಂದಿಗಳಿಗೆ ನೀಡಬೇಕಾಗಿರುವ ಪ್ರಮುಖ ಭಾಗವನ್ನು ನೀಡಲಾಗಿದೆ. **1.4.2006 ರಿಂದ 31.3.2007 ರವರೆಗೆ ಬಾಕಿ ವೇತನವನ್ನು 2008-09ನೇ ಸಾಲಿನಲ್ಲಿ ವಿತರಿಸಲಾಗುವುದು.** ಪರಿಷ್ಕರಿಸಿದ ವೇತನ ಮತ್ತು ಪಿಂಚಣಿಯನ್ನು 1.4.2007 ರಿಂದ ವಿತರಿಸಲಾಗುವುದು.

**ವಾರ್ಷಿಕ ಯೋಜನೆ 2007-08**

272. ನಾನು ವಾರ್ಷಿಕ ಯೋಜನೆಯ ಅಂದಾಜನ್ನು 2006-07ರ ಮುಂಗಡ ಅಂದಾಜು 16166 ಕೋಟಿ ರೂ.ಗಳಿಂದ 2007-08ರ ಮುಂಗಡ ಅಂದಾಜು 17782.56 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದು ಯೋಜನಾ ಅಂದಾಜು ವೆಚ್ಚದಲ್ಲಿ ಶೇಕಡ 10 ರಷ್ಟು ಹೆಚ್ಚಳವಾಗಿದೆ. ಪ್ರಮುಖ ವಲಯವಾರು ಹಂಚಿಕೆಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಮಾನ್ಯರೆ,

ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮಂಡಿಸುತ್ತೇನೆ.

**ಜೇನ ಹನಿಯಂತೆ ತೆರಿಗೆ ಸಂಗ್ರಹ:**

273. ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಅತ್ಯಗತ್ಯ. "ಯಾವ ರೀತಿ ಜೇನುನೊಣಗಳು ಸ್ವಲ್ಪ ಸ್ವಲ್ಪ ಮಧುವನ್ನು ಸಂಗ್ರಹ ಮಾಡುತ್ತವೋ, ಅದೇ ರೀತಿ ಜನರಿಂದ ಸ್ವಲ್ಪ ಸ್ವಲ್ಪ ತೆರಿಗೆಯನ್ನು ಸಂಗ್ರಹಿಸಬೇಕು" ಎಂದು ಸ್ಮೃತಿಗಳಲ್ಲಿ ಹೇಳಿದೆ. ತೆರಿಗೆ ವಿಧಿಸುವ ಪ್ರಕ್ರಿಯೆಯಲ್ಲಿ ನಾನು ಈ ಹಿತೋಕ್ತಿಯಿಂದ ನಿರ್ದೇಶಿತನಾಗಿದ್ದೇನೆ. ತೆರಿಗೆ ಸಂಪನ್ಮೂಲ ಹೆಚ್ಚಿಸಲು ವಾಣಿಜ್ಯ ಇಲಾಖೆ ಗುಪ್ತವಾರ್ತೆ ವಿಭಾಗವನ್ನು ಬಲಪಡಿಸಲು ನಿರ್ಧರಿಸಿದ್ದೇನೆ.

**ವಾಣಿಜ್ಯ ತೆರಿಗೆಗಳು :**

**ಮೌಲ್ಯವರ್ಧಿತ ತೆರಿಗೆ :**

274. ಸಭಾಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಆದಾಯ ನಾವು ನಿರೀಕ್ಷಿಸಿದ ಮಟ್ಟಕ್ಕೆ ಬಂದಿದ್ದರೂ ಅದರಲ್ಲಿ ಇನ್ನೂ ಸುಧಾರಣೆ ಆಗಬೇಕಾಗಿದೆ. ಬಹುತೇಕ ವಾಣಿಜ್ಯ ಮತ್ತು ಉದ್ಯಮಗಳು ತಮ್ಮ ತೆರಿಗೆ ಅನುವರ್ತನೆಯನ್ನು ಉತ್ತಮಗೊಳಿಸಿದ್ದರೂ, ಕೆಲವು ವ್ಯಾಪಾರಿಗಳು ಈ ವಿಷಯದಲ್ಲಿ ಬಹಳ ಹಿಂದಿದ್ದಾರೆ. ಇವರುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ರಾಜ್ಯದ ತೆರಿಗೆ ಆದಾಯ ಹೆಚ್ಚಿಸಲು ಸರ್ಕಾರ ಉದ್ದೇಶಿಸಿರುತ್ತದೆ. ಇದಕ್ಕೆ ಅಗತ್ಯವಾದ ಕಾನೂನು ತಿದ್ದುಪಡಿಗಳನ್ನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾವಿಸಲಾಗಿದೆ.

**ಪರಿಹಾರಗಳು :**

275. ಹಲವಾರು ತೆರಿಗೆ ವಿನಾಯಿತಿ, ರಿಯಾಯಿತಿ ಹಾಗೂ ಇತರ ಪರಿಹಾರಗಳನ್ನು ಕೋರುತ್ತಾ ವಾಣಿಜ್ಯ ಉದ್ಯಮಗಳ ಸಂಘ ಸಂಸ್ಥೆಗಳಿಂದ ಮನವಿಗಳು ಬಂದಿರುತ್ತವೆ. ಎಲ್ಲಾ ರಾಜ್ಯಗಳ ಒಟ್ಟಾರೆ ಅಭಿಪ್ರಾಯದ ಆಧಾರದ ಮೇಲೆ ರಾಜ್ಯದಲ್ಲಿ ಜಾರಿಯಲ್ಲಿರುವ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಮಾರ್ಪಾಡು ಮಾಡಲು ರಾಜ್ಯಕ್ಕಿರುವ ಸೀಮಿತ ಅವಕಾಶದಲ್ಲಿ ಸಾಧ್ಯವಿರುವ ಕೆಲವು ಕೋರಿಕೆಗಳನ್ನು ಪರಿಗಣಿಸಲು ನಾನು ಉದ್ದೇಶಿಸಿರುತ್ತೇನೆ.

276. ಅದರಂತೆ, ಸಾಮಾನ್ಯ ಜನ ಬಳಸುವ ಅಕ್ಕಿ, ಭತ್ತ ಮತ್ತು ಗೋಧಿ ಹಾಗೂ ಅಕ್ಕಿ ಮತ್ತು ಗೋಧಿ ಪದಾರ್ಥಗಳು ಹಾಗೂ ದ್ವಿದಳ ಧಾನ್ಯಗಳ ಮೇಲಿನ ತೆರಿಗೆ ವಿನಾಯಿತಿಯನ್ನು ಮತ್ತೊಂದು ವರ್ಷಕ್ಕೆ ಮುಂದುವರೆಸಲು ನಾನು ಪ್ರಸ್ತಾವಿಸುತ್ತೇನೆ.

277. ಇದಲ್ಲದೆ,

(1) ಟ್ರಾಕ್ಟರ್‌ಗಳ ರಬ್ಬರ್ ಟೈರುಗಳು ಮತ್ತು ಟ್ಯೂಬುಗಳು,

(2) ಸಾಫ್ಟ್‌ವೇರ್ ಲೈಸೆನ್ಸ್ ಮತ್ತು

(3) ಉಪಯೋಗಿಸಿದ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ಶೇ. 12.5 ರಿಂದ ಶೇ. 4ಕ್ಕೆ ಇಳಿಸಲು ನಾನು ಪ್ರಸ್ತಾಪಿಸುತ್ತೇನೆ.

278. ಶೇ. 4ರ ತೆರಿಗೆಗೆ ಒಳಗಾಗುವ ಕೈಗಾರಿಕಾ ಕಚ್ಚಾ ವಸ್ತುಗಳು ಮತ್ತು ಬಂಡವಾಳ ಸರಕುಗಳ ಪಟ್ಟಿಗೆ ಮತ್ತಷ್ಟು ಸರಕುಗಳನ್ನು ಸೇರಿಸಲು ನಾನು ಪ್ರಸ್ತಾವಿಸುತ್ತೇನೆ.

279. ವಿಶೇಷ ಆರ್ಥಿಕ ವಲಯ ನಿರ್ಮಾಣಗಾರರು ಮತ್ತು ಅಲ್ಲಿರುವ ಘಟಕಗಳ ಖರೀದಿಯ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

280. ಇದಲ್ಲದೆ,

(1) ರಾಜಿ ತೆರಿಗೆ ಸೌಲಭ್ಯದಡಿಯಲ್ಲಿರುವ ಗುತ್ತಿಗೆದಾರರಿಗೆ ತೆರಿಗೆ ಸಂಗ್ರಹಿಸಲು ಅನುಮತಿ ನೀಡಲು,

(2) ಮಾರಾಟದ ಬಗ್ಗೆ ತೆರಿಗೆ ಇನ್ವಾಯಿಸ್ ನೀಡಲು ಕನಿಷ್ಟ ಮೊತ್ತವನ್ನು ನಿಗದಿ ಪಡಿಸಲು,

(3) ಮಾಸಿಕ ರಿಟರ್ನ್ ಸಲ್ಲಿಕೆಯಲ್ಲಿ ಆದ ವಿಳಂಬದ ಬಗ್ಗೆಯ ದಂಡವನ್ನು ಕಡಿಮೆ ಮಾಡಲು,

(4) ಟ್ಯಾಕ್ಸ್ ಇನ್ವಾಯಿಸ್ ಮೇಲೆ ಡಿಜಿಟಲ್ ಸಹಿ ಮಾಡಲು ಅವಕಾಶ ನೀಡಲು,

(5) ಲೆಕ್ಕ ಪರಿಶೋಧನೆಗಾಗಿ ನಿಗದಿ ಮಾಡಿರುವ ವಹಿವಾಟಿನ ಮಿತಿಯನ್ನು ಏರಿಸಲು,

(6) ಲೆಕ್ಕ ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸದೇ ಇರುವ ಬಗ್ಗೆ ಇರುವ ದಂಡವನ್ನು ಇಳಿಸಲು,

(7) ಮುಖ್ಯ ಕಾಮಗಾರಿ ಗುತ್ತಿಗೆದಾರರ ವಹಿವಾಟಿನಲ್ಲಿ ಉಪ ಗುತ್ತಿಗೆದಾರರಿಗೆ ಪಾವತಿಸಬೇಕಾದ ಮೊತ್ತಗಳಿಗೆ ಕಡಿತ ನೀಡಲು,

(8) ಪೆಟ್ರೋಲಿಯಂ ಪದಾರ್ಥಗಳು ಹಾಗೂ ಅಂತರ ರಾಜ್ಯ ಸರಕು ವರ್ಗಾವಣೆ ಸಂಬಂಧದ ಹೂಡುವಳಿ ತೆರಿಗೆ ಕಡಿತದ ದರದಲ್ಲಿ ಮಾರ್ಪಾಡು ಮಾಡಲು,

(9) ಕಾಸ್ಟ್ ಅಕೌಂಟೆಂಟ್‌ಗಳು ವ್ಯಾಪಾರಿಗಳ ಲೆಕ್ಕ ಪರಿಶೋಧನೆ ಮಾಡಲು ಅವಕಾಶ ಮಾಡಲು ಮತ್ತು

(10) ಒಂದಕ್ಕಿಂತ ಹೆಚ್ಚಿನ ವ್ಯಾಪಾರಗಳಲ್ಲಿ ತೊಡಗಿರುವ ಒಬ್ಬನೇ ವ್ಯಾಪಾರಿಗೆ ರಾಜಿ ತೆರಿಗೆ ಪಾವತಿ ಸೌಲಭ್ಯ ಆಯ್ಕೆ ಮಾಡಲು ಅವಕಾಶ ನೀಡಲು ನಾನು ಪ್ರಸ್ತಾಪಿಸುತ್ತೇನೆ.

**ಸುಧಾರಣಾ ಕ್ರಮಗಳು:**

281. ತೆರಿಗೆ ಪಾವತಿ ಕಾರ್ಯವನ್ನು ಸರಳಗೊಳಿಸಲು ಹಾಗೂ ತೆರಿಗೆ ಆಡಳಿತವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಲು ನಾನು ಕೆಲವು ಸುಧಾರಣಾ ಕ್ರಮಗಳನ್ನು ತರಲು ಪ್ರಸ್ತಾಪಿಸುತ್ತೇನೆ. ಈ ಕ್ರಮಗಳ ವಿವರಗಳು ಅನುಬಂಧ-2 ರಲ್ಲಿ ಇರುತ್ತವೆ.

282. ಇದಲ್ಲದೆ, ಅಬಕಾರಿ ಕಾಯ್ದೆಯಡಿಯಲ್ಲಿ ಶುಲ್ಕ ವಿಧಿಸಲು ಕಾನೂನು ತೊಡಕಿರುವ ಕಾಕಂಬಿ (ಮೊಲಾಸೆಸ್), ಈಥೈಲ್ ಆಲ್ಕೋಹಾಲ್, ಡೀನೇಚರ್ಡ್ ಸ್ಪಿರಿಟ್ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ಗಳ ಮೇಲೆ ಶೇ. 20ರ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

**ಮಾರಾಟ ತೆರಿಗೆ:**

**ಪರಿಹಾರಗಳು:**

283. ಸ್ವಯಂ ವಿದ್ಯುಚ್ಛಕ್ತಿ ಉತ್ಪಾದನೆಗೆ ಖರೀದಿಸುವ ಡೀಸೆಲ್ ಮೇಲೆ ನೀಡಿರುವ ಶೇ. 4ರ ತೆರಿಗೆ ವಿನಾಯಿತಿ ಬಗ್ಗೆ ಸ್ವಯಂ ಪ್ರಮಾಣ ಪತ್ರ ನೀಡಲು ಅವಕಾಶ ಮಾಡಿಕೊಡಲು ನಾನು ಪ್ರಸ್ತಾವಿಸುತ್ತೇನೆ.

**ಪ್ರವೇಶ ತೆರಿಗೆ:**

**ಪರಿಹಾರಗಳು:**

284. ಅಂತರ ರಾಜ್ಯ ಮಾರಾಟ ಹಾಗೂ ಸರಕು ವರ್ಗಾವಣೆಯಂತೆ ರಾಜ್ಯದ ಹೊರಗೆ ಕಳುಹಿಸಿದ ಸರಕುಗಳ ವಾಪಸಾತಿಗೆ ಸಂಬಂಧಿಸಿದ ಪ್ರವೇಶದ ಮೇಲೆ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ.

285. ಇದಲ್ಲದೇ, ರಾಜ್ಯದ ಮಂಗಳೂರಿನಲ್ಲಿರುವ ಓಎನ್‌ಜಿಸಿ ಸ್ವಾಮ್ಯದ ತೈಲ ಸಂಸ್ಕರಣಾ ಘಟಕ ತರಿಸುವ ಕಚ್ಚಾ ತೈಲದ ಮೇಲೆ ತೆರಿಗೆಯನ್ನು ಶೇ. 1ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

**ವೃತ್ತಿ ತೆರಿಗೆ:**

**ಸುಧಾರಣಾ ಕ್ರಮಗಳು:**

286. (1) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ವೃತ್ತಿ ತೆರಿಗೆಯನ್ನು ಅವರ ಸೇವೆ ಪಡೆಯುತ್ತಿರುವವರು,

(2) ಬಾಡಿಗೆ ಆಧಾರದ ಮೇಲೆ ಪಡೆದುಕೊಳ್ಳುವ ವಾಣಿಜ್ಯ ವಾಹನಗಳ ಮಾಲೀಕರ ವೃತ್ತಿ ತೆರಿಗೆಯನ್ನು ಅಂತಹ ವಾಹನಗಳನ್ನು ಉಪಯೋಗಿಸುವವರು,

(3) ಕುದುರೆ ಮಾಲೀಕರು, ಸವಾರರು ಮತ್ತು ಬುಕ್ಕಿಗಳ ವೃತ್ತಿ ತೆರಿಗೆಯನ್ನು ರೇಸ್ ಕ್ಲಬ್‌ಗಳು ಮತ್ತು

(4) ಆಸ್ಪತ್ರೆಗಳಿಗೆ ಮತ್ತು ನರ್ಸಿಂಗ್ ಹೋಂಗಳಿಗೆ ಭೇಟಿ ನೀಡುವ ವೈದ್ಯಕೀಯ ಪರಿಣಿತರ ವೃತ್ತಿ ತೆರಿಗೆಯನ್ನು ಅಂತಹ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳೇ ಮೂಲದಲ್ಲಿಯೇ ಕಡಿತ ಮಾಡಿ ಸರ್ಕಾರಕ್ಕೆ ಪಾವತಿಸುವಂತೆ ಕಾಯ್ದೆಗೆ ತಿದ್ದುಪಡಿ ತರಲು ನಾನು ಪ್ರಸ್ತಾವಿಸುತ್ತೇನೆ.

287. ಇದಲ್ಲದೇ, ಸ್ವಯಂ ವೃತ್ತಿ ನಿರತ ವ್ಯಕ್ತಿಗಳು ವಾರ್ಷಿಕ ವಿವರ ಪಟ್ಟಿ (ರಿಟರ್ನ್) ಸಲ್ಲಿಸುವಂತೆ ನಿಯಮ ತರಲು ಹಾಗೂ ಒಂದಕ್ಕಿಂತ ಹೆಚ್ಚು ವ್ಯಾಪಾರ ಸ್ಥಳ ಹೊಂದಿರುವ ಉದ್ಯೋಗದಾತರು ನೊಂದಣಿಗೆ ಒಂದೇ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲು ನಾನು ಪ್ರಸ್ತಾವಿಸುತ್ತೇನೆ.

**ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು:**

288. ಈ ಮುಂದಿನ ಕೆಲವು ವೃತ್ತಿ ವರ್ಗದವರನ್ನು ತೆರಿಗೆ ವ್ಯಾಪ್ತಿಗೆ ತರಲು ನಾನು ಪ್ರಸ್ತಾವಿಸುತ್ತೇನೆ.

(1) ವಾಹನ ನಿಲ್ದಾಣ ಸೇವೆ ಒದಗಿಸುವ ಗುತ್ತಿಗೆದಾರರು,

(2) ಆಯುರ್ವೇದ ಮುಂತಾದ ಮಸಾಜ್ ಪಾರ್ಲರ್‌ಗಳು,

(3) ಉಪಯೋಗಿಸಿದ ಮೋಟಾರು ವಾಹನಗಳ ಮಾರಾಟ ಏಜೆಂಟ್‌ಗಳು ಮತ್ತು ಸಲಹೆಗಾರರು / ಬ್ರೋಕರ್‌ಗಳು,

(4) ಕಂಪನಿಗಳ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳು,

(5) ವರಮಾನ ತೆರಿಗೆದಾತರಾದ ಆದರೆ ವೃತ್ತಿ ತೆರಿಗೆ ಕಾಯ್ದೆ ಅನುಸೂಚಿಯಲ್ಲಿಲ್ಲದ ಯಾವುದೇ ಸ್ವಯಂ ವೃತ್ತಿ ನಿರತ ವ್ಯಕ್ತಿಗಳು.

289. ಇದಲ್ಲದೇ ಶಿಕ್ಷಣ ಸಂಸ್ಥೆಗಳು ಮತ್ತು ಟ್ಯುಟೋರಿಯಲ್‌ಗಳನ್ನು ನಡೆಸುವ ವ್ಯಕ್ತಿಗಳಿಗಿರುವ ತೆರಿಗೆ ವಿನಾಯಿತಿಯನ್ನು ಹಿಂತೆಗೆದುಕೊಳ್ಳಲು ನಾನು ಪ್ರಸ್ತಾವಿಸುತ್ತೇನೆ.

**ಮನರಂಜನಾ ತೆರಿಗೆ :**

**ಪರಿಹಾರಗಳು :**

290. (1) ಮಲ್ಟಿ ಸಿಸ್ಟಂ ಆಪರೇಟರುಗಳು ತೆರಬೇಕಾದ ತೆರಿಗೆಯನ್ನು ಶೇ. 10 ರಿಂದ ಶೇ. 6ಕ್ಕೆ ಮತ್ತು

(2) ಅಮ್ಯೂಸ್‌ಮೆಂಟ್ ಪಾರ್ಕ್‌ಗಳ ಮಾಲೀಕರು ತೆರಬೇಕಾದ ತೆರಿಗೆಯನ್ನು ಶೇ. 20 ರಿಂದ ಶೇ. 10ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

291. ನಶಿಸಿ ಹೋಗುತ್ತಿರುವ ನಾಟಕ ಕಲೆಯನ್ನು ರಕ್ಷಿಸುವ ಸಲುವಾಗಿ ಅವುಗಳ ಪ್ರವೇಶದ ಮೇಲೆ ವಿಧಿಸಲಾಗುತ್ತಿರುವ ಮನರಂಜನಾ ತೆರಿಗೆಯನ್ನು ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

**ವಿಲಾಸಿ ತೆರಿಗೆ :**

**ಪರಿಹಾರ :**

292. ಬಹುತೇಕ ರಾಜ್ಯಗಳಲ್ಲಿರುವಂತೆ, ರಾಜ್ಯದಲ್ಲೂ ಕೂಡ ಹೋಟೆಲುಗಳು ವಾಸ್ತವಿಕವಾಗಿ ವಸೂಲು ಮಾಡುವ ಬಾಡಿಗೆ ಮೊತ್ತಗಳ ಮೇಲೆ ಮಾತ್ರ ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

**ಸುಧಾರಣಾ ಕ್ರಮ :**

293. ಆಸ್ಪತ್ರೆಗಳಲ್ಲಿ ಒದಗಿಸುವ ವಿಲಾಸಿ ಸೌಲಭ್ಯಗಳ ಮೇಲೆ ತೆರಿಗೆ ವಿಧಿಸುವ ಕಲಂನಲ್ಲಿರುವ ಗೊಂದಲವನ್ನು ತೆಗೆದು ಹಾಕಲು ಅದಕ್ಕೆ ಸೂಕ್ತ ತಿದ್ದುಪಡಿ ತರಲು ನಾನು ಪ್ರಸ್ತಾವಿಸುತ್ತೇನೆ.

294. **ತತ್ಸಂಬಂಧ ತಿದ್ದುಪಡಿಗಳು:** ಮೇಲೆ ಪ್ರಸ್ತಾಪಿಸಿದ ಕ್ರಮಗಳನ್ನು ಜಾರಿಗೊಳಿಸಲು ಸಂಬಂಧಪಟ್ಟ ತೆರಿಗೆ ಅಧಿನಿಯಮಗಳಿಗೆ ತಿದ್ದುಪಡಿ ಅವಶ್ಯಕತೆ ಇರುತ್ತದೆ. ಸದರಿ ತಿದ್ದುಪಡಿಗಳಲ್ಲದೇ ಸುಧಾರಣಾ ಕ್ರಮವಾಗಿ ಇತರೆ ತಿದ್ದುಪಡಿಗಳನ್ನು ಸಹ ಮಂಡಿಸಲಾಗುವುದು.

**ಲಾಟರಿ :**

295. ರಾಜ್ಯದಲ್ಲಿ ಪ್ರಸ್ತುತ ಪೇಪರ್ ಲಾಟರಿ ಮತ್ತು ಇಂಟರ್‌ನೆಟ್ ಸೇರಿದಂತೆ ಆನ್‌ಲೈನ್ ಲಾಟರಿಗಳನ್ನು ನಡೆಸಲಾಗುತ್ತಿದ್ದು, ಇವುಗಳನ್ನು

ಸಮಾಜದ ಮತ್ತು ಬಡಜನರ ಹಿತದೃಷ್ಟಿಯಿಂದ ಮುಂದುವರೆಸಬಾರದೆನ್ನುವುದು ಜನತೆಯ ಹಾಗೂ ಸರ್ಕಾರದ ಇಚ್ಛೆಯಾಗಿರುತ್ತದೆ. ಅದರಂತೆ ಮುಂದಿನ ಆರ್ಥಿಕ ವರ್ಷದಿಂದ ರಾಜ್ಯದಲ್ಲಿ ಎಲ್ಲಾ ತರಹದ ಲಾಟರಿಗಳನ್ನು ನಿಷೇಧಿಸಿ, ಕರ್ನಾಟಕ ರಾಜ್ಯವನ್ನು 'ಲಾಟರಿ ಮುಕ್ತ ವಲಯ' ಎಂದು ಘೋಷಿಸಲು ನಾನು ಪ್ರಸ್ತಾವಿಸುತ್ತೇನೆ. ಲಾಟರಿಗಳ ನಿಷೇಧದಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 250 ಕೋಟಿ ರೂಪಾಯಿಗಳ ನಷ್ಟವಾಗಲಿದ್ದು, ಅದನ್ನು ತೆರಿಗೆ ಸಂಗ್ರಹಣೆ ಕಾರ್ಯವನ್ನು ಇನ್ನಷ್ಟು ಬಲಪಡಿಸುವ ಮೂಲಕ ಭರಿಸಿಕೊಳ್ಳುವ ವಿಶ್ವಾಸ ನನಗಿರುತ್ತದೆ. ಇದಲ್ಲದೆ, ಲಾಟರಿ ಟಿಕೇಟುಗಳನ್ನು ಮಾರಾಟ ಮಾಡಿ ಬದುಕುವ ಹಲವಾರು ಜನರು ನಿರುದ್ಯೋಗಿಗಳಾಗುವ ಸಂಭವ ಸರ್ಕಾರದ ಗಮನದಲ್ಲಿದ್ದು, ಅವರುಗಳು ನಿಪುಣತೆ ಅಭಿವೃದ್ಧಿಯಲ್ಲಿ ತರಬೇತಿ ಪಡೆಯಲು ಮುಂದೆ ಬಂದ ಪಕ್ಷದಲ್ಲಿ ಅವರಿಗೆ 'ಕರ್ನಾಟಕ ಸುವರ್ಣ ಕಾಯಕ ಯೋಜನೆ' ಯಡಿಯಲ್ಲಿ ಆದ್ಯತೆ ಕೊಡುವ ಭರವಸೆ ನಾನು ನೀಡುತ್ತೇನೆ.

**ಅಬಕಾರಿ**

296. 2006-07 ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಒಟ್ಟು 4400 ಕೋಟಿ ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಇದರಲ್ಲಿ 1905 ಕೋಟಿ ರೂಪಾಯಿಗಳು, ಅಂದರೆ ಒಟ್ಟು ಆದಾಯದ ಶೇಕಡಾ 43 ರಷ್ಟು ಆದಾಯವು ಸಾರಾಯಿ ಮೂಲದಿಂದಲೇ ಬರಲಿದೆ.

297. ಆದರೆ ಸ್ತ್ರೀಶಕ್ತಿ ಸ್ವಸಹಾಯ ಸಂಘ, ದಲಿತ ವಿಮೋಚನಾ ರಂಗ, ದಲಿತ ಸಂಘರ್ಷ ಸಮಿತಿ ಹಾಗೂ ಇತರೆ ಸಂಘ ಸಂಸ್ಥೆಗಳಲ್ಲದೆ ಕೆಲವು ಗ್ರಾಮ ಪಂಚಾಯ್ತಿಗಳು ಸಾರಾಯಿ ಮಾರಾಟ ನಿಷೇಧಿಸಲು ತೀವ್ರ ಹೋರಾಟ ನಡೆಸುತ್ತಿರುತ್ತವೆ. ಆದುದರಿಂದ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ

ಆದಾಯವಿದ್ದರೂ ಸಹ ಸರ್ಕಾರವು ಈ ಬೇಡಿಕೆಗಳಿಗೆ ಸ್ಪಂದಿಸಿ ಸಾರಾಯಿ ಸೇವನೆಯು ಸಮಾಜದ ಮೇಲೆ ಅದರಲ್ಲೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಜನತೆಯ ಮೇಲೆ ದುಷ್ಪರಿಣಾಮ ಮಾಡುತ್ತಿರುವುದನ್ನು ಅತ್ಯಂತ ಕಳಕಳಿಯಿಂದ ಪರಿಗಣಿಸಿದೆ. ಸರ್ಕಾರದ ರಾಜಸ್ವಕ್ಕೆ ಹೆಚ್ಚಿನ ಹಿನ್ನಡೆಯಾದರೂ ಸಹ ಹಿಂದುಳಿದ ಮತ್ತು ಬಡ ಜನರ ಶ್ರೇಯೋಭಿವೃದ್ಧಿ ದೃಷ್ಟಿಯಿಂದ ಇಡೀ ರಾಜ್ಯದಲ್ಲಿ ದಿನಾಂಕ : 1.7.2007 ರಿಂದ ಸಾರಾಯಿ ನಿಷೇಧವನ್ನು ಜಾರಿಗೊಳಿಸಲು ಪ್ರಸ್ತಾವಿಸುತ್ತೇನೆ.

298. ಸಾರಾಯಿ ನಿಷೇಧ ಮಾಡುವುದರಿಂದ ಸರ್ಕಾರದ ಜವಾಬ್ದಾರಿ ಹೆಚ್ಚಾಗಲಿದೆ. ಇದರ ಪೂರ್ಣ ಅರಿವು ಸರ್ಕಾರಕ್ಕೆ ಇದೆ. ಸಾರಾಯಿ ನಿಷೇಧವನ್ನು ಸಮಾಜಘಾತುಕ ವ್ಯಕ್ತಿಗಳು ದುರುಪಯೋಗಪಡಿಸಿಕೊಂಡು ಕಳ್ಳಭಟ್ಟಿ, ನಕಲಿ ಮದ್ಯ ತಯಾರಿಕೆ, ಸಾಗಾಣಿಕೆ ಮತ್ತು ಮಾರಾಟ ಮಾಡುವ ದುಷ್ಕೃತ್ಯಗಳಲ್ಲಿ ತೊಡಗುವ ಸಾಧ್ಯತೆಗಳಿರುತ್ತವೆ. ಅಬಕಾರಿ ಇಲಾಖೆಗೆ ಮಾತ್ರ ಇಂತಹ ಕೃತ್ಯಗಳನ್ನು ತಡೆಗಟ್ಟುವುದು ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ದೃಷ್ಟಿಯಿಂದ ಇನ್ನು ಮುಂದೆ ಅಬಕಾರಿ ಅಪರಾಧಗಳನ್ನು ತಡೆಗಟ್ಟುವಲ್ಲಿ ಅಬಕಾರಿ ಮತ್ತು ಪೊಲೀಸ್ ಇಲಾಖೆಗೆ ನೀಡಿರುವ ಅಧಿಕಾರವನ್ನು ಕೆಳಗಿನಂತೆ ಪುನರ್ ವಿಭಜಿಸಲು ಪ್ರಸ್ತಾವಿಸುತ್ತೇನೆ :-

(ಅ) ಅಬಕಾರಿ ಕಾಯ್ದೆ ಹಾಗೂ ನಿಯಮಗಳಡಿಯಲ್ಲಿ ಸನ್ನದು ಪಡೆದಿರುವ ಸನ್ನದುದಾರರು ಅಥವಾ ಅಧಿಕೃತ ವ್ಯಕ್ತಿಗಳು ಅಬಕಾರಿ ಕಾಯ್ದೆ ಹಾಗೂ ಅದರಡಿಯಲ್ಲಿನ ನಿಯಮಗಳನ್ನು ಉಲ್ಲಂಘಿಸದಂತೆ ನಿಯಂತ್ರಣ ಮಾಡುವುದು, ಅಪರಾಧಗಳನ್ನು ಮಾಡಿದ್ದಲ್ಲಿ ಅಂತಹ ಅಪರಾಧಗಳನ್ನು ಪತ್ತೆ ಮಾಡುವುದು, ತನಿಖೆ ನಡೆಸಿ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವುದು ಅಬಕಾರಿ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ.

(ಆ) ಸನ್ನದುದಾರರಲ್ಲದ ಹಾಗೂ ಅಧಿಕೃತ ಪರವಾನಿಗೆ ಹೊಂದಿಲ್ಲದ ಇತರ ವ್ಯಕ್ತಿಗಳು ಅಬಕಾರಿ ಕಾಯ್ದೆ ಹಾಗೂ ಅದರಡಿಯಲ್ಲಿ ರಚಿತವಾದ ಯಾವುದೇ ನಿಯಮಗಳನ್ವಯ ಯಾವುದೇ ಅಪರಾಧ ಹಾಗೂ ಕಾನೂನು ಉಲ್ಲಂಘನೆ ಮಾಡಿದ್ದಲ್ಲಿ ಅಂತಹ ಅಪರಾಧಗಳನ್ನು ಪತ್ತೆ ಹಚ್ಚುವುದು, ನಿಯಂತ್ರಿಸುವುದು, ಅಪರಾಧಗಳ ತನಿಖೆ, ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳುವುದು ಪೊಲೀಸ್ ಇಲಾಖೆಯ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ.

299. ಕಳ್ಳಭಟ್ಟಿ ತಯಾರಕರನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಪೊಲೀಸ್ ಇಲಾಖೆಯು ವಿಶೇಷ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗಿರುತ್ತದೆ. ಕಳ್ಳಭಟ್ಟಿ ತಯಾರಿಕೆಯಲ್ಲಿ ತೊಡಗುವಂತಹ ದುಷ್ಟಶಕ್ತಿಗಳ ಮೇಲೆ ದಿ ಪ್ರಿವೆನ್ಷನ್ ಆಫ್ ಡೇಂಜರಸ್ ಆಕ್ಟಿವಿಟೀಸ್ ಆಫ್ ಬೂಟ್‌ಲೆಗ್ಗರ್ಸ್, ಡ್ರಗ್-ಅಫೆಂಡರ್ಸ್, ಗ್ಯಾಂಬ್ಲರ್ಸ್, ಗೂಂಡಾಸ್, ಇಮ್ಮಾರಲ್ ಟ್ರಾಫಿಕ್-ಅಫೆಂಡರ್ಸ್ ಅಂಡ್ ಸ್ಲಮ್ ಗ್ರಾಬರ್ಸ್ ಕಾಯ್ದೆ, 1985 ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಯು ವಿಶೇಷ ಕಾರ್ಯಕ್ರಮ ರೂಪಿಸಲು ಪ್ರಸ್ತಾವಿಸುತ್ತೇನೆ. ಈ ಬಗ್ಗೆ ಪೊಲೀಸ್ ಇಲಾಖೆಯಲ್ಲಿ ವಿಶೇಷ ಸಿಬ್ಬಂದಿಯನ್ನು ನಿಯೋಜಿಸುವ ಬಗ್ಗೆ ಹಾಗೂ ವಾಹನ ಸಂಪರ್ಕ ಸಾಧನಗಳನ್ನು ಹೊಂದುವ ದೃಷ್ಟಿಯಿಂದ 25 ಕೋಟಿ ರೂ.ಗಳ ವಿಶೇಷ ಅನುದಾನವನ್ನು ನೀಡಲು ಪ್ರಸ್ತಾವಿಸುತ್ತೇನೆ. ಅದೇ ರೀತಿ ಅಬಕಾರಿ ಇಲಾಖೆಗೆ ಬೇಕಾದಂತಹ ಹೆಚ್ಚಿನ ಸಿಬ್ಬಂದಿ, ವಾಹನ ಹಾಗೂ ಇತರ ಸಂಪರ್ಕ ಸಾಧನಗಳನ್ನು ಒದಗಿಸಲು 25 ಕೋಟಿ ರೂ.ಗಳ ವಿಶೇಷ ಅನುದಾನವನ್ನು ನೀಡಲು ಪ್ರಸ್ತಾವಿಸುತ್ತೇನೆ.

300. ಕಳ್ಳಭಟ್ಟಿ ಸಾರಾಯಿ ಹಾಗೂ ಕಲಬೆರಕೆ ಮದ್ಯಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸಾಮಾಜಿಕ ಸಂಸ್ಥೆಗಳು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು, ಗ್ರಾಮ

ಪಂಚಾಯ್ತಿ, ಮಠ ಮಾನ್ಯಗಳ ಸಹಕಾರ ಮತ್ತು ಸಹಾಯವನ್ನು ಪಡೆಯಲಾಗುವುದು. ಇಲಾಖಾ ವತಿಯಿಂದ, ದೃಶ್ಯ, ಶ್ರವ್ಯ, ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನಡೆಸುವ ಸಲುವಾಗಿ 10 ಕೋಟಿ ರೂ.ಗಳ ವಿಶೇಷ ಅನುದಾನ ನೀಡಲು ಪ್ರಸ್ತಾವಿಸುತ್ತೇನೆ.

301. ಸಾರಾಯಿ ಮಾರಾಟದಲ್ಲಿ ತೊಡಗಿರುವ ಹಲವಾರು ಕುಟುಂಬಗಳು ಕೂಡಲೇ ಸೂಕ್ತ ಉದ್ಯೋಗವನ್ನು ಪಡೆಯಲಾರವು ಎಂಬ ಅರಿವು ನನಗಿದೆ. ನಮ್ಮ ಸರ್ಕಾರವು **"ಸುವರ್ಣ ಕಾಯಕ"** ಎಂಬ ಹೆಸರಿನಲ್ಲಿ ಕಾರ್ಯೋನ್ಮುಖವಾಗಿರುವ ಕೈಗಾರಿಕೆಗಳಲ್ಲಿ ಒಂದು ಲಕ್ಷ ಜನರಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸುತ್ತಿದೆ. ತರಬೇತಿಯ ಸಮಯದಲ್ಲಿ ಇವರಿಗೆ ಸಹಾಯಧನ (Stipend) ನೀಡಲಾಗುವುದು. ಈ ಕಾರ್ಯಕ್ರಮದಲ್ಲಿ ಸಾರಾಯಿ ಮಾರಾಟವನ್ನು ರದ್ದುಪಡಿಸಿದ್ದರಿಂದ ನಿರುದ್ಯೋಗಿಗಳಾದವರಿಗೆ ಆದ್ಯತೆಯನ್ನು ನೀಡಲು ತೀರ್ಮಾನಿಸಲಾಗಿದೆ.

302. ಪ್ರಸ್ತುತ ರಾಜ್ಯದಾದ್ಯಂತ 15248 ಅಂಗಡಿಗಳ ಮುಖಾಂತರ ಸಾರಾಯಿ ಮಾರಾಟ ಮಾಡಲಾಗುತ್ತಿದೆ. ದಿನಾಂಕ : 01.07.2007 ರಿಂದ ಈ ಎಲ್ಲಾ ಸಾರಾಯಿ ಅಂಗಡಿಗಳನ್ನು ಮುಚ್ಚಲಾಗುವುದು. ಹೀಗೆ ಮುಚ್ಚಲಾದ ಅಂಗಡಿಗಳಿಗೆ ಬದಲಾಗಿ ಅದೇ ಸ್ಥಳದಲ್ಲಿ ಹೊಸದಾಗಿ ಭಾರತೀಯ ಮದ್ಯದ ಚಿಲ್ಲರೆ ಮದ್ಯ ಮಾರಾಟದ ಸನ್ನದುಗಳನ್ನು ನೀಡಲಾಗುವುದಿಲ್ಲ. ಭಾರತೀಯ ಮದ್ಯದ ಚಿಲ್ಲರೆ ಮದ್ಯ ಮಾರಾಟ ಸನ್ನದು (ಸಿಎಲ್-2) ಗಳನ್ನು ಜನಸಂಖ್ಯೆಯ ಆಧಾರದ ಮೇಲೆ ನಿಯಮಾನುಸಾರ ನೀಡಲಾಗುತ್ತದೆ. ಇನ್ನು ಮುಂದೆ ಸಹಾ ಚಿಲ್ಲರೆ ಮದ್ಯ ಮಾರಾಟ ಸನ್ನದುಗಳನ್ನು ಈ ನೀತಿಯನ್ವಯವೇ ನೀಡಲಾಗುವುದು. ಈ ಬಗ್ಗೆ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ ಸನ್ನದುಗಳನ್ನು

ನೀಡಲಾಗುವುದು. ಒಂದು ವೇಳೆ ನೀಡಬಹುದಾದ ಚಿಲ್ಲರೆ ಮದ್ಯದ ಅಂಗಡಿ (ಸಿಎಲ್-2) ಸನ್ನದುಗಳ ಸಂಖ್ಯೆಗಿಂತ ಹೆಚ್ಚಿನ ಅರ್ಜಿಗಳು ಬಂದಲ್ಲಿ, ಅಬಕಾರಿ ನಿಯಮಗಳ ಅನುಸಾರ ಜಿಲ್ಲಾಧಿಕಾರಿಗಳು ಲಾಟರಿ ಮೂಲಕ ಯಾರಿಗೆ ಸನ್ನದು ನೀಡಬೇಕೆಂಬುದನ್ನು ನಿರ್ಧರಿಸಿ ನಿಯಮಾನುಸಾರ ಸನ್ನದು ಮಂಜೂರು ಮಾಡಬಹುದೆಂದು ಪ್ರಸ್ತಾವಿಸುತ್ತೇನೆ.

303. ಹಲವಾರು ವರ್ಷಗಳಿಂದ ಬಾರ್ (ಸಿಎಲ್-9) ಸನ್ನದುಗಳನ್ನು ಸರ್ಕಾರವು ನೀಡುತ್ತಿರುವುದಿಲ್ಲ. ಈ ಸನ್ನದುಗಳಿಗಾಗಿ ಬೇಡಿಕೆ ಅತ್ಯಂತ ಹೆಚ್ಚಾಗಿರುತ್ತದೆ. ಆದುದರಿಂದ ಇನ್ನು ಮುಂದೆ ಹೋಟೆಲುಗಳಿಗೆ ಬಾರ್ (ಸಿಎಲ್-9) ಸನ್ನದುಗಳನ್ನು ಅಂತಹ ಸನ್ನದುಗಳ ಬೇಡಿಕೆಗೆ ಅನುಗುಣವಾಗಿ ಹಾಲಿ ಇರುವ ನಿಯಮಗಳ ಪ್ರಕಾರವೇ ನೀಡಲಾಗುವುದು. ಈ ಕ್ರಮ ಕೈಗೊಂಡ ನಂತರ ರಸ್ತೆಪಕ್ಕದ (ಸಿಎಲ್-2) ಅಂಗಡಿಗಳಲ್ಲಿ ಸ್ಥಳದಲ್ಲೇ ಕುಡಿದು ಹೋಗುವ ಪರಿಪಾಠವನ್ನು ನಿಯಂತ್ರಿಸಲು ಇನ್ನೂ ಹೆಚ್ಚಿನ ಕಠಿಣ ಕ್ರಮ ಕೈಗೊಳ್ಳಲಾಗುವುದು.

304. ಪ್ರಸ್ತುತ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶೀಯ ಮದ್ಯ ಮಾರಾಟ) ನಿಯಮಗಳು, 1968 ರಡಿಯಲ್ಲಿ ಭಾರತೀಯ ಮದ್ಯ ಮಾರಾಟಕ್ಕಾಗಿ ನೀಡಿರುವ ಎಲ್ಲಾ ಸನ್ನದುಗಳನ್ನು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳ ಅನುಸಾರವೇ ನವೀಕರಣಗೊಳಿಸಲಾಗುವುದು.

305. ಪ್ರಸ್ತುತ ಅಬಕಾರಿ ಕಾಯ್ದೆಯಡಿಯಲ್ಲಿ ಮದ್ಯ : ಮದ್ಯಸಾರಗಳನ್ನು ಸಾಗಾಣಿಕೆ ಮಾಡಲು ಪರ್ಮಿಟ್‌ಗೆ 50 ರೂ.ಗಳ ಶುಲ್ಕವನ್ನು ವಿಧಿಸಲಾಗುತ್ತಿದ್ದು, ಈ ಶುಲ್ಕವನ್ನು ದಿನಾಂಕ : 1-4-2007 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಪ್ರಸ್ತಾವಿಸುತ್ತೇನೆ ಹಾಗೂ ರಹದಾರಿಗಳನ್ನು ನೀಡುವ ಪದ್ಧತಿಯನ್ನು ಸಹಾ ಸರಳೀಕರಣಗೊಳಿಸಲು ಪ್ರಸ್ತಾವಿಸುತ್ತೇನೆ.

306. ಪಾನೀಕರ ಆರೋಗ್ಯದ ದೃಷ್ಟಿಯಿಂದ ಹಾಗೂ ಅಧಿಕೃತ ಮದ್ಯ ತಯಾರಕರ ಹೆಸರಿನಲ್ಲಿ ಅನಧಿಕೃತವಾಗಿ ತಯಾರಾದ ಮದ್ಯ : ಮದ್ಯಸಾರವನ್ನು ಮಾರಾಟ ಮಾಡುವುದನ್ನು ತಪ್ಪಿಸುವ ದೃಷ್ಟಿಯಿಂದ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಎಲ್ಲಾ ಬಗೆಯ ಮದ್ಯ ಹಾಗೂ ಮದ್ಯಸಾರಗಳನ್ನು ನಾಶಪಡಿಸಲು ಪ್ರಸ್ತಾವಿಸುತ್ತೇನೆ.

307. ಸುಧಾರಣಾ ದೃಷ್ಟಿಯಿಂದ ರೆಕ್ಟಿಫೈಡ್ ಸ್ಪಿರಿಟ್, ಡಿನೇಚರ್ಡ್ ಸ್ಪಿರಿಟ್ ಮತ್ತು ಆಯಿಲ್ ಕಂಪನಿಗಳಿಗೆ ಸರಬರಾಜು ಮಾಡುವ ಅನ್‌ಹೈಡ್ರಸ್ ಆಲ್ಕೋಹಾಲ್ (ಎಥನಾಲ್)ಗಳ ಮೇಲಿನ ಶುಲ್ಕ (ಫೀ)ವನ್ನು ಕೈ ಬಿಡಲು ಪ್ರಸ್ತಾವಿಸುತ್ತೇನೆ. ಈ ಪ್ರಸ್ತಾವವು ದಿನಾಂಕ : 1.4.2007 ರಿಂದ ಜಾರಿಗೆ ಬರುತ್ತದೆ.

308. ಸುಧಾರಣಾ ದೃಷ್ಟಿಯಿಂದ ಮದ್ಯದ ಮೇಲಿನ ಘೋಷಿತ ಬೆಲೆಯನ್ನು ನಿಗದಿಪಡಿಸುವ ಬಗ್ಗೆ ಪ್ರಸ್ತುತ ಜಾರಿಯಲ್ಲಿರುವ ಪದ್ಧತಿಯನ್ನು ಸರಳೀಕರಣಗೊಳಿಸುವ ಬಗ್ಗೆ ಪ್ರಸ್ತಾವಿಸುತ್ತೇನೆ.

309. ವಿದೇಶದಿಂದ ಆಮದು ಮಾಡಿಕೊಂಡ ಮದ್ಯಗಳ ಮೇಲೆ ವಿಧಿಸುತ್ತಿರುವ ಲೀಟರ್ ಫೀ ಗಳನ್ನು ಕೈಬಿಡಲು ಪ್ರಸ್ತಾವಿಸುತ್ತೇನೆ.

310. ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಸನ್ನದುಗಳಂತೆ ಸಿಎಲ್-6ಎ (Star Hotel Licence) ಸನ್ನದುಗಳನ್ನು ಸಹ ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲು ಪ್ರಸ್ತಾವಿಸುತ್ತೇನೆ.

311. ಚಿಲ್ಲರೆ ಮದ್ಯದ ಅಂಗಡಿಗಳು (ಸಿಎಲ್-2) ಕ್ಲಬ್‌ಗಳು (ಸಿಎಲ್-4) ಸಾಂದರ್ಭಿಕ ಸನ್ನದುಗಳು (ಸಿಎಲ್-5) ಸ್ಟಾರ್ ಹೋಟೆಲ್ಸ್ (ಸಿಎಲ್-6ಎ) ಹೋಟೆಲುಗಳು ಮತ್ತು ಬೋರ್ಡಿಂಗ್ ಹೌಸ್‌ಗಳು (ಸಿಎಲ್-7) ಮತ್ತು ರಿಫ್ರೆಷ್‌ಮೆಂಟ್ ಕೊಠಡಿಗಳು (ಬಾರ್) (ಸಿಎಲ್-9)

ಲೈಸೆನ್ಸುಗಳ ಮೇಲಿನ ಸನ್ನದು ಶುಲ್ಕವನ್ನು ಅನುಬಂಧ-3ರಲ್ಲಿ ಕೊಟ್ಟಿರುವಂತೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ. ಈ ದರಗಳು ದಿನಾಂಕ : 1.7.2007 ರಿಂದ ಜಾರಿಗೆ ಬರುತ್ತದೆ.

**ಮುದ್ರಾಂಕ ಮತ್ತು ನೋಂದಣಿ**

312. ರಾಜ್ಯದಲ್ಲಿ ಪೈಲಟ್ ಮಾದರಿಯಲ್ಲಿ ಸೂಕ್ತವಾದ ಇ-ಸ್ಟಾಂಪಿಂಗ್ ವಿಧಾನವನ್ನು ಜಾರಿಗೊಳಿಸಲು ನಾನು ಉದ್ದೇಶಿಸಿದ್ದೇನೆ.

313. 2006-07ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಸರ್ಕಾರವು ಸ್ವತ್ತಿನ ಹಕ್ಕು ಖಾತರಿಗಾಗಿ ಒಂದು ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಉಪಕ್ರಮಿಸುವುದಾಗಿ ಪ್ರಕಟಿಸಿತ್ತು. ಅದನ್ನು ಜಾರಿಗೊಳಿಸುವ ಸಲುವಾಗಿ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಅಂಗೀಕೃತವಾಗಿರುವ ವಿಮಾ ಕಂಪನಿಗಳು ನೀಡುವ ಕ್ರಮಬದ್ಧ ಹಕ್ಕು ವಿಮಾ ಪಾಲಿಸಿಯಿಂದೊಡಗೂಡಿದ ಹಸ್ತಾಂತರ ಪತ್ರಗಳಿಗೆ ಶೇ. 0.5% ರಷ್ಟು ಮುದ್ರಾಂಕ ರಿಯಾಯಿತಿ ನೀಡಲು ಉದ್ದೇಶಿಸಿದ್ದೇನೆ.

314. ಸ್ಥಿರಾಸ್ತಿಗಳ ವರ್ಗಾವಣೆ ಸಂಬಂಧಿಸಿದಂತೆ ಅವಾರ್ಡ್‌ಗಳು ನ್ಯಾಸ ಪತ್ರಗಳು, ವಾಣಿಜ್ಯ ಹಾಗೂ ವಾಸದ ಸ್ವತ್ತುಗಳನ್ನು ಅಭಿವೃದ್ಧಿಪಡಿಸಲು ಮಾಡಿಕೊಂಡ ಅಭಿವೃದ್ಧಿ ಕರಾರುಗಳು ಮತ್ತು ಮೊಖ್ತ್ಯಾರ ನಾಮೆಗಳಿಗೆ ಮಾರುಕಟ್ಟೆ ಬೆಲೆ ಆಧರಿಸಿ ಮುದ್ರಾಂಕ ಶುಲ್ಕವನ್ನು ಲೆಕ್ಕ ಹಾಕಲು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಅನುಸೂಚಿಯ 11,54,5 ಮತ್ತು 41ರ ಅನುಚ್ಛೇದಗಳಿಗೆ ಅವಶ್ಯಕ ತಿದ್ದುಪಡಿಯನ್ನು ಮಾಡಿ ಅವುಗಳನ್ನು ಸದರಿ ಕಾಯಿದೆಯ ಕಲಂ 45-ಎ ಪರಿಧಿಗೆ ಸೇರಿಸಲಾಗುವುದು.

315. ಮೊಖ್ತ್ಯಾರ ನಾಮೆಯ ಜೊತೆಗೆ ನೀಡುವ ಮಾರಾಟದ ಕರಾರನ್ನು ಸ್ವತ್ತಿನ ಸ್ವಾಧೀನ ಸಹಿತವೆಂದು ಪರಿಗಣಿಸುವ ಬಗ್ಗೆ ಅನುಚ್ಛೇದ-5ಕ್ಕೆ ಒಂದು ವಿವರಣೆಯನ್ನು ಸೇರಿಸಲಾಗುವುದು.

316. ಕರ್ನಾಟಕ ಮುದ್ರಾಂಕ ಕಾಯಿದೆ, 1957ರ ಅನುಸೂಚಿಯ ಅನುಚ್ಛೇದ 6(1)(ಬಿ) ಅಡಿಯಲ್ಲಿ ವಾಣಿಜ್ಯೋಪಯೋಗಕ್ಕಾಗಿ ಸ್ಥಿರಾಸ್ತಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಬರೆದುಕೊಡುವ ಹಕ್ಕುಪತ್ರ ನಿಕ್ಷೇಪ ಪತ್ರಗಳಿಗೆ ಗರಿಷ್ಠ ಮುದ್ರಾಂಕ ಶುಲ್ಕ ಐದು ಲಕ್ಷ ರೂಪಾಯಿಗಳನ್ನೂ ವಾಸೋಪಯೋಗಕ್ಕಾಗಿ ಅಭಿವೃದ್ಧಿಪಡಿಸುವ ಬಗ್ಗೆ ರೂ. ಐವತ್ತು ಸಾವಿರ ಗರಿಷ್ಠ ಮಿತಿಯನ್ನೂ ಮತ್ತು ಇನ್ನಿತರ ಉದ್ದೇಶಕ್ಕೆ ಅಡವೇಲೋರಮ್ ದರದಂತೆ ಮುದ್ರಾಂಕ ಶುಲ್ಕವನ್ನು ನಿಗದಿ ಪಡಿಸಲಾಗುವುದು.

317. ಕರ್ನಾಟಕ ಮುದ್ರಾಂಕ ಕಾಯಿದೆ, 1957ರ ಅನುಸೂಚಿಯ ಅನುಚ್ಛೇದ 14ರ ಅಡಿ ಹಿಂದೆ ಬರೆದು ಕೊಟ್ಟ ಲಿಖಿತ ಪತ್ರಗಳನ್ನು ರದ್ದು ಪಡಿಸುವ ಪತ್ರಗಳಿಗೆ ಮುದ್ರಾಂಕ ಶುಲ್ಕವನ್ನು ನಿಗದಿ ಪಡಿಸಿದೆ. ಆದರೆ ಕೆಲವೊಂದು ಪತ್ರಗಳ ರದ್ದಿಯಾತಿಗೆ ಶುಲ್ಕವನ್ನು ಸಂಬಂಧಪಟ್ಟ ಅನುಚ್ಛೇದಗಳಡಿಯೇ ನಿಗದಿ ಮಾಡಿರುವುದರಿಂದ ಅಂತಹ ರದ್ದು ಪತ್ರಗಳನ್ನು ಅನುಚ್ಛೇದ 14ರ ವ್ಯಾಪ್ತಿಯಿಂದ ಹೊರತು ಪಡಿಸುವುದು ಅವಶ್ಯಕವಾಗಿರುತ್ತದೆ. ಆದಕಾರಣ ಈ ಅನುಚ್ಛೇದದಲ್ಲಿರುವ ಈ ಅಸಂಗತವನ್ನು ಸರಿಪಡಿಸಲಾಗುವುದು.

318. ಕಂಪನಿಗಳ ಸಂಯೋಜನೆಗಳಿಗಾಗಿ ಅನುಚ್ಛೇದ 20(4)ರಲ್ಲಿ ಇರುವ ಅಸಂಗತವನ್ನು ನಿವಾರಿಸಲು ಮತ್ತು ಸೋರಿಕೆಯನ್ನು ತಡೆಯಲು ಮಾತೃ ಕಂಪನಿಗಳೊಂದಿಗೆ ಸಂಯೋಜನೆಗೊಳ್ಳುವ ಅಧೀನ ಕಂಪನಿಗಳಿಗೆ ಮತ್ತು ಪುನರ್ ಐಕ್ಯವಾಗುವುದಕ್ಕೆ ಮುದ್ರಾಂಕ ಶುಲ್ಕ ವಿಧಿಸಲು ಒಂದು ಹೊಸ ಪರಿವಿಧಿಯನ್ನು ತರಲಾಗುವುದು.

319. ಅನುಚ್ಛೇದ 28ರಲ್ಲಿ ದಾನ ಪತ್ರಗಳಿಗೆ ಮತ್ತು ಅನುಚ್ಛೇದ 48ರಲ್ಲಿ ವ್ಯವಸ್ಥಾ ಪತ್ರಗಳಲ್ಲಿನ ಕುಟುಂಬದ ಶಬ್ದದ ವ್ಯಾಖ್ಯಾನವನ್ನು ವಿಸ್ತರಿಸಿ, ಸಹೋದರರು ಮತ್ತು ಸಹೋದರಿಯರನ್ನು ಸೇರಿಸಲಾಗುವುದು.

320. ಅನುಚ್ಛೇದ 5(ಎಫ್)ನ ಅಭಿವೃದ್ಧಿ ಕರಾರು ಪತ್ರಗಳಿಗೆ ಮತ್ತು ತತ್ಸಮಾನವಾದ ಅನುಚ್ಛೇದ 41(ಇಎ) ನ ಮೊಖ್ತಾ ್ಯರ ನಾಮೆಗಳಿಗೆ ಅವುಗಳಲ್ಲಿನ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಸ್ಲ್ಯಾಬ್ ದರದಂತೆ ಒಂದು ಲಕ್ಷದ ಐವತ್ತು ಸಾವಿರ ಗರಿಷ್ಟ ಮುದ್ರಾಂಕ ಶುಲ್ಕವನ್ನು ಆಕರಿಸಲು ನಾನು ಉದ್ದೇಶಿಸಿದ್ದೇನೆ.

321. ಹಕ್ಕು ನಿವೃತ್ತಿ ಪತ್ರಗಳಿಗೆ ಸಂಬಂಧಿಸಿದಂತೆ ಕಾಯಿದೆಯ ಅನುಸೂಚಿಯ ಅನುಚ್ಛೇದ 45(ಎ)(i) ಮತ್ತು (ii) ರಲ್ಲಿನ ಅಸಂಗತತೆ ಮತ್ತು ತಪ್ಪು ವ್ಯಾಖ್ಯಾನವನ್ನು ನಿವಾರಿಸಲು ಮತ್ತು ರಾಜಸ್ವ ಸೋರುವಿಕೆಯನ್ನು ತಡೆಗಟ್ಟಲಾಗುವುದು.

322. ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸಲು ಮತ್ತು ಈಗಿರುವ ಇ-ಗವರ್ನೆನ್ಸನ್ನು ಅಭಿವೃದ್ಧಿಪಡಿಸಲು ಕಾವೇರಿ ನಿರ್ವಹಣ ಸಲಹ ಕೋಶವೊಂದನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ. ಅಲ್ಲದೆ ಬೆಂಗಳೂರು ಮತ್ತು ಧಾರವಾಡಗಳಲ್ಲಿ ಶಾಶ್ವತ ದಾಖಲೆಗಳ ಸಂಗ್ರಹಣೆ ಮತ್ತು ಸಂರಕ್ಷಣೆ ಮಾಡಲು, ವಿಪತ್ತು ನಿರ್ವಹಣಾ ಆಡಳಿತ ಕೇಂದ್ರಗಳನ್ನು ಸ್ಥಾಪಿಸಲೂ ಸಹ ನಾನು ಉದ್ದೇಶಿಸಿದ್ದೇನೆ.

323. ಉದ್ದೇಶಿತ ಬದಲಾವಣೆಗಳ ವಿವರಗಳು ಅನುಬಂಧ 4 ರಲ್ಲಿ ಇವೆ.

**ಸಾರಿಗೆ**

324. ಪ್ರಸಕ್ತ ಸಾಲಿನಲ್ಲಿ ವಿವಿಧ ವರ್ಗಗಳ ವಾಹನಗಳಿಗೆ ಸಂಬಂಧಿಸಿದಂತೆ ತೆರಿಗೆಯನ್ನು ಹೆಚ್ಚಳ ಮಾಡುವುದರಿಂದ ರೂ.75 ಕೋಟಿ ಅಧಿಕ ತೆರಿಗೆ ಸಂಗ್ರಹಿಸಲಾಗುವುದು. ಅದರ ವಿವರಗಳು ಈ ಕೆಳಕಂಡಂತಿವೆ:-

325. ದ್ವಿಚಕ್ರ ಮತ್ತು ಮೋಟಾರು ಕಾರುಗಳ ತೆರಿಗೆಯನ್ನು ಜೀವಾವಧಿ ರೂಪದಲ್ಲಿ ಪಡೆಯಲಾಗುತ್ತಿದೆ. ದಿನೇ ದಿನೇ ಈ ವಾಹನಗಳ ನೋಂದಣಿ ಬಹಳ ವೇಗವಾಗಿ ಹೆಚ್ಚುತ್ತಿರುವುದರಿಂದ ವಾಯುಮಾಲಿನ್ಯ ಹೆಚ್ಚಾಗುತ್ತಿದೆ ಮತ್ತು ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಆದುದರಿಂದ ಇಂತಹ ವಾಹನಗಳ ನೋಂದಣಿಯನ್ನು ತಡೆಗಟ್ಟಲು ಅವುಗಳ ಮೇಲೆ ವಿಧಿಸುವ ತೆರಿಗೆಯನ್ನು ಹೆಚ್ಚಿಸಲಾಗಿದೆ.

326. ವಾಹನಗಳನ್ನು ಶಾಶ್ವತ ನೋಂದಣಿ ಮಾಡುವುದಕ್ಕೆ ಮೊದಲು ಅವುಗಳನ್ನು ನೋಂದಣಿ ಪ್ರಾಧಿಕಾರದ ಮುಂದೆ ಕೊಂಡು ಹೋಗಲು ತಾತ್ಕಾಲಿಕ ನೋಂದಣಿಯನ್ನು ನೀಡಲಾಗುತ್ತಿದೆ. ಈ ತಾತ್ಕಾಲಿಕ ನೋಂದಣಿಗಳಿಗೆ ತೆರಿಗೆ ವಿಧಿಸುವ ಬಗ್ಗೆ ಸೂಕ್ತವಾದ ಅವಕಾಶವನ್ನು ತೆರಿಗೆ ಷೆಡ್ಯೂಲ್‌ನಲ್ಲಿ ಮಾಡಿರಲಿಲ್ಲ. ಈಗ ಅಂತಹ ವಾಹನಗಳಿಗೆ ಅಲ್ಪ ಪ್ರಮಾಣದ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಿದೆ.

327. ಸಾಮಾನ್ಯ ಮತ್ತು ಐಷಾರಾಮಿ ಒಪ್ಪಂದ ವಾಹನಗಳ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ.

328. ಕ್ಯಾಂಪರ್ಸ್-ವ್ಯಾನ್ ವರ್ಗದ ವಾಹನಗಳನ್ನು ಮಲಗಿ ಮತ್ತು ಕುಳಿತು ಪ್ರಯಾಣ ಮಾಡಲು ಉಪಯೋಗಿಸುತ್ತಿದ್ದು ಇವುಗಳ ನೆಲ ವಿಸ್ತೀರ್ಣದ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಿದೆ.

329. ದಿನಾಂಕ: 1.4.2006ರ ಮೊದಲು ಇದ್ದಂತೆ ಮಲ್ಟಿ-ಆಕ್ಸಲ್ಡ್ ಮತ್ತು ಆರ್ಟಿಕ್ಯುಲೇಟೆಡ್ ವಾಹನಗಳ ಮೇಲೆ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ.

330. ಕರ್ನಾಟಕ ಮೋಟಾರು ವಾಹನ ನಿಯಮಗಳಲ್ಲಿ ಸ್ಲೀಪರ್-ಕೋಚ್‌ನ್ನು ನೋಂದಣಿ ಮಾಡಲು ಅವಕಾಶವಿರುವುದಿಲ್ಲ. ಆದುದರಿಂದ ನಿಯಮಗಳಲ್ಲಿ ತಿದ್ದುಪಡಿ ಮಾಡಿ ಸ್ಲೀಪರ್ ಕೋಚನ್ನು ನೋಂದಣಿ ಮಾಡಲು ಕ್ರಮ ತೆಗೆದುಕೊಂಡಿದೆ. ಆದುದರಿಂದ ಈ ವರ್ಗದ ವಾಹನಗಳಿಗೆ ಪ್ರತ್ಯೇಕವಾದ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಲಾಗಿದೆ.

331. ವಿಶೇಷ ರಹದಾರಿಗಳನ್ನು ಪಡೆದು ಸಂಚರಿಸುವ ವಾಹನಗಳ ಮೇಲೆ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ.

332. ಟೂರಿಸ್ಟ್ ವಾಹನಗಳಿಗೆ ನೆರೆ ರಾಜ್ಯಗಳಲ್ಲಿ ಹೆಚ್ಚಿನ ತೆರಿಗೆಯನ್ನು ವಿಧಿಸುತ್ತಿರುವುದರಿಂದ, ಸದರಿ ವಾಹನಗಳಿಗೆ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ.

333. 1500 ಕೆ.ಜಿ. ಗಳಿಗೂ ಹೆಚ್ಚಿನ ಆದರೆ 3000 ಕೆ.ಜಿ.ಗಳಿಗೆ ಮೀರದ ಒಟ್ಟು ನೋಂದಾಯಿತ ತೂಕದ ಸರಕು ಸಾಗಣೆ ವಾಹನಗಳಿಂದ ತ್ರೈಮಾಸಿಕ ತೆರಿಗೆಯನ್ನು ವಸೂಲಿ ಮಾಡುವುದು ಆಡಳಿತಾತ್ಮಕ ದೃಷ್ಟಿಯಿಂದ ಕಷ್ಟ ಸಾಧ್ಯವಾಗುತ್ತಿರುವುದನ್ನು ಮನಗಂಡು ಜೀವಾವಧಿ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸಲಾಗಿದೆ.

334. ಗುತ್ತಿಗೆ ಆಧಾರದ ಮೇಲೆ ಕಂಪನಿಗಳಿಗೆ ಸೇವೆಯನ್ನು ನೀಡುತ್ತಿರುವ ಖಾಸಗಿ ಸೇವಾ ವಾಹನಗಳ ತೆರಿಗೆಯನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ.

335. ಪಾರ್ಟ್-ಬಿ ಷೆಡ್ಯೂಲ್‌ನಲ್ಲಿ ಇತರೆ ರಾಜ್ಯದ ಟೂರಿಸ್ಟ್ ವಾಹನಗಳು ನಮ್ಮ ರಾಜ್ಯದಲ್ಲಿ ಓಡಿಸುವ ಸಂಬಂಧದಲ್ಲಿ 7 ದಿನಗಳಿಗೆ ಮತ್ತು 30 ದಿನಗಳಿಗೆ ವಿಧಿಸುವ ತೆರಿಗೆಯ ದರವನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ. ನಮ್ಮ ರಾಜ್ಯದಲ್ಲಿ ನೋಂದಣಿಯಾದ ವಾಹನಗಳಿಗೆ ನೆರೆ ರಾಜ್ಯಗಳಲ್ಲಿ ವಿಧಿಸುವ ತೆರಿಗೆಗೆ ಸಮಾನಾಂತರವಾಗಿ ಇದನ್ನು ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ.

336. ಮೇಲೆ ಸೂಚಿಸಿರುವ ತೆರಿಗೆಯ ಹೆಚ್ಚಳದ ವಿವರಗಳನ್ನು ಅನುಬಂಧ - 5 ರಲ್ಲಿ ವಿವರಿಸಿದೆ.

## ಪರಿಷ್ಕೃತ ಅಂದಾಜುಗಳು 2006-2007

337. 2006-07 ರಲ್ಲಿ ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ಜಮೆಗಳನ್ನು 41878.13 ಕೋಟಿ ರೂಪಾಯಿಗಳೆಂದು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ಜಮೆಗಳು 44136.96 ಕೋಟಿ ರೂಗಳಾಗಿದೆ. ಮುಂಗಡ ಅಂದಾಜುಗಳ ರೀತ್ಯಾ ಒಟ್ಟು ವೆಚ್ಚವು 41850.66 ಕೋಟಿ ರೂ.ಗಳಾಗಿತ್ತು. ಈಗ ಪರಿಷ್ಕೃತ ಅಂದಾಜಿನ ರೀತ್ಯಾ ಒಟ್ಟು ವೆಚ್ಚವು 44092.75 ಕೋಟಿ ರೂ.ಗಳಾಗಿದೆ. ಸಾರ್ವಜನಿಕ ವೆಚ್ಚದ ನಿವ್ವಳ ಲೆಕ್ಕ ತೆಗೆದುಕೊಂಡ ನಂತರ ಈ ವರ್ಷದ ಅಂತಿಮ ಕೊರತೆಯು 96.37 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. 2006-07ರ ಮುಂಗಡ ಪತ್ರವನ್ನು ಮಂಡಿಸುವಾಗ ಈ ಕೊರತೆಯನ್ನು 79.04 ಕೋಟಿ ರೂ.ಗಳೆಂದು ತೋರಿಸಲಾಗಿತ್ತು.

## ಆಯವ್ಯಯ ಅಂದಾಜುಗಳು 2007-08

338. 2007-08 ನೇ ಸಾಲಿನ ಒಟ್ಟು ಜಮೆ 47927.28 ಕೋಟಿ ರೂ.ಗಳಾಗುವ ನಿರೀಕ್ಷೆ ಇದೆ. ಇದರಲ್ಲಿ 40762.09 ಕೋಟಿ ರೂ.ಗಳ

ರಾಜಸ್ವ ಜಮೆ ಮತ್ತು 7165.19 ಕೋಟಿ ರೂ.ಗಳ ಬಂಡವಾಳ ಜಮೆ ಸೇರಿರುತ್ತದೆ. ಒಟ್ಟು ವೆಚ್ಚವನ್ನು 47950.34 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 39135.43 ಕೋಟಿ ರೂ.ಗಳು ರಾಜಸ್ವ ವೆಚ್ಚವಾಗಿದ್ದು 8814.91 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿವೆ.

339. ಸರ್ಕಾರವು ತೆರಿಗೆ ರಾಜಸ್ವದ ಮೂಲಕ 26691.17 ಕೋಟಿ ರೂ.ಗಳನ್ನು ತೆರಿಗೆಯೇತರ ರಾಜಸ್ವದ ಮೂಲಕ 1857.10 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ. ಇದಲ್ಲದೆ ಭಾರತೀಯ ರಿಸರ್ವ್‌ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ 1200.00 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಸರ್ಕಾರದ ಒಟ್ಟು ಸಾಲಗಳಿಂದ 1990.71 ಕೋಟಿ ರೂ.ಗಳನ್ನು ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

340. 2006-07 ರ ಪರಿಷ್ಕೃತ ಅಂದಾಜು ರೀತ್ಯಾ ಕ್ರೋಢೀಕೃತ ರಾಜಸ್ವ ಉಳಿಕೆಯು ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯು ಕ್ರಮವಾಗಿ ರೂ.2831.54 ಮತ್ತು ರೂ.5371.85 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದ್ದು ಇದು ಜಿಎಸ್‌ಡಿಪಿಯ ಶೇಕಡ 1.46 ಮತ್ತು ಶೇಕಡ 2.77 ಆಗಿರುತ್ತದೆ. 2007-08ರ ಕ್ರೋಢೀಕೃತ ರಾಜಸ್ವ ಉಳಿಕೆ ಮತ್ತು ಕ್ರೋಢೀಕೃತ ವಿತ್ತೀಯ ಕೊರತೆಯನ್ನು ಕ್ರಮವಾಗಿ 1626.66 ಕೋಟಿ ರೂಪಾಯಿಗಳೆಂದು ಮತ್ತು 6304.98 ಕೋಟಿ ರೂಪಾಯಿಗಳೆಂದು ಅಂದಾಜಿಸಲಾಗಿದ್ದು ಇದು ಅನುಕ್ರಮವಾಗಿ ಜಿಎಸ್‌ಡಿಪಿಯ ಶೇಕಡ 0.74 ಮತ್ತು ಶೇಕಡ 2.87 ಎಂದು ಅಂದಾಜಿಸಲಾಗಿದೆ. ಇದು 2002ನೇ ಇಸವಿಯ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ರೀತ್ಯಾ ಇದೆ.

**ಪ್ರಜೆಗಳ ಹಿತವೇ ಮುಖ್ಯ:**

*ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ"*
*ಪ್ರಜಾ ಸುಖೇ ಸುಖಂ ರಾಜ್ಞಃ /*
*ಪ್ರಜಾನಾಂ ಚ ಹಿತೇ ಹಿತಂ //*
*ನಾತ್ಮಪ್ರಿಯಂ ಹಿತಂ ರಾಜ್ಞಃ /*
*ಪ್ರಜಾನಾಂ ತು ಪ್ರಿಯಂ ಹಿತಂ //*

ಅಂದರೆ ಪ್ರಜೆಗಳ ಸುಖವೇ ರಾಜನ (ರಾಜ್ಯಾಡಳಿತ ನಡೆಸುವವರ) ಸುಖ, ಪ್ರಜೆಗಳ ಹಿತವೇ ರಾಜನ (ರಾಜ್ಯಾಡಳಿತ ನಡೆಸುವವರ) ಹಿತ, ರಾಜನಾದವನು (ರಾಜ್ಯಾಡಳಿತ ನಡೆಸುವವರು) ಪ್ರಜೆಗಳಿಗೆ ಹಿತವಾದುದನ್ನೇ ಮಾಡಬೇಕೇ ವಿನಃ ತಮಗೆ ಇಷ್ಟಬಂದಂತಲ್ಲ.

341. ಕೌಟಿಲ್ಯನ ಈ ನೀತಿಮಾತು ನಮಗೆ ದಾರಿ ದೀವಿಗೆ. ಈ ಹಿತೋಕ್ತಿಯ ಬೆಳಕಿನಲ್ಲಿ ರಾಜ್ಯದ ಸಮಸ್ತ ಜನರ ಹಿತ ಕಾಪಾಡುವಲ್ಲಿ ಮತ್ತು ರಾಜ್ಯದ ಸರ್ವೊತ್ತೋಮುಖ ಅಭಿವೃದ್ಧಿಗೆ ಸ್ವಾರ್ಥವನ್ನು ಬದಿಗಿರಿಸಿ ಶ್ರಮಿಸುವ ಸಂಕಲ್ಪದೊಂದಿಗೆ ನಮ್ಮ ಮೈತ್ರಿ ಸರ್ಕಾರ ಕಾರ್ಯೋನ್ಮುಖವಾಗಿದೆ.

342. ಮಾನ್ಯರೆ, ಮೈತ್ರಿ ಸರ್ಕಾರದ ಎರಡನೇ ಆಯವ್ಯಯ ಪತ್ರವನ್ನು ಮಂಡಿಸಿರುವುದಕ್ಕೆ ನನಗೆ ಹೆಮ್ಮೆ ಎನ್ನಿಸುತ್ತಿದೆ. ನಮ್ಮ ಮಹಾನ್ ರಾಜ್ಯದ ಜನತೆಯ ಆಶೋತ್ತರಗಳಿಗೆ ಪ್ರತಿಸ್ಪಂದಿಸಿದ್ದೇನೆ ಎಂಬ ತೃಪ್ತಿ ನಮಗಿದೆ. ನಮ್ಮ ಎರಡನೇ ಮುಂಗಡ ಪತ್ರವು ಸಮಾಜದ ಶೋಷಿತರ, ಬಡವರ, ದುರ್ಬಲವರ್ಗದವರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದೆ. ನಮ್ಮ ನೆಲ-ಜಲ, ಕಲೆ, ಸಂಸ್ಕೃತಿ, ಭಾಷೆ ಅರಳಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ. ನಮ್ಮ ಆಯವ್ಯಯವು ಸಂಪನ್ಮೂಲಗಳಿಂದ ತುಂಬಿ

ತುಳುಕುತ್ತಿದೆ. ವಿತ್ತೀಯ ಶಿಸ್ತಿನ ಪರಿಮಿತಿಯೊಳಗೆ ಮಂಡಿಸಿರುವ ಈ ಮುಂಗಡಪತ್ರವು ನಂಬಲರ್ಹವಾಗಿದೆ.

343. ಸರ್ವಜಿತು ಸಂವತ್ಸರದ ಹೊಸ್ತಿಲಲ್ಲಿ ನಿಂತು ನಾಡಬಾಂಧವರಿಗೆ ಹಾಗೂ ಸದನದ ಗೌರವಾನ್ವಿತ ಸದಸ್ಯರಿಗೆ ಪ್ರೀತಿಪೂರ್ವಕವಾಗಿ ಯುಗಾದಿ ಹಬ್ಬದ ಶುಭಾಶಯಗಳನ್ನು ಸಲ್ಲಿಸುತ್ತೇನೆ.

344. ನಾನು ಈಗ 2007-08ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗೆ ಮಂಡಿಸುತ್ತಿದ್ದೇನೆ. ಮುಂಗಡ ಪತ್ರದ ಬಗ್ಗೆ ಸದನದಲ್ಲಿ ಸವಿವರವಾಗಿ ಚರ್ಚಿಸಲಾಗುವುದು. ಚರ್ಚೆಯ ನಂತರ ಸರ್ಕಾರವು ಪೂರ್ಣ ಮುಂಗಡ ಪತ್ರಕ್ಕೆ ಲೇಖಾನುದಾನ ಕೋರುತ್ತದೆ. ಈಗ ನಾನು 2007ರ ಜುಲೈ 31ಕ್ಕೆ ಅಂತ್ಯಗೊಳ್ಳುವ ನಾಲ್ಕು ತಿಂಗಳುಗಳಿಗೆ ಲೇಖಾನುದಾನವನ್ನು ಕೋರುತ್ತಿದ್ದೇನೆ.

**ಜೈ ಹಿಂದ್ - ಜೈ ಕರ್ನಾಟಕ**

# ಬಜೆಟ್ ವಿಹಂಗಮ ನೋಟ

## ಬಜೆಟ್ ವಿಹಂಗಮ

| ಕ್ರ. ಸಂ. | ಬಾಬ್ತು | ಬಜೆಟ್ ಅಂದಾಜು 2006-07 | ಪರಿಷ್ಕೃತ ಅಂದಾಜು 2006-07 | ಬಜೆಟ್ ಅಂದಾಜು 2007-08 |
|---|---|---|---|---|
| | ಪ್ರಾರಂಭ ಶಿಲ್ಕು | 51.57 | 52.16 | 96.37 |
| | ಎ. ರಾಜಸ್ವ ಲೆಕ್ಕ | | | |
| **I.** | ಜಮೆ : | | | |
| | ರಾಜ್ಯ ತೆರಿಗೆ | 22533.79 | 23887.94 | 26691.17 |
| | ಕೇಂದ್ರ ತೆರಿಗೆಯಲ್ಲಿ ಪಾಲು | 4608.90 | 5009.62 | 6300.00 |
| | ಕೇಂದ್ರ ಸರ್ಕಾರದ ಅನುದಾನಗಳು | 4643.96 | 4801.48 | 5913.82 |
| | ತೆರಿಗೆಯೇತರ ರಾಜಸ್ವ | 4088.43 | 4296.76 | 1857.10 |
| | **ಒಟ್ಟು-ಎ. I** | **35875.08** | **37995.80** | **40762.09** |
| **II.** | ವೆಚ್ಚ : | | | |
| | ಸಾಮಾಜಿಕ ಸೇವೆ | 11244.66 | 12037.24 | 14783.09 |
| | ಆರ್ಥಿಕ ಸೇವೆ | 8578.22 | 9358.09 | 10675.80 |
| | ಸಾಮಾನ್ಯ ಸೇವೆ | 12987.48 | 12238.64 | 11772.15 |
| | ಸಹಾಯಾನುದಾನ ಮತ್ತು ಅಂಶದಾನ | 1530.18 | 1530.29 | 1904.39 |
| | **ಒಟ್ಟು-ಎ. II** | **34340.54** | **35164.26** | **39135.43** |
| ಎ. | ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ | 1534.54 | 2831.54 | 1626.66 |

## ನೋಟ

*(ಕೋಟಿ ರೂಪಾಯಿಗಳಲ್ಲಿ)*

| ಕ್ರ. ಸಂ. | ಬಾಬ್ತು | ಬಜೆಟ್ ಅಂದಾಜು 2006-07 | ಪರಿಷ್ಕೃತ ಅಂದಾಜು 2006-07 | ಬಜೆಟ್ ಅಂದಾಜು 2007-08 |
|---|---|---|---|---|
| | ಬಿ. ಬಂಡವಾಳ ಲೆಕ್ಕ | | | |
| **I.** | ಜಮೆ : | | | |
| | ಭಾರತ ಸರ್ಕಾರದಿಂದ ಸಾಲ | 1179.41 | 1187.52 | 1990.71 |
| | ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ) | -233.98 | -233.98 | -465.27 |
| | ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ | 1200.00 | 3200.00 | 1200.00 |
| | ಸಾಲಗಳು ಮತ್ತು ಮುಂಗಡಗಳ ವಸೂಲಿ | 44.61 | 44.61 | 49.07 |
| | ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ | 3813.01 | 1943.01 | 4390.68 |
| | **ಒಟ್ಟು-ಬಿ. I** | **6003.05** | **6141.16** | **7165.19** |
| **II.** | ಬಟವಾಡೆ : | | | |
| | ಬಂಡವಾಳ ವೆಚ್ಚ (ನಿವ್ವಳ) | 6553.52 | 8019.44 | 7507.23 |
| | ಕೇಂದ್ರ ಸಾಲಗಳ ಮರುಸಂದಾಯ | 464.05 | 433.47 | 463.73 |
| | ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ | 256.36 | 247.02 | 370.47 |
| | ಸಾಲಗಳ ಮತ್ತು ಮುಂಗಡಗಳ ಬಟವಾಡೆ | 236.19 | 228.56 | 473.48 |
| | **ಒಟ್ಟು-ಬಿ. II** | **7510.12** | **8928.49** | **8814.91** |
| ಬಿ. | ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ | **-1507.07** | **-2787.33** | **-1649.72** |
| ಸಿ. | ವರ್ಷದ ಒಟ್ಟು ಹೆಚ್ಚಳ / ಕೊರತೆ | **27.47** | **44.21** | **-23.06** |
| ಡಿ. | ಮುಕ್ತಾಯ ಶಿಲ್ಕು ಕಳೆದಾಗ | **79.04** | **96.37** | **73.31** |

## ಅನುಬಂಧ - I

### 2007-2008 ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

| ವಿಭಾಗ | ಕೋಟಿ ರೂ.ಗಳಲ್ಲಿ | ಶೇಕಡಾ ಪ್ರಮಾಣ |
|---|---|---|
| **ಎ. ಆರ್ಥಿಕ ಸೇವೆಗಳು** | | |
| ಕೃಷಿ ಮತ್ತು ಸಂಬಂಧಪಟ್ಟ ಸೇವೆ | 1255.05 | 7.06 |
| ಗ್ರಾಮೀಣ ಅಭಿವೃದ್ಧಿ | 1186.12 | 6.67 |
| ವಿಶೇಷ ಪ್ರದೇಶ ಯೋಜನೆ | 146.29 | 0.82 |
| ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 3145.77 | 17.69 |
| ಶಕ್ತಿ ಮೂಲಗಳು | 2102.12 | 11.82 |
| ಕೈಗಾರಿಕೆ ಮತ್ತು ಖನಿಜಗಳು | 435.60 | 2.45 |
| ಸಾರಿಗೆ | 2204.04 | 12.39 |
| ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 29.09 | 0.16 |
| ಸಾಮಾನ್ಯ ಆರ್ಥಿಕ ಸೇವೆಗಳು | 206.43 | 1.16 |
| **ಬಿ. ಸಮಾಜ ಸೇವೆಗಳು** | | |
| ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ | 1600.75 | 9.00 |
| ಆರೋಗ್ಯ | 617.06 | 3.47 |
| ನೀರು ಸರಬರಾಜು ಮತ್ತು ನೈರ್ಮಲ್ಯ | 1042.31 | 5.86 |
| ವಸತಿ ಮತ್ತು ನಗರಾಭಿವೃದ್ಧಿ | 2045.43 | 11.50 |
| ವಾರ್ತಾ ಮತ್ತು ಪ್ರಚಾರ | 7.10 | 0.04 |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ | 1192.27 | 6.70 |
| ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ | 80.50 | 0.45 |
| ಕಾರ್ಮಿಕ ಮತ್ತು ಉದ್ಯೋಗ | 486.63 | 2.74 |
| **ಸಿ. ಸಾಮಾನ್ಯ ಸೇವೆಗಳು** | | |
| ಒಟ್ಟು | **17782.56** | **100.00** |

# ಅನುಬಂಧ

## ಪ್ರಸ್ತುತ ಮತ್ತು ಪ್ರಸ್ತಾವಿತ ದರಗಳು

| ಕ್ರ. ಸಂ. | ವಿವರ | ಪ್ರಸ್ತುತ ಶುಲ್ಕ (ರೂ.ಗಳಲ್ಲಿ) | ಪ್ರಸ್ತಾವಿತ ಶುಲ್ಕ (ರೂ.ಗಳಲ್ಲಿ) |
|---|---|---|---|
| 01 | <u>ಚಿಲ್ಲರೆ ಮದ್ಯದ ಸನ್ನದುಗಳು (ಸಿಎಲ್-2)</u> | | |
| | ಅ) 20 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ನಗರಸಭೆಗಳು | 2,23,000 | 4,46,000 |
| | ಆ) ಇತರೆ ನಗರ ಸಭೆಗಳು | 1,82,000 | 3,64,000 |
| | ಇ) ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು | 1,65,000 | 3,30,000 |
| | ಈ) ಟೌನ್ ಮುನಿಸಿಪಲ್ ಕೌನ್ಸಿಲ್‌ಗಳು/ಟೌನ್ ಪಂಚಾಯತ್‌ಗಳು | 1,25,000 | 2,50,000 |
| | ಉ) ಇತರೆ ಪ್ರದೇಶಗಳು | 1,00,000 | 2,00,000 |
| 02 | ಕ್ಲಬ್ ಸನ್ನದುಗಳು (ಸಿಎಲ್-4) | | |
| | ಅ) 20 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ನಗರಸಭೆಗಳು | 1,50,000 | 5,00,000 |
| | ಆ) ಇತರೆ ನಗರ ಸಭೆಗಳು | 1,00.000 | 4,00,000 |
| | ಇ) ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು | 80,000 | 3,00,000 |

| | | | |
|---|---|---|---|
| | ಈ) ಟೌನ್ ಮುನಿಸಿಪಲ್ ಕೌನ್ಸಿಲ್‌ಗಳು/ಟೌನ್ ಪಂಚಾಯತ್‌ಗಳು<br>ಉ) ಇತರೆ ಪ್ರದೇಶಗಳು | 60,000<br>50,000 | 2,50,000<br>2,00,000 |
| 03 | ಸಾಂದರ್ಭಿಕ ಸನ್ನದುಗಳು (ಸಿಎಲ್-5) | 1,000 | 10,000 |
| 04 | ಸ್ಟಾರ್ ಹೋಟೆಲ್ ಸನ್ನದುಗಳು (ಸಿಎಲ್-6ಎ) | 4,00,000 | 8,00,000 |
| 05 | <u>ಹೋಟೆಲ್‌ಗಳು ಮತ್ತು ಬೋರ್ಡಿಂಗ್ ಹೌಸ್‌ಗಳು (ಸಿಎಲ್-7)</u><br>ಅ) 20 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ನಗರಸಭೆಗಳು<br>ಆ) ಇತರೆ ನಗರ ಸಭೆಗಳು<br>ಇ) ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು<br>ಈ) ಟೌನ್ ಮುನಿಸಿಪಲ್ ಕೌನ್ಸಿಲ್‌ಗಳು/ಟೌನ್ ಪಂಚಾಯತ್‌ಗಳು<br>ಉ) ಇತರೆ ಪ್ರದೇಶಗಳು | <br>3,30,000<br>2,90,000<br>2,15,000<br>1,82,000<br>1,40,000 | <br>6,60,000<br>5,80,000<br>4,30,000<br>3,64,000<br>2,80,000 |
| 06 | <u>ಬಾರ್‌ಗಳು (ಸಿಎಲ್-9)</u><br>ಅ) 20 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ನಗರಸಭೆಗಳು<br>ಆ) ಇತರೆ ನಗರ ಸಭೆಗಳು<br>ಇ) ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು<br>ಈ) ಟೌನ್ ಮುನಿಸಿಪಲ್ ಕೌನ್ಸಿಲ್‌ಗಳು/ಟೌನ್ ಪಂಚಾಯತ್‌ಗಳು<br>ಉ) ಇತರೆ ಪ್ರದೇಶಗಳು | <br>3,00,000<br>2,31,000<br>1,82,000<br>1,30,000<br>1,00,000 | <br>6,00,000<br>4,62,000<br>3,64,000<br>2,60,000<br>2,00,000 |

# ಅನುಬಂಧ-1

## ಕರ್ನಾಟಕ ಮುದ್ರಾಂಕ ಕಾಯಿದೆ 1957 ರ ಅನುಸೂಚಿಯ ಉದ್ದೇಶಿತ ಬದಲಾವಣೆಗಳು

| ಕ್ರ.ಸಂ | ಕಂಡಿಕೆ | ಅನುಚ್ಛೇದ | ಪ್ರಸ್ತುತ | | ಉದ್ದೇಶಿತ | |
|---|---|---|---|---|---|---|
| | | | ವಿವರಣೆ | ದರ | ವಿವರಣೆ | ದರ |
| | | | | | | |
| 1 | ಕರಾರು ಅಥವಾ ಕರಾರು ಜ್ಞಾಪನ | 5(ಇ) (ii) (ಎ) (iv) | ಪ್ರತ್ಯೇಕ ಮೊಖ್ತ್ಯಾರನಾಮೆ ಉಲ್ಲೇಖದ ಸಂಬಂಧಪಟ್ಟಂತೆ | ಇಲ್ಲ | ಪ್ರತ್ಯೇಕ ಮೊಖ್ತ್ಯಾರನಾಮೆ ಬರೆದುಕೊಟ್ಟಿರುವುದನ್ನು ಕರಾರಿನಲ್ಲಿ ಅದನ್ನು ಉಲ್ಲೇಖಿಸಿದಾಗ ಅಂತಹದ್ದನ್ನು ಸ್ವಾಧೀನ ಸಹಿತವೆಂದು ಪರಿಗಣಿಸತಕ್ಕದ್ದು. | ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಣ ದರದಂತೆ |
| 2 | ಕರಾರು ಅಥವಾ ಕರಾರು ಜ್ಞಾಪನ | 5 (ಎಫ್) | ಅಭಿವೃದ್ಧಿದಾರ ಅಥವಾ ಪ್ರಮೋಟರ್‌ನಿಗೆ ಅಧಿಕಾರ ನೀಣಿದ ಬಗ್ಗೆ ಬರೆದು ಕೊಟ್ಟ ಕರಾರು | ರೂ. 1000/- | ಸ್ವತ್ತಿನ ಮಾರುಕಟ್ಟೆ ಮೌಲ್ಯವು<br>1. ಒಂದು ಕೋಟಿ ಮೀರದಿರುವಲ್ಲಿ<br>2. ಒಂದು ಕೋಟಿ ಮೀರಿದ್ದು ಆದರೆ ಎರಡು ಕೋಟಿ ಮೀರದಿರುವಲ್ಲಿ<br>3. ಎರಡು ಕೋಟಿ ಮೀರಿದ್ದು ಆದರೆ ಐದು ಕೋಟಿ ಮೀರದಿರುವಲ್ಲಿ<br>4. ಐದು ಕೋಟಿ ಮೀರಿದ್ದು ಆದರೆ ಹತ್ತು ಕೋಟಿ ಮೀರದಿರುವಲ್ಲಿ<br>5. ಹತ್ತು ಕೋಟಿ ಮೀರಿದ್ದಲ್ಲಿ | ರೂ. 10,000/-<br>ರೂ. 20,000/-<br>ರೂ. 50,000/-<br>ರೂ. 1,00,000/-<br>ರೂ. 1,50,000/- |
| 3 | ಹಕ್ಕುಪತ್ರಗಳ ನಿಕ್ಷೇಪಕ್ಕೆ ಸಂಬಂಧಿಸಿದ ಕರಾರು | 6(1) (ಎ) | ಸಾಲಿನ ಮೊಬಲಗು ರೂ. 10,000/- ಮೀರಿದ್ದಲ್ಲಿ | 0.5% | 1. ವಾಣಿಜ್ಯ ಬಳಕೆಗಾಗಿ ಸ್ವತ್ತಿನ ಅಭಿವೃದ್ಧಿಪಡಿಸುವ ಉದ್ದೇಶಕ್ಕೆ. | ಶೇಕಡ 0.5% ರಂತೆ ಗರಿಷ್ಠ ಐದು ಲಕ್ಷ ರೂಪಾಯಿಗಳು.<br>ಶೇಕಡ 0.5% ರಂತೆ ಗರಿಷ್ಠ |

| | | | | | | |
|---|---|---|---|---|---|---|
| | | | | | 2. ವಾಸದ ಬಳಕೆಗಾಗಿ ಸ್ವತ್ತಿನ ಅಭಿವೃದ್ಧಿಪಡಿಸುವ ಉದ್ದೇಶಕ್ಕೆ<br>3.ಬೇರೆ ಯಾವುದೇ ಉದ್ದೇಶಕ್ಕೆ. | ಐವತ್ತಾರು ಸಾವಿರ ರೂಪಾಯಿಗಳು.<br>ಅಡ್ ವಾಲೊರಂ ದರದಂತೆ. |
| 4 | ಐತೀರ್ಪು(ಅವಾರ್ಡ್) | 11 | (ಅ) ಸ್ವತ್ತಿನ ಮೊಬಲಗು ಅಥವಾ ಮೌಲ್ಯವು 1000/- ರೂಪಾಯಿ ಗಳನ್ನು ಮೀರದಿರುವಲ್ಲಿ<br>(ಬಿ) ಅದು 1000/- ರೂಪಾಯಿಗಳನ್ನು ಮೀರಿದ್ದು ಆದರೆ 5000/- ರೂಪಾಯಿ ಗಳನ್ನು ಮೀರದಿದ್ದರೆ ಮತ್ತು 5000/- ರೂಪಾಯಿಗಳಿಗಿಂತ ಹೆಚ್ಚಿನ ಪ್ರತೀ ಹೆಚ್ಚುವರಿ 1000/- ರೂಪಾಯಿಗಳು ಅಥವಾ ಅದರ ಭಾಗಕ್ಕೆ | ಅಂತಹ ಮೊಬಲಗಿಗಾಗಿ ಬಾಂಡ್ ಪತ್ರದಂತೆ (ನಂ.12) ದರ.<br>ನಲವತ್ತು ರೂಪಾಯಿಗಳು | ಸ್ವತ್ತಿನ ಮೊಬಲಗು ಅಥವಾ ಮಾರುಕಟ್ಟೆ ಮೌಲ್ಯದಲ್ಲಿ ಯಾವುದು ಹೆಚ್ಚಿನದೋ ಅದರ ಮೇಲೆ ಮುದ್ರಾಂಕ ಸುಂಕವನ್ನು ಲೆಕ್ಕ ಹಾಕುವುದು. | ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡ 5% ರಂತೆ. |
| 5 | ಹಸ್ತಾಂತರಣ | 20(1) | ಕ್ರಯ ದರುಗಳು ಮತ್ತು ಇತರೆ ಹಸ್ತಾಂತರಣಗಳು | 7.5% | ಅಂಗೀಕೃತ ವಿಮಾ ಕಂಪನಿ ಗಳಿಂದ ನೀಡಲ್ಪಟ್ಟ ಹಕ್ಕು ವಿಮಾಪಾಲಿಸಿ ಹೊಂದಿದ ಹಸ್ತಾಂತರಣ ಪತ್ರಗಳು. | 7% |
| 6 | ಕಂಪನಿಗಳ ಸಂಯೋಜನೆ | 20(4) | ಕಂಪನಿ ಕಾಯಿದೆ 1956 ರ ಕಲಂ 394 ರ ಅಡಿ ಸಂಯೋಜನೆಗೊಳ್ಳುವ ಕಂಪನಿಗಳ ಬಗ್ಗೆ ಉಚ್ಚ ನ್ಯಾಯಾಲಯವು ಹೊರಡಿಸುವ ಆದೇಶ | ಸರಾಸರಿ ಶೇರುಮೌಲ್ಯ ಹಾಗೂ ಪ್ರತಿಫಲ ಯಾವುದಾದರೂ ಇದ್ದರೆ ಅದರ ಮೇಲೆ ಶೇಕಡ 10% ರಂತೆ ಆದಾಗ್ಗೆಯೂ ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯದ | (1) ಅಧೀನ ಕಂಪನಿಯ ಐಕ್ಯ ಹೊಂದಿದ ಸಂಯೋಜನೆಗಳಿಗಾಗಿ | ಹಸ್ತಾಂತರ ಕರ್ತ ಕಂಪನಿಯ (ಕನ್ವೇಯನ್ಸ್) ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಣ ದರದಂತೆ ಅಥವಾ ಶೇರುಗಳ್ಳ ಃಛಿಹೆ ಮಾರುಕಟ್ಟೆ ಮೌಲ್ಯದ ಮೇಲೆ 0.7%ರಂತೆ. |

| | | | | | | |
|---|---|---|---|---|---|---|
| | | | | ಮೇಲೆ ಸುಂಕದ ಶೇ. 7% ಮೀರದಂತೆ ಅಥವಾ ಸರಾಸರಿ ಶೇರು ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡ 0.5% ರಂತೆ. | (2) ಪುನರ್ ನಿರ್ಮಾಣ ಅಥವಾ ಪುನರ್ ಐಕ್ಯತೆಯಾಗುವ ಕಂಪನಿಗೆ | ಫಲಾನುಭವಿ ಕಂಪನಿಗೆ ವರ್ಗಾವಣೆಯಾಗುವ ಹಸ್ತಾಂತರ ಕರ್ತ ಕಂಪನಿಯ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರತಿ (ಕನ್ವೇಯನ್ಸ್) ದರದಂತೆ ಅಥವಾ ಫಲಾನುಭವಿ ಕಂಪನಿಗೆ ಹಂಚಿಕೆಯಾಗುವ ಶೇರುಗಳ ಸರಾಸಲಿ ಮಾರುಕಟ್ಟೆ ಮೌಲ್ಯದ ಮೇಲೆ 0.7% ರಂತೆ. |
| 7 | ಮೊಖ್ತ್ಯಾರನಾಮೆ | 41(ಇಎ) | ಅಭಿವೃದ್ದಿಗಾರನಿಗೆ ಅಧಿಕಾರ ನೀಡುವಲ್ಲಿ | ರೂ. 1000/- | . ಮಾರುಕಟ್ಟೆ ಮೌಲ್ಯವು<br>1. ಒಂದು ಕೋಟಿ ಮೀರದಿರುವಲ್ಲಿ<br>2. ಒಂದು ಕೋಟಿ ಮೀರಿದ್ದು ಆದರೆ ಎರಡು ಕೋಟಿ ಮೀರದಿರುವಲ್ಲಿ<br>3. ಎರಡು ಕೋಟಿ ಮೀರಿದ್ದು ಆದರೆ ಐದು ಕೋಟಿ ಮೀರದಿರುವಲ್ಲಿ.<br>4. ಐದು ಕೋಟಿ ಮೀರಿದ್ದು ಆದರೆ ಹತ್ತು ಕೋಟಿ ಮೀರದಿರುವಲ್ಲಿ<br>5. ಹತ್ತು ಕೋಟಿ ಮೀರಿದಲ್ಲಿ | <br>ರೂ. 10,000/-<br>ರೂ. 20,000/-<br>ರೂ. 50,000/-<br>ರೂ. 1,00,000/-<br>ರೂ. 1,50,000/- |
| 8 | ಬಿಡುಗಡೆ | 45(ಎ) (i)<br>45(ಎ) (ii) | ಪ್ರತಿಫಲ ಇಲ್ಲದಿರುವಲ್ಲಿ<br>ಪ್ರತಿಫಲವಿದ್ದಲ್ಲಿ | ದಸ್ತಾವೇಜಿನಲ್ಲಿ ವಿವರಿಸಲಾದಂತ ಸ್ವತ್ತಿನ ಮೌಲ್ಯದ ಮೇಲೆ ಶೇಕಡ 5% ರಂತೆ<br>ದಸ್ತಾವೇಜಿನಲ್ಲಿ ವಿವರಿಸಲಾದಂಥ ಸ್ವತ್ತಿನ ಪ್ರತಿಫಲದ ಮೇಲೆ ಹಸ್ತಾಂತರಣ ದರದಂತೆ | ಪ್ರತಿಫಲ ಇಲ್ಲದಿರುವಲ್ಲಿ<br>ಪ್ರತಿಫಲ ಇರುವಲ್ಲಿ | ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ 2.5% ರಂತೆ.<br>ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರ ಪತ್ರದ ದರದ ಅರ್ಧದಷ್ಟು ದರ. |

| | | | | | | |
|---|---|---|---|---|---|---|
| 9 | ನ್ಯಾಸ | 54 | ಘೋಷಣೆಯನ್ನು ಮಾಡಿರುವಾಗ | ಗರಿಷ್ಟ ರೂ. 500/- | (i) ನ್ಯಾಸದ ಬಂಡವಾಳವಾಗಿ ಹಣವನ್ನು ಹಸ್ತಾಂತರಣ ಮಾಡುವಲ್ಲಿ<br>(ii) ನ್ಯಾಸ ಕರ್ತನು ಸ್ವತ:ಏಕೈಕ ಧರ್ಮದರ್ಶಿಯಾಗಿ ಸ್ಥಿರಾಸ್ತಿಯನ್ನು ಹಸ್ತಾಂತರಣ ಮಾಡುವಲ್ಲಿ<br>(iii) ಸ್ಥಿರಾಸ್ತಿಯು ಹಸ್ತಾಂತರಣ ವಾದಲ್ಲಿ ಮತ್ತುನ್ಯಾಸಕರ್ತನು ಧರ್ಮದರ್ಶಿಗಳಲ್ಲಿ ಒಬ್ಬರಾಗಿದ್ದಲ್ಲಿ. | ರೂ. 500/-<br>ರೂ. 500/-<br>ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಹಸ್ತಾಂತರಣ ದರದಂತೆ. |

**ಅನುಬಂಧ–5**

**ಭಾಗ–ಎ [ಕಲಮು 3(1) ನ್ನು ನೋಡಿ**

| ಕ್ರ. ಸಂ | ಐಟಂ ಸಂ | ವಾಹನದ ವರ್ಗ | ಹಾಲಿ ಪ್ರತಿ ತ್ರೈಮಾಸಿಕ ತೆರಿಗೆ ದರ | ಐಟಂ ಸಂ | ವಾಹನದ ವರ್ಗ | ಪ್ರಸ್ತಾಪಿತ ಪ್ರತಿ ತ್ರೈಮಾಸಿಕ ತೆರಿಗೆ ದರ ರೂ. |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | 3ಎ | ಮಲ್ಟಿ ಆಕ್ಸಲ್ಡ್ ಸರಕು ವಾಹನಗಳು – ಐಟಂ ಸಂ 10 ರಲ್ಲಿ ತೆರಿಗೆ ವಿಧಿಸಲ್ಪಡುವ ಆರ್ಟಿಕುಲೇಟೆಡ್ ವಾಹನಗಳನ್ನು ಹೊರತುಪಡಿಸಿ 15000 ಕೆ.ಜಿ. ಹೇರು ಭಾರ ಮೀರುವ ವಾಹನ | 2200 ಮತ್ತು 15000 ಕೆಜಿ ಮೀರಿದ ಪ್ರತಿ 250 ಕೆಜಿ ಅಥವಾ ಅದರ ಭಾಗಶಃ ರೂ.50/– ರಂತೆ | 3ಎ | ಮಲ್ಟಿ ಆಕ್ಸಲ್ಡ್ ಸರಕು ವಾಹನಗಳು – ಐಟಂ ಸಂ.10 ರಲ್ಲಿ ತೆರಿಗೆ ವಿಧಿಸಲ್ಪಡುವ ಆರ್ಟಿಕುಲೇಟೆಡ್ ವಾಹನಗಳನ್ನು ಹೊರತುಪಡಿಸಿ 15000 ಕೆ.ಜಿ. ಹೇರು ಭಾರ ಮೀರುವ ವಾಹನ | 2200 ಮತ್ತು 15000 ಕೆಜಿ ಮೀರಿದ ಪ್ರತಿ 250 ಕೆಜಿ ಅಥವಾ ಅದರ ಭಾಗಶಃ ರೂ.75/– ರಂತೆ |
| 2 | 5(ಎ)(i) | ಮೋಟಾರು ವಾಹನ (ಒಪ್ಪಂದದ ವಾಹನ) ಬಾಡಿಗೆಗೆ ಅಥವಾ ಸಂಭಾವನೆಗೆ 1988ರ ಮೋಟಾರು ವಾಹನ ಕಾಯ್ದೆ ಕಲಮು 74 ರಡಿಯಲ್ಲಿ ನೀಡಲಾದ ರಹದಾರಿ ಹೊಂದಿರುವ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮ | 750.00 | 5(ಎ) (i) | ಮೋಟಾರು ವಾಹನ (ಒಪ್ಪಂದದ ವಾಹನ) ಬಾಡಿಗೆಗೆ ಅಥವಾ ಸಂಭಾವನೆಗೆ ನೀಡಲಾದ ರಹದಾರಿ ಹೊಂದಿರುವ ಹಾಗೂ ಕರ್ನಾಟಕ ಮೋಟಾರು ವಾಹನಗಳ ನಿಯಮ 1989ರ ನಿಯಮ 151(2) ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು | 1000.00 |

| | | | | | | |
|---|---|---|---|---|---|---|
| | | 1989ರ ನಿಯಮ 151(2) ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | | | ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) 12ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | |
| 3 | 5(ಎ) (ii) | ಮೋಟಾರು ವಾಹನ (ಒಪ್ಪಂದದ ವಾಹನ) ಬಾಡಿಗೆಗೆ ಅಥವಾ ಸಂಭಾವನೆಗೆ 1988ರ ಮೋಟಾರು ವಾಹನ ಕಾಯ್ದೆ ಕಲಮು 74 ರಡಿಯಲ್ಲಿ ನೀಡಲಾದ ರಹದಾರಿ ಹೊಂದಿರುವ ಹಾಗೂ ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 128ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) 12 ಕ್ಕಿಂತ ಹೆಚ್ಚು ಜನ ಪ್ರಯಾಣಿಕರನ್ನು ಒಯ್ಯಲು | 2000.00 | 5(ಎ) (ii) | ಮೋಟಾರು ವಾಹನ (ಒಪ್ಪಂದದ ವಾಹನ) ಬಾಡಿಗೆಗೆ ಅಥವಾ ಸಂಭಾವನೆಗೆ ನೀಡಲಾದ ರಹದಾರಿ ಹೊಂದಿರುವ ಹಾಗೂ ಐಟಂ ನಂ.5 (ಎ) (i) ರಲ್ಲಿ ವಿಧಿಸಬಹುದಾದ ವಾಹನಗಳನ್ನು ಹೊರತು ಪಡಿಸಿ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) 12 ಕ್ಕಿಂತ ಹೆಚ್ಚು ಜನ ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | 2500.00 |

| | | | | | | |
|---|---|---|---|---|---|---|
| | | ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | | | | |
| 4 | 5ಬಿ | ಮೋಟಾರು ವಾಹನ ಬಾಡಿಗೆಗೆ ಅಥವಾ ಸಂಭಾವನೆಗೆ ಕರ್ನಾಟಕ ಮೋಟಾರು ವಾಹನಗಳ ನಿಯಮ 1989ರ ನಿಯಮ 151(2) ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988ರ ಕಲಮು 88(8) ರಂತೆ ವಿಶೇಷ ರಹದಾರಿ ಹೊಂದಿರುವ (ಚಾಲಕ ಮತ್ತು ನಿರ್ವಾಹಕ/ಅಟೆಂಡರ್ ಹೊರತುಪಡಿಸಿ) 12 ಕ್ಕಿಂತ ಹೆಚ್ಚು ಜನ ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | 600.00 | 5ಬಿ | ಮೋಟಾರು ವಾಹನ ಬಾಡಿಗೆಗೆ ಅಥವಾ ಸಂಭಾವನೆಗೆ ಕರ್ನಾಟಕ ಮೋಟಾರು ವಾಹನಗಳ ನಿಯಮ 1989ರ ನಿಯಮ 151(2) ಹಾಗೂ ಕೇಂದ್ರ ಮೋಟಾರು ವಾಹನ ಕಾಯ್ದೆ 1988ರ ಕಲಮು 88(8) ರಂತೆ ವಿಶೇಷ ರಹದಾರಿ ಹೊಂದಿರುವ (ಚಾಲಕ ಮತ್ತು ನಿರ್ವಾಹಕ/ಅಟೆಂಡರ್ ಹೊರತುಪಡಿಸಿ) 12 ಕ್ಕಿಂತ ಹೆಚ್ಚು ಜನ ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಪ್ರತಿ ಪ್ರಯಾಣಿಕನಿಗೆ | 700.00 |
| 5 | 6ಬಿ | 160 ಅಶ್ವ ಶಕ್ತಿ ಸಾಮರ್ಥ್ಯವಿರುವ ಅಥವಾ ಹೆಚ್ಚಿನ ಹವಾನಿಯಂತ್ರಿತ ಇಂಟಗ್ರಲ್/ಮೋನೋಕಾಕ್ ಮೋಟಾರು ವಾಹನ ಮತ್ತು 1989ನೇ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 128ಕ್ಕೆ | | 6ಬಿ | ತೆಗೆದು ಹಾಕಲಾಗಿದೆ. | |

| | | | | | | |
|---|---|---|---|---|---|---|
| | | ಅನುಗುಣವಾಗಿರುವ ಅಥವಾ 1993ನೇ ಮೋಟಾರು ವಾಹನ (ಅಖಿಲ ಭಾರತ ಪರವಾನಿಗೆಯ ಪ್ರವಾಸಿ ತೆರಿಗೆ ಪ್ರವರ್ತಕರು) ನಿಯಮಕ್ಕೆ ಒಳಪಡುವ ಹಾಗೂ 1988ನೇ ಮೋಟಾರು ವಾಹನ ಕಾಯ್ದೆಯ ಪ್ರಕರಣ 88(9)ರ ಅಡಿಯಲ್ಲಿ ಅಖಿಲ ಭಾರತ ಪರವಾನಿಗೆ ಹೊಂದಿರುವ ಬಾಡಿಗೆಗೆ ಅಥವಾ ಸಂಭಾವನೆಗೆ 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತು ಪಡಿಸಿ) ಪ್ರತಿ ಪ್ರಯಾಣಿಕನಿಗೆ | | | | |
| 6 | 6ಎ | ಮೋಟಾರು ವಾಹನ (ಸುಖಾಸೀನ ಬಸ್) ಬಾಡಿಗೆಗೆ ಅಥವಾ ಸಂಭಾವನೆಗೆ 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಹಾಗೂ 1989ನೇ ಕೇಂದ್ರ | 2000.00 | 6 | ಐಟಂ ನಂ.6–ಎ ನ್ನು ಐಟಂ.ನಂ.6 ಎಂದು ಓದಿ ಕೊಳ್ಳುವುದು<br><br>ಮೋಟಾರು ವಾಹನ (ಸುಖಾಸೀನ ಬಸ್) ಬಾಡಿಗೆಗೆ ಅಥವಾ ಸಂಭಾವನೆಗೆ 12 ಕ್ಕಿಂತ | 2500.00 |

| | | | | | | |
|---|---|---|---|---|---|---|
| | | ಮೋಟಾರು ವಾಹನ ನಿಯಮಗಳ ನಿಯಮ 128ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) ಅಥವಾ 1993 ನೇ ಮೋಟಾರು ವಾಹನ (ಅಖಿಲ ಭಾರತ ಪ್ರವಾಸಿ ಪರವಾನಿಗೆಯ ಸಾರಿಗೆ ಪ್ರವರ್ತಕರು) ನಿಯಮದ ಅಡಿ ಬಾಡಿಗೆಗೆ ಅಥವಾ ಸಂಭಾವನೆಗೆ 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) ಪ್ರತಿ ಪ್ರಯಾಣಿಕನಿಗೆ | | | ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ ಹಾಗೂ 1989ನೇ ಕೇಂದ್ರ ಮೋಟಾರು ವಾಹನ ನಿಯಮಗಳ ನಿಯಮ 128ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) ಅಥವಾ 1993 ನೇ ಮೋಟಾರು ವಾಹನ (ಅಖಿಲ ಭಾರತ ಪ್ರವಾಸಿ ಪರವಾನಿಗೆಯ ಸಾರಿಗೆ ಪ್ರವರ್ತಕರು) ನಿಯಮದ ಅಡಿ ಬಾಡಿಗೆಗೆ ಅಥವಾ ಸಂಭಾವನೆಗೆ 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತುಪಡಿಸಿ) ಪ್ರತಿ ಪ್ರಯಾಣಿಕನಿಗೆ | |
| 7 | 7 | ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸುವ ನೆಲ ಮಿಸ್ತೀರ್ಣ ಆಧರಿಸಿದ ಕ್ಯಾಂಪರ್ಸ್ ವ್ಯಾನ್‌ಗೆ ಪ್ರತಿ ಚದುರ ಮೀಟರ್‌ಗೆ. | 3000.00 | 7(ಎ) | ಐಟಂ ನಂ.7ನ್ನು 7(ಎ) ಆಗಿ ಓದುವುದು. ಬಾಡಿಗೆಗೆ ಅಥವಾ ಸಂಭಾವನೆಗೆ ಉಪಯೋಗಿಸುವ ನೆಲ ವಿಸ್ತೀರ್ಣ ಆಧರಿಸಿದ ಕ್ಯಾಂಪರ್ಸ್ ವ್ಯಾನ್‌ಗೆ ಪ್ರತಿ ಚದುರ ಮೀಟರ್‌ಗೆ. | 4700.00 |

| | | | | | | |
|---|---|---|---|---|---|---|
| 8 | | ಹೊಸದಾಗಿ ಸೇರಿಸಲಾಗಿದೆ | | 7(ಬಿ) | ಸ್ಲೀಪರ್ ಕೋಚ್‌ಗಳಾಗಿ ನೋಂದಣಿಯಾಗಿ 12 ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಒಯ್ಯಲು ಅನುಮತಿ ಪಡೆದಿರುವ (ಚಾಲಕ ಮತ್ತು ನಿರ್ವಾಹಕ ಅಥವಾ ಅಟೆಂಡರ್ ಹೊರತುಪಡಿಸಿ) ಪ್ರತಿ ಸ್ಲೀಪರ್‌ಗೆ | 3000.00 |
| 9 | 8ಎ | ಓಮ್ನಿ ಬಸ್‌ಗಳು ಮತ್ತು ಖಾಸಗೀ ಸೇವಾ ವಾಹನಗಳು ಲೀಸ್ (ಭೋಗ್ಯ) ಮೇರೆಗೆ ಕೈಗಾರಿಕಾ ಸ್ವಾಮ್ಯ ಅಥವಾ ಕಂಪನಿಗಳು ತಮ್ಮ ಉದ್ಯೋಗಿಗಳನ್ನು ವಾಸ ಸ್ಥಳದಿಂದ ಕಾರ್ಖಾನೆ/ಕಂಪನಿಗೆ ಹಾಗೆಯೇ ಪುನಃ ವಾಸಸ್ಥಳಕ್ಕೆ ಕರೆದೊಯ್ಯುವ ಸಾರಿಗೆ ಅನುಕೂಲತೆಗಾಗಿ ಬಳಸುವಂತಹ ಪರವಾನಗಿ ಹೊಂದಿರುವ ಇಂತಹ ವಾಹನಗಳ ಕೈಗಾರಿಕಾ ಸ್ವಾಮ್ಯ ಅಥವಾ ಕಂಪನಿಗಳ<br>(ಎ) 5 ಚ.ಮೀ.ಗೆ ಮೀರಿದ ಆದರೆ 6 ಚ.ಮೀ.ಮೀಟರ್ ಮೀರಿದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳ – ಪ್ರತಿ ಚ.ಮೀ.ಗೆ | 1000.00 | | ಓಮ್ನಿ ಬಸ್‌ಗಳು ಮತ್ತು ಖಾಸಗೀ ಸೇವಾ ವಾಹನಗಳು ಲೀಸ್ (ಭೋಗ್ಯ) ಮೇರೆಗೆ ಕೈಗಾರಿಕಾ ಸ್ವಾಮ್ಯ ಅಥವಾ ಕಂಪನಿಗಳು ತಮ್ಮ ಉದ್ಯೋಗಿಗಳನ್ನು ವಾಸ ಸ್ಥಳದಿಂದ ಕಾರ್ಖಾನೆ/ಕಂಪನಿಗೆ ಹಾಗೆಯೇ ಪುನಃ ವಾಸಸ್ಥಳಕ್ಕೆ ಕರೆದೊಯ್ಯುವ ಸಾರಿಗೆ ಅನುಕೂಲತೆಗಾಗಿ ಬಳಸುವಂತಹ ಪರವಾನಗಿ ಹೊಂದಿರುವ ಇಂತಹ ವಾಹನಗಳ ಕೈಗಾರಿಕಾ ಸ್ವಾಮ್ಯ ಅಥವಾ ಕಂಪನಿಗಳ<br>(ಎ) 5 ಚ.ಮೀ.ಗೆ ಮೀರಿದ ಆದರೆ 6 ಚ.ಮೀ.ಮೀಟರ್‌ಗೆ ಮೀರದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳ – ಪ್ರತಿ ಚ.ಮೀ.ಗೆ<br>(ಬಿ) 6 ಚ.ಮೀ.ಗೆ ಮೀರಿದ ಆದರೆ 9 | 1100.00<br>1200.00 |

| | | | | | | |
|---|---|---|---|---|---|---|
| | | (ಬಿ) 6 ಚ.ಮೀ.ಗೆ ಮೀರಿದ ಆದರೆ 9 ಚ.ಮೀ.ಗೆ ಮೀರದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀಗೆ<br>(ಸಿ) 9 ಚ.ಮೀ.ಗೆ ಮೀರಿದ ಆದರೆ 12 ಚ.ಮೀ.ಗೆ ಮೀರದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀ.ಗೆ<br>(ಡಿ) 12 ಚ.ಮೀ.ಗೆ ಮೀರಿದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀ.ಗೆ | 1050.00<br>1150.00<br>1300.00 | | ಚ.ಮೀ.ಗೆ ಮೀರದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀಗೆ<br>(ಸಿ) 9 ಚ.ಮೀ.ಗೆ ಮೀರಿದ ಆದರೆ 12 ಚ.ಮೀ.ಗೆ ಮೀರದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀ.ಗೆ<br>(ಡಿ) 12 ಚ.ಮೀ.ಗೆ ಮೀರಿದ ನೆಲ ವಿಸ್ತೀರ್ಣ ಹೊಂದಿರುವ ವಾಹನಗಳು – ಪ್ರತಿ ಚ.ಮೀ.ಗೆ | 1300.00<br>1500.00 |
| 10 | 10 | ಮೋಟಾರು ವಾಹನ ಸ್ವತಃ ಯಾವುದೇ ಸರಕುನ್ನು ಸಾಗಿಸಲಾಗದೇ (ನೀರು, ಇಂಧನ, ಅಕ್ಯುಮ್ಯುಲೇಟರ್ಸ್ ಮತ್ತಿತರ ಸಲಕರಣೆ, ವಾಹನ ಚಲಿಸಲು ಬೇಕಾದ ಅವಶ್ಯಕ ಬಿಡಿ ಉಪಕಣ ಹೊರತು ಪಡಿಸಿ) ಮುಖ್ಯವಾಗಿ ಹಾಲೇಜ್ ಮತ್ತು ಎಳೆಯಲು ಉದ್ದೇಶಿಸಲ್ಪಟ್ಟ ಟ್ರೇಲರ್‌ಗಳ ಭಾರವನ್ನು ಸೇರಿದಂತೆ ಒಟ್ಟು | | | ಮೋಟಾರು ವಾಹನ ಸ್ವತಃ ಯಾವುದೇ ಸರಕುನ್ನು ಸಾಗಿಸಲಾಗದೇ (ನೀರು, ಇಂಧನ, ಅಕ್ಯುಮ್ಯುಲೇಟರ್ಸ್ ಮತ್ತಿತರ ಸಲಕರಣೆ, ವಾಹನ ಚಲಿಸಲು ಬೇಕಾದ ಅವಶ್ಯಕ ಬಿಡಿ ಉಪಕರಣ ಹೊರತು ಪಡಿಸಿ) ಮುಖ್ಯವಾಗಿ ಹಾಲೇಜ್ ಮತ್ತು ಎಳೆಯಲು ಉದ್ದೇಶಿಸಲ್ಪಟ್ಟ ಟ್ರೇಲರ್‌ಗಳ ಭಾರವನ್ನು ಸೇರಿದಂತೆ ಒಟ್ಟು | |

| | | | | | | |
|---|---|---|---|---|---|---|
| | | (ಎ) 3000 ಕೆಜಿ ಮೀರದ<br>(ಬಿ) 3000 ಕೆಜಿ ಮೀರಿದ ಆದರೆ 5000 ಕೆಜಿ ಮೀರದ<br>(ಸಿ) 5000 ಕೆಜಿ ಮೀರಿದ ಆದರೆ 7000 ಕೆಜಿ ಮೀರದ<br>(ಡಿ) 7000 ಕೆಜಿ ಮೀರಿದ ಆದರೆ 9000 ಕೆಜಿ ಮೀರದ<br>(ಇ) 9000 ಕೆಜಿ ಮೀರಿದ ಆದರೆ 12000 ಕೆಜಿ ಮೀರದ<br>(ಎಫ್) 12000 ಕೆಜಿ ಮೀರಿದ ಆದರೆ 15000 ಕೆಜಿ ಮೀರದ<br>(ಜಿ) 15000 ಕೆಜಿ ಮೀರಿದ | 195.00<br>360.00<br>780.00<br>1365.00<br>1625.00<br>1785<br>2300+ಪ್ರತಿ 250 ಕೆಜಿ ಅಥವಾ ಅದರ ಭಾಗಶಃಕ್ಕೆ 35/- ರಂತೆ ಹೆಚ್ಚುವರಿ ಯಾಗಿ | | (ಎ) 3000 ಕೆಜಿ ಮೀರದ<br>(ಬಿ) 3000 ಕೆಜಿ ಮೀರಿದ ಆದರೆ 5000 ಕೆಜಿ ಮೀರದ<br>(ಸಿ) 5000 ಕೆಜಿ ಮೀರಿದ ಆದರೆ 7000 ಕೆಜಿ ಮೀರದ<br>(ಡಿ) 7000 ಕೆಜಿ ಮೀರಿದ ಆದರೆ 9000 ಕೆಜಿ ಮೀರದ<br>(ಇ) 9000 ಕೆಜಿ ಮೀರಿದ ಆದರೆ 12000 ಕೆಜಿ ಮೀರದ<br>(ಎಫ್) 12000 ಕೆಜಿ ಮೀರಿದ ಆದರೆ 15000 ಕೆಜಿ ಮೀರದ<br>(ಜಿ) 15000 ಕೆಜಿ ಮೀರಿದ | 195.00<br>360.00<br>780.00<br>1365.00<br>1625.00<br>1785.00<br>2300+ಪ್ರತಿ 250 ಕೆಜಿ ಅಥವಾ ಅದರ ಭಾಗಶಃಕ್ಕೆ 75/- ರಂತೆ ಹೆಚ್ಚುವರಿ ಯಾಗಿ |

**ಭಾಗ – ಎ – 1**
**ಕಲಂ 3(1) ನ್ನು ನೋಡಿ**
**ದ್ವಿಚಕ್ರ ವಾಹನಗಳ ಹಾಲಿ ಜೀವಾವಧಿ ತೆರಿಗೆ**

| ಐಟಂ | ವಾಹನ ವರ್ಗ | 75 ಸಿಸಿ ಮೀರಿದ ಮತ್ತು ವಾಹನ ಮೌಲ್ಯ ರೂ.50000 ಮೀರಿದ ವಾಹನಗಳಿಗೆ | ವಾಹನದ ಸಿಸಿ 75ಕ್ಕೆ ಮೀರಿ 300 ಸಿಸಿಗೆ ಮೀರದ ಮತ್ತು ವಾಹನ ಮೌಲ್ಯ ರೂ.50000 ಮೀರದ | ವಾಹನಗಳ ಸಿಸಿ 300ಕ್ಕಿಂತ ಹೆಚ್ಚು ಹೊಂದಿರುವ ಅಥವಾ ಸೈಡ್‌ಕಾರ್/ಟ್ರೇಲರ್ ಅಳವಡಿಸಿದಾಗ ವಾಹನ ಮೌಲ್ಯ ರೂ.50000 ಮೀರದ | ವಾಹನದ ಮೌಲ್ಯ ರೂ.50000 ಮೀರಿದ |
|---|---|---|---|---|---|
| 1 | 2 | 3 | 4 | 5 | 6 |
| ಎ | ಹೊಸ ವಾಹನದ ನೋಂದಣಿ ಸಮಯದಲ್ಲಿ | ವಾಹನ ಮೌಲ್ಯದ ಮೇಲೆ ಶೇ. 7 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 7 ರಷ್ಟು | ವಾಹನದ ಮೌಲ್ಯದ ಮೇಲೆ ಶೇ 7 ರಷ್ಟು | ವಾಹನದ ಮೌಲ್ಯದ ಮೇಲೆ ಶೇ 7 ರಷ್ಟು |
| ಬಿ | ವಾಹನವು ಈಗಾಗಲೇ ನೊಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ | | | | |

| | | | | | |
|---|---|---|---|---|---|
| 1 | 2 ವರ್ಷಗಳಿಗೆ ಮೀರದ | 93% | 93% | 93% | 93% |
| 2 | 2 ವರ್ಷಗಳಿಗೆ ಮೀರಿದ ಆದರೆ 3 | 87% | 87% | 87% | 87% |
| 3 | ವರ್ಷಗಳಿಗೆ ಮೀರದ | 81% | 81% | 81% | 81% |
| | 3 ವರ್ಷಗಳಿಗೆ ಮೀರಿದ ಆದರೆ 4 | | | | |
| 4 | ವರ್ಷಗಳಿಗೆ ಮೀರದ | 75% | 75% | 75% | 75% |
| | 4 ವರ್ಷಗಳಿಗೆ ಮೀರಿದ ಆದರೆ 5 | | | | |
| 5 | ವರ್ಷಗಳಿಗೆ ಮೀರದ | 69% | 69% | 69% | 69% |
| | 5 ವರ್ಷಗಳಿಗೆ ಮೀರಿದ ಆದರೆ 6 | | | | |
| 6 | ವರ್ಷಗಳಿಗೆ ಮೀರದ | 64% | 64% | 64% | 64% |
| | 6 ವರ್ಷಗಳಿಗೆ ಮೀರಿದ ಆದರೆ 7 | | | | |
| 7 | ವರ್ಷಗಳಿಗೆ ಮೀರದ | 59% | 59% | 59% | 59% |
| | 7 ವರ್ಷಗಳಿಗೆ ಮೀರಿದ ಆದರೆ 8 | | | | |
| 8 | ವರ್ಷಗಳಿಗೆ ಮೀರದ | 54% | 54% | 54% | 54% |
| | 8 ವರ್ಷಗಳಿಗೆ ಮೀರಿದ ಆದರೆ 9 | | | | |
| 9 | ವರ್ಷಗಳಿಗೆ ಮೀರದ | 49% | 49% | 49% | 49% |
| | 9 ವರ್ಷಗಳಿಗೆ ಮೀರಿದ ಆದರೆ 10 | | | | |
| 10 | ವರ್ಷಗಳಿಗೆ ಮೀರದ | 45% | 45% | 45% | 45% |
| | 10 ವರ್ಷಗಳಿಗೆ ಮೀರಿದ ಆದರೆ 11 | | | | |
| 11 | ವರ್ಷಗಳಿಗೆ ಮೀರದ | 41% | 41% | 41% | 41% |
| | 11 ವರ್ಷಗಳಿಗೆ ಮೀರಿದ ಆದರೆ 12 | | | | |

| | | | | | |
|---|---|---|---|---|---|
| 12 | ವರ್ಷಗಳಿಗೆ ಮೀರದ | 37% | 37% | 37% | 37% |
| 13 | 12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ | 33% | 33% | 33% | 33% |
| 14 | 13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ | 29% | 29% | 29% | 29% |
| 15 | 14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ<br>15 ವರ್ಷಗಳಿಗೆ ಮೀರಿದ | 25% | 25% | 25% | 25% |

ಭಾಗ–ಎ–1

ಕಲಂ 3(1) ನ್ನು ನೋಡಿ

ದ್ವಿಚಕ್ರ ವಾಹನಗಳ ಉದ್ದೇಶಿತ ಜೀವಾವಧಿ ತೆರಿಗೆ

| ಐಟಂ | ವಾಹನ ವರ್ಗ | ದ್ವಿಚಕ್ರ ವಾಹನ ಮೌಲ್ಯ ರೂ. 50000 ಮೀರದ | ದ್ವಿಚಕ್ರ ವಾಹನಗಳ ಮೌಲ್ಯ ರೂ.50000 ಮೀರಿದ |
|---|---|---|---|
| 1 | 2 | 3 | 4 |
| ಎ | ಹೊಸ ವಾಹನದ ನೋಂದಣಿ ಸಮಯದಲ್ಲಿ | ವಾಹನದ ಮೌಲ್ಯದ ಮೇಲೆ ಶೇ. 8 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 10 ರಷ್ಟು |

| | | | |
|---|---|---|---|
| ಬಿ | ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ | | |
| 1 | ನೋಂದಣಿಯಾದ ತಿಂಗಳಿನಿಂದ 2 ವರ್ಷಗಳಿಗೆ ಮೀರದ | 93% | 93% |
| 2 | 2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ | 87% | 87% |
| 3 | 3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ | 81% | 81% |
| 4 | 4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ | 75% | 75% |
| 5 | 5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ | 69% | 69% |
| 6 | 6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ | 64% | 64% |
| 7 | 7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ | 59% | 59% |
| 8 | 8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ | 54% | 54% |
| 9 | 9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ | 49% | 49% |

| | | | |
|---|---|---|---|
| 10 | 10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ | 45% | 45% |
| 11 | 11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ | 41% | 41% |
| 12 | 12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ | 37% | 37% |
| 13 | 13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ | 33% | 33% |
| 14 | 14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ | 29% | 29% |
| 15 | 15 ವರ್ಷಗಳಿಗೆ ಮೀರಿದ | 25% | 25% |

ಭಾಗ–ಎ–5

ಕಲಂ 3(1) ನ್ನು ನೋಡಿ

ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ ಹಾಗೂ ಖಾಸಗೀ ಸೇವಾ ವಾಹನಗಳ ಹಾಲಿ ಜೀವಾವಧಿ ತೆರಿಗೆ

| ಐಟಂ | ವಾಹನ ವರ್ಗ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ವರೆಗೆ ಮೌಲ್ಯ ರೂ.5.00 ಲಕ್ಷ ಮೀರದ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ವರೆಗೆ ಮೌಲ್ಯ ರೂ.5.00 ಲಕ್ಷ ಮೀರಿದ ಆದರೆ ರೂ.10 ಲಕ್ಷ ಮೀರದ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ಮೌಲ್ಯ ರೂ.10.00 ಲಕ್ಷ ಮೀರಿದ |
|---|---|---|---|---|
| 1 | 2 | 3 | 4 | 5 |
| ಎ | ಹೊಸ ವಾಹನದ ನೋಂದಣಿ ಸಮಯದಲ್ಲಿ | ವಾಹನದ ಮೌಲ್ಯದ ಮೇಲೆ ಶೇ. 9 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 10 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 12 ರಷ್ಟು |
| ಬಿ | ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ | | | |

| | | | | |
|---|---|---|---|---|
| 1 | 2 ವರ್ಷಗಳಿಗೆ ಮೀರದ | 93% | 93% | 93% |
| 2 | 2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ | 87% | 87% | 87% |
| 3 | 3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ | 81% | 81% | 81% |
| 4 | 4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ | 75% | 75% | 75% |
| 5 | 5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ | 69% | 69% | 69% |
| 6 | 6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ | 64% | 64% | 64% |
| 7 | 7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ | 59% | 59% | 59% |
| 8 | 8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ | 54% | 54% | 54% |
| 9 | 9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ | 49% | 49% | 49% |
| 10 | 10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ | 45% | 45% | 45% |

| | | | | |
|---|---|---|---|---|
| 11 | 11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ | 41% | 41% | 41% |
| 12 | 12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ | 37% | 37% | 37% |
| 13 | 13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ | 33% | 33% | 33% |
| 14 | 14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ | 29% | 29% | 29% |
| 15 | 15 ವರ್ಷಗಳಿಗೆ ಮೀರಿದ | 25% | 25% | 25% |

ಭಾಗ–ಎ–5

ಕಲಂ 3(1) ನ್ನು ನೋಡಿ

ಮೋಟಾರು ಕಾರುಗಳು, ಜೀಪುಗಳು, ಓಮ್ನಿ ಬಸ್ ಹಾಗೂ ಖಾಸಗೀ ಸೇವಾ ವಾಹನಗಳ ಉದ್ದೇಶಿತ ಜೀವಾವಧಿ ತೆರಿಗೆ

| ಐಟಂ | ವಾಹನ ವರ್ಗ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ವರೆಗೆ ಮೌಲ್ಯ ರೂ.5.00 ಲಕ್ಷ ಮೀರದ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ವರೆಗೆ ಮೌಲ್ಯ ರೂ.5.00 ಲಕ್ಷ ಮೀರಿದ ಆದರೆ ರೂ.10 ಲಕ್ಷ ಮೀರದ | ಮೋಟಾರು ಕಾರುಗಳು ಜೀಪುಗಳು, ಓಮ್ನಿ ಬಸ್ಸುಗಳು ಮತ್ತು ಖಾಸಗೀ ಸೇವಾ ವಾಹನಗಳು ಹೊಂದಿರುವ ನೆಲ ವಿಸ್ತೀರ್ಣ 5 ಚ.ಮೀ ಮೌಲ್ಯ ರೂ.10.00 ಲಕ್ಷ ಮೀರಿದ |
|---|---|---|---|---|
| 1 | 2 | 3 | 4 | 5 |
| ಎ | ಹೊಸ ವಾಹನದ ನೋಂದಣಿ ಸಮಯದಲ್ಲಿ | ವಾಹನದ ಮೌಲ್ಯದ ಮೇಲೆ ಶೇ. 10 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 11 ರಷ್ಟು | ವಾಹನದ ಮೌಲ್ಯದ ಮೇಲೆ ಶೇ. 14 ರಷ್ಟು |
| ಬಿ | ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ | | | |

| | | | | |
|---|---|---|---|---|
| 1 | 2 ವರ್ಷಗಳಿಗೆ ಮೀರದ | 93% | 93% | 93% |
| 2 | 2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ | 87% | 87% | 87% |
| 3 | 3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ | 81% | 81% | 81% |
| 4 | 4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ | 75% | 75% | 75% |
| 5 | 5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ | 69% | 69% | 69% |
| 6 | 6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ | 64% | 64% | 64% |
| 7 | 7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ | 59% | 59% | 59% |
| 8 | 8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ | 54% | 54% | 54% |
| 9 | 9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ | 49% | 49% | 49% |
| 10 | 10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ | 45% | 45% | 45% |
| 11 | 11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ | 41% | 41% | 41% |
| 12 | 12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ | 37% | 37% | 37% |
| 13 | 13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ | 33% | 33% | 33% |
| 14 | 14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ | 29% | 29% | 29% |
| 15 | 15 ವರ್ಷಗಳಿಗೆ ಮೀರಿದ | 25% | 25% | 25% |

ಭಾಗ–ಎ–6

ಕಲಂ 3(1) ನ್ನು ನೋಡಿ

1500 ಕೆಜಿ ಮೀರಿದ ಆದರೆ 3000 ಕೆಜಿ ಹೇರು ಭಾರ ಮೀರದ ಸರಕು ಸಾಗಣೆ ವಾಹನಗಳ ಉದ್ದೇಶಿತ ಜೀವಾವಧಿ ತೆರಿಗೆ

| ಐಟಂ | ವಾಹನ ವರ್ಗ | 1500 ಕೆಜಿ ಮೀರಿದ 2000 ಕೆಜಿ ಮೀರದ ಹೇರು ಭಾರ ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ರೂ. | 2000 ಕೆಜಿ ಮೀರಿದ 3000 ಕೆಜಿ ಮೀರದ ಹೇರು ಭಾರ ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ರೂ. |
|---|---|---|---|
| 1 | 2 | 3 | 4 |
| ಎ | ಹೊಸ ವಾಹನದ ನೋಂದಣಿ ಸಮಯದಲ್ಲಿ | 10000 | 15000 |
| ಬಿ | ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ | | |
| 1 | 2 ವರ್ಷಗಳಿಗೆ ಮೀರದ | 9,300 | 9,300 |
| 2 | 2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ | 8,700 | 8,700 |
| 3 | 3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ | 8,100 | 8,100 |
| 4 | 4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ | 7,500 | 7,500 |
| 5 | 5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ | 6,900 | 6,900 |
| 6 | 6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ | 6,400 | 6,400 |
| 7 | 7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ | 5,900 | 5,900 |
| 8 | 8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ | 5,400 | 5,400 |

| | | | |
|---|---|---|---|
| 9 | 9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ | 4,900 | 4,900 |
| 10 | 10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ | 4,500 | 4,500 |
| 11 | 11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ | 4,100 | 4,100 |
| 12 | 12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ | 3,700 | 3,700 |
| 13 | 13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ | 3,300 | 3,300 |
| 14 | 14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ | 2,900 | 2,900 |
| 15 | 15 ವರ್ಷಗಳಿಗೆ ಮೀರಿದ | 2,500 | 2,500 |

ಭಾಗ – ಬಿ [ಕಲಮು 3(2) ನ್ನು ನೋಡಿ]

| ಕ್ರ ಸಂ. | ಐಟಂ ಸಂ | ವಾಹನದ ವರ್ಗ | ಹಾಲಿ ಪ್ರತಿ ತ್ರೈಮಾಸಿಕ ತೆರಿಗೆ ದರ ರೂ. | | ಐಟಂ ಸಂ. | ವಾಹನದ ವರ್ಗ | ಪ್ರಸ್ತಾಪಿತ ಪ್ರತಿ ತ್ರೈಮಾಸಿಕ ತೆರಿಗೆ ದರ ರೂ. | |
|---|---|---|---|---|---|---|---|---|
| 1 | 5 | ಮೋಟಾರು ವಾಹನಗಳು ಬಾಡಿಗೆ ಅಥವಾ ಸಂಭಾವನೆಗೆ ಓಡಾಡುತ್ತಿದ್ದು ಅದಕ್ಕನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ ಅಟಂಡೆಂಟ್ ಹೊರತುಪಡಿಸಿ) 12 ಜನ ಪ್ರಯಾಣಿಕರಿ ಗಿಂತಲೂ ಹೆಚ್ಚು ಪ್ರಯಾಣಿಕರನ್ನು ಕೊಂಡೊಯ್ಯುವ ಪ್ರತಿ ಪ್ರಯಾಣಿಕರಿಗೆ | 100 | 250 | 5 | ಮೋಟಾರು ವಾಹನಗಳು ಬಾಡಿಗೆ ಅಥವಾ ಸಂಭಾವನೆಗೆ ಓಡಾಡುತ್ತಿದ್ದು ಅದಕ್ಕನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ಅಟಂಡೆಂಟ್ ಹೊರತುಪಡಿಸಿ) 12 ಜನ ಪ್ರಯಾಣಿಕರಿಗಿಂತಲೂ ಹೆಚ್ಚು ಪ್ರಯಾಣಿಕರನ್ನು ಕೊಂಡೊಯ್ಯುವ ಪ್ರತಿ ಪ್ರಯಾಣಿಕರಿಗೆ | 300 | 450 |

| | | | | | | | | |
|---|---|---|---|---|---|---|---|---|
| 2 | 6 | ಮೋಟಾರು ವಾಹನ (ಸುಖಾಸೀನ ಬಸ್) ಬಾಡಿಗೆಗೆ ಅಥವಾ ಸಂಭಾವನೆಗೆ 12 ಜನ ಪ್ರಯಾಣಿಕರನ್ನು ಮೀರಿ ಒಯ್ಯಲು ಹಾಗೂ 1989ನೇ ಕೇಂದ್ರ ಮೋಟಾರು ವಾಹನ ನಿಯಮಾವಳಿಯ ನಿಯಮ 128ಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ (ಚಾಲಕ ಮತ್ತು ನಿರ್ವಾಹಕ/ ಅಟೆಂಡೆಂಟ್ ಹೊರತು ಪಡಿಸಿ) ಪ್ರತಿ ಪ್ರಯಾಣಿಕರಿಗೆ | 400 | 1000 | 6 | ಮೋಟಾರು ವಾಹನ (ಸುಖಾಸೀನ ಬಸ್) ಬಾಡಿಗೆಗೆ ಅಥವಾ ಸಂಭಾವನೆಗೆ 12 ಜನ ಪ್ರಯಾಣಿಕರನ್ನು ಮೀರಿ ಒಯ್ಯಲು ನಿರ್ಮಿಸಲ್ಪಟ್ಟ ಅಥವಾ ಅಳವಡಿಸಿದ ಐಟಂ 5 ರಲ್ಲಿ ತೆರಿಗೆ ವಿಧಿಸಿರುವ ವಾಹನಗಳನ್ನು ಬಿಟ್ಟು (ಚಾಲಕ ಮತ್ತು ನಿರ್ವಾಹಕ/ಅಟೆಂಡೆಂಟ್ ಹೊರತು ಪಡಿಸಿ) ಪ್ರತಿ ಪ್ರಯಾಣಿಕರಿಗೆ | 600 | 1500 |

ಭಾಗ–ಇ

ಕಲಂ 3(5)ನ್ನು ನೋಡಿ

ತಾತ್ಕಾಲಿಕ ನೋಂದಣಿಗಾಗಿ ಬರುವ ವಾಹನಗಳಿಗೆ ಉದ್ದೇಶಿತ ತೆರಿಗೆ ಷೆಡ್ಯೂಲ್

| ಐಟಂ | ವಾಹನ ವರ್ಗ | 30 ದಿನಗಳಿಗೆ ಮೀರದ ಅವಧಿಗೆ |
|---|---|---|
| 1 | 2 | 3 |
| 1 | ಮೋಟಾರು ಸೈಕಲ್/ತ್ರಿಚಕ್ರ ವಾಹನಗಳು | 100.00 |
| 2 | ಲಘು ಮೋಟಾರು ವಾಹನಗಳು ತ್ರಿಚಕ್ರ ವಾಹನಗಳನ್ನು ಹೊರತುಪಡಿಸಿ | 200.00 |
| 3 | ಮಧ್ಯಮ ಪ್ರಯಾಣಿಕ/ಸರಕು ಸಾಗಣೆ ವಾಹನಗಳು | 400.00 |
| 4 | ಭಾರಿ ಪ್ರಯಾಣಿಕ/ಸರಕು ಸಾಗಣೆ ವಾಹನಗಳು | 600.00 |
| 5 | ಒಡಲು ನಿರ್ಮಾಣಗೊಳ್ಳದ ಚಾಸಿಸ್‌ಗಳು | 500.00 |
| 6 | ಇತರೆ ಯಾವುದೇ ವಾಹನಗಳು | 300.00 |